ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 31 ಭಾನುವಾರ 2026

47

ಸಂಪುಟ: 47 | ಸಂಚಿಕೆ: 45 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಮೈಸೂರು ಜಿಪಂ ಮಾಜಿ ಸದಸ್ಯ ಎಸ್.ಮಾದೇಗೌಡರು ಮತ್ತೆ ಜೆಡಿಎಸ್ ಸೇರ್ಪಡೆ

ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ತರುವುದು ಜೆಡಿಎಸ್ ಕಾರ್ಯಕರ್ತರ ಗುರಿಯಾಗಬೇಕು: ಮಾಜಿ ಸಚಿವ ಸಾ.ರಾ.ಮಹೇಶ್ ಕರೆ

■ ಕುಮಾರಸ್ವಾಮಿಗೆ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುವಂತೆ ಒತ್ತಡ ■ ಚಾಮುಂಡೇಶ್ವರಿ ಕ್ಷೇತ್ರದ ಸಂಘಟನೆಗೆ ಸ್ವತಃ ಹೆಚ್‌ಡಿಕೆ ಮಾರ್ಗದರ್ಶನ ■ ಹೆಚ್‌ಡಿಡಿ, ಹೆಚ್‌ಡಿಕೆ ನಾಮಬಲವೇ ನಮಗೆ ಸ್ಫೂರ್ತಿ ■ ಭಿನ್ನಾಭಿಪ್ರಾಯ ಮರೆಯಿರಿ ಒಗ್ಗಟ್ಟು ಪ್ರದರ್ಶಿಸಿ

ಮೈಸೂರು, ಮೇ30(ಬಿಎಲ್‌ಯು)–ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ತರುವುದು ಜೆಡಿಎಸ್ ಕಾರ್ಯಕರ್ತರು ಹಾಗೂ ನಾಯಕರ ಮೂಲ ಗುರಿಯಾಗಬೇಕು ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಕರೆ ನೀಡಿದರು.

ಮೈಸೂರಿನ ಎಂಪ್ರೋ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಎಸ್.ಮಾದೇಗೌಡ ಹಾಗೂ ಮಾಜಿ ಮೇಯರ್ ರುಕ್ಮಿಣಿ ಮಾದೇಗೌಡ ಅವರನ್ನು ಜೆಡಿಎಸ್‌ಗೆ ಮರು ಸೇರ್ಪಡೆ ಮಾಡಿಕೊಂಡ ನಂತರ ಮಾತನಾಡಿದ ಅವರು, ಸಮ್ಮಿಶ್ರ ಸರ್ಕಾರವನ್ನು ಅಸ್ತಿತ್ವಕ್ಕೆ ತರುವ ಮೂಲಕ ಹೆಚ್.ಡಿ.ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರ ಕೈ ಬಲಪಡಿಸಬೇಕು ಎಂದು ಸಲಹೆ ನೀಡಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಯಾರ ಮುಂದಾಳತ್ವವೂ ಇಲ್ಲ. ಇಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರ ಮಾರ್ಗದರ್ಶನ ಹಾಗೂ ಸಲಹೆ ಮೇರೆಗೆ ಪಕ್ಷ ಸಂಘಟನೆ ಆಗುತ್ತಿದೆ. ಯಾರ ಪ್ರತಿಷ್ಠೆಯೂ ಇಲ್ಲದೆ ಪಕ್ಷ ಶಕ್ತಿಯುತವಾಗಿ ಸಂಘಟನೆಗೊಳ್ಳುತ್ತಿದೆ ಎಂದು ಸಾ.ರಾ.ಮಹೇಶ್ ಸ್ಪಷ್ಟಪಡಿಸಿದರು.

ಹೆಚ್.ಡಿ.ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರ ನಾಮಬಲದಿಂದ ಪಕ್ಷ ಚೈತನ್ಯಪೂರ್ಣವಾಗಿ ಬೆಳವಣಿಗೆ ಸಾಧಿಸುತ್ತಿದೆ. ನಿಖಿಲ್ ಕುಮಾರಸ್ವಾಮಿ ಅವರ ರಾಜ್ಯ ಪ್ರವಾಸದಿಂದ ಪಕ್ಷಕ್ಕೆ ಮತ್ತಷ್ಟು ಬಲ ಬಂದಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಕಾರ್ಯಕರ್ತರು ಹೆಚ್.ಡಿ.ಕುಮಾರಸ್ವಾಮಿ ಅವರ ಮೇಲೆ ಒತ್ತಡ ಹೇರುತ್ತಿದ್ದಾರೆ. ಮಾದೇಗೌಡರು ಹೊಸ ದಾಗೇನು ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿಲ್ಲ. ಬದಲಿಗೆ ಪಕ್ಷಕ್ಕೆ ಮರಳಿ ಬರುತ್ತಿದ್ದಾರೆ. ಸ್ವಾಭಿಮಾನಕ್ಕೆ ಧಕ್ಕೆ ಆಯಿತೆಂದು ಪಕ್ಷ ತ್ಯಜಿಸಿದ್ದರು. ಆದರೆ, ಇಂದು ಹೆಚ್.ಡಿ. ಕುಮಾರಸ್ವಾಮಿ ಅವರ ನಾಯಕತ್ವವನ್ನು ಬೆಂಬಲಿಸಿ ಯಾವುದೇ ಷರತ್ತು ಇಲ್ಲದೆ ಮರಳಿ ಪಕ್ಷಕ್ಕೆ ಬಂದಿದ್ದಾರೆ. ರಮ್ಮನಹಳ್ಳಿ, ಆಲನಹಳ್ಳಿ, ನಾಡನಹಳ್ಳಿ, ಹಂಚ್ಯಾ ಸೇರಿದಂತೆ ಹಲವು ಭಾಗಗಳ ಮಾದೇಗೌಡರ ಬೆಂಬಲಿಗರು ಕೂಡ ಜೆಡಿಎಸ್ ಸೇರಿದ್ದು, ಎಲ್ಲರೂ ಜೆಡಿಎಸ್ ಅನ್ನು ಮತ್ತಷ್ಟು ಗಟ್ಟಿಗೊಳಿಸಿ, ಅಧಿಕಾರಕ್ಕೆ ತರಬೇಕು ಎಂದು ಸಾರಾ ಮಹೇಶ್ ಹೇಳಿದರು.





ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಜಿ.ಪಂ. ಮಾಜಿ ಸದಸ್ಯ ಎಸ್.ಮಾದೇಗೌಡ ದಂಪತಿಗೆ ಜೆಡಿಎಸ್ ಬಾವುಟ ನೀಡಿ ಪಕ್ಷಕ್ಕೆ ಮತ್ತೆ ಸೇರ್ಪಡೆ ಮಾಡಿಕೊಂಡರು. ಈ ವೇಳೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಇನ್ನಿತರ ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.

ಪಕ್ಷ ನನಗೆ ಅಧಿಕಾರ ನೀಡಿದೆ: ಮೂಲತಃ ರೈತ ಕುಟುಂಬದವನಾದ ನಾನು ಯುವಕನಾಗಿದ್ದಾಗಿನಿಂದಲೂ ತಳಮಟ್ಟದಿಂದ ಜೆಡಿಎಸ್ ಸಂಘಟನೆ ಮಾಡಿದೆ. ಇದರಿಂದ ನಾನು ಜಿಲ್ಲಾ ಪಂಚಾಯತ್ ಸದಸ್ಯನಾಗಿ, ರುಕ್ಮಿಣಿ ಅವರು ಮೇಯರ್ ಆಗಿದ್ದರು. ನಾವು ದುಡಿಮೆ ಮಾಡಿರುವುದನ್ನು ಗುರುತಿಸಿ ಪಕ್ಷ ನಮಗೆ ಅಧಿಕಾರ ನೀಡಿದೆ ಎಂದು ಎಸ್.ಮಾದೇಗೌಡ ತಿಳಿಸಿದರು. ನಾನು ಮಾತ್ರವಲ್ಲದೆ ನನ್ನ ಅಪಾರ ಬೆಂಬಲಿಗರು ಇಂದು ಕಾಂಗ್ರೆಸ್ ಬಿಟ್ಟು ಜೆಡಿಎಸ್‌ಗೆ ಬಂದಿದ್ದಾರೆ. ನಾವೆಲ್ಲರೂ ಸೇರಿ ಪಕ್ಷ ಸಂಘಟನೆ ಮಾಡಿ ಅಧಿಕಾರಕ್ಕೆ ತರುತ್ತೇವೆ ಎಂದು ಮಾದೇಗೌಡರು ಆಶ್ವಾಸನೆ ನೀಡಿದರು.

ಹೆಚ್ಚು ಸ್ಥಾನ ಬರುತ್ತೆ: ಮುಂದಿನ 2028ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಹೆಚ್ಚು ಸ್ಥಾನ ಪಡೆಯುವುದರಲ್ಲಿ ಯಾವುದೇ ಸಂದೇಹ ಬೇಡ. ಗ್ರಾಮ ವಾಸ್ತವ್ಯದ ಮೂಲಕ ಗ್ರಾಮೀಣ ಪ್ರದೇಶದ ಅಭಿವೃದ್ಧಿಯಲ್ಲಿ ಕ್ರಾಂತಿ ಮಾಡಿದ ಹೆಚ್.ಡಿ.ಕುಮಾರಸ್ವಾಮಿ ಅವರ ಆಡಳಿತವನ್ನು ಜನರು ಬಯಸುತ್ತಿದ್ದು, ಇದು ಸಾಕಾರಗೊಳ್ಳಲಿದೆ ಎಂದು ಮಾಜಿ ಕಾರ್ಪೊರೇಟರ್ ಪ್ರೇಮ ಶಂಕರೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಕೆಲವು ರಾಜಕೀಯ ಕಾರಣಗಳಿಂದ ಮಾದೇಗೌಡರು ಜೆಡಿಎಸ್ ಬಿಟ್ಟಿದ್ದರು. ದೈಹಿಕವಾಗಿ ಮಾದೇಗೌಡರು ಪಕ್ಷ ಬಿಟ್ಟಿದ್ದರೆ ಹೊರತು ಮಾನಸಿಕವಾಗಿ ಇಲ್ಲೇ ಇದ್ದರು. ಈಗ ಮಾದೇಗೌಡರು ಮರಳಿ ಪಕ್ಷಕ್ಕೆ ಬಂದಿರುವುದರಿಂದ ಜೆಡಿಎಸ್‌ಗೆ ಮತ್ತಷ್ಟು ಬಲ ಬಂದಿದೆ ಎಂದರು. ಸಾ.ರಾ.ಮಹೇಶ್ ಅವರು ಮಾದೇಗೌಡ ಹಾಗೂ ರುಕ್ಮಿಣಿ ಮಾದೇಗೌಡರಿಗೆ ಜೆಡಿಎಸ್ ಬಾವುಟ ನೀಡಿ ಪಕ್ಷಕ್ಕೆ ಬರಮಾಡಿಕೊಂಡರು. ಈ ವೇಳೆ ಮಾದೇಗೌಡರ ಅಪಾರ ಬೆಂಬಲಿಗರು ಕೂಡ ಜೆಡಿಎಸ್ ಸೇರ್ಪಡೆಯಾದರು. ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜಿಪಂ ಮಾಜಿ ಸದಸ್ಯರಾದ ದ್ವಾರಕೀಶ್, ಅಮಿತ್, ಬೆಳವಾಡಿ ಗ್ರಾಪಂ ಮಾಜಿ ಅಧ್ಯಕ್ಷ ಶಿವಮೂರ್ತಿ, ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಮುಖಂಡರಾದ ಸಂತೋಷ್, ಸೋಮಶೇಖರ್ ಇತರರು ವೇದಿಕೆಯಲ್ಲಿದ್ದರು.

> “ನಮಗೆ ಪಕ್ಷ ತಾಯಿ ಇದ್ದಂತೆ. ಮಾತೃ ವಾತ್ಸಲ್ಯದ ಪಕ್ಷವನ್ನು ನಾವು ಪ್ರೀತಿಯಿಂದ ಕಾಣಬೇಕು. ಯಾವುದೇ ಭಿನ್ನಾಭಿಪ್ರಾಯ ಇದ್ದರೂ ಅದನ್ನು ಸರಿಪಡಿಸಿಕೊಂಡು ಒಗ್ಗಟ್ಟು ಪ್ರದರ್ಶಿಸಬೇಕು.
> –ಸಾ.ರಾ.ಮಹೇಶ್, ಮಾಜಿ ಸಚಿವ

> “ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿ ನೋಡಿ ಬೇಸತ್ತ ಕಾಂಗ್ರೆಸ್‌ನವರು ಜೆಡಿಎಸ್‌ಗೆ ಸೇರ್ಪಡೆ ಆಗುತ್ತಿದ್ದಾರೆ. ಈ ಮೂಲಕ ಈಗ ಜೆಡಿಎಸ್ ಸೇರ್ಪಡೆ ಪರ್ವ ಆರಂಭವಾಗಿದೆ. ಈ ಬೆಳವಣಿಗೆಯಿಂದ ಪಕ್ಷ ಮತ್ತಷ್ಟು ಬಲಗೊಳ್ಳುತ್ತಿದೆ.
> –ಸಿ.ಎನ್.ಮಂಜೇಗೌಡ, ವಿಧಾನಪರಿಷತ್ ಸದಸ್ಯ

> “ಕೆಲವು ಕಾರಣಗಳಿಂದ ನಾನು ಜೆಡಿಎಸ್ ತ್ಯಜಿಸಬೇಕಾಯಿತು. ಆದರೆ ಈಗ ಮರಳಿ ಪಕ್ಷಕ್ಕೆ ಬಂದಿದ್ದೇನೆ. ಈ ಮೂಲಕ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪಕ್ಷವನ್ನು ಮತ್ತಷ್ಟು ಸಂಘಟಿಸಿ ಹೆಚ್.ಡಿ.ದೇವೇಗೌಡರು ಹಾಗೂ ಹೆಚ್.ಡಿ. ಕುಮಾರಸ್ವಾಮಿ ಅವರ ಕೈ ಬಲಪಡಿಸುವೆ.
> –ಎಸ್.ಮಾದೇಗೌಡ, ಜಿಪಂ ಮಾಜಿ ಸದಸ್ಯ

ಮೇಕೆದಾಟು ಯೋಜನೆ ಜಾರಿ ಡಿ.ಕೆ.ಶಿವಕುಮಾರ್‌ಗೆ ಸವಾಲು



ಮೈಸೂರು, ಮೇ 30(ಬಿಎಲ್‌ಯು)–ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಅಣೆಕಟ್ಟು ನಿರ್ಮಾಣ ಮುಖ್ಯಮಂತ್ರಿ ಆಗಲಿರುವ ಡಿ.ಕೆ.ಶಿವಕುಮಾರ್ ಅವರಿಗೆ ದೊಡ್ಡ ಸವಾಲಾಗಿದೆ.

ಅಧಿಕಾರಕ್ಕೆ ಬರುವ ಮುನ್ನ ಚುನಾವಣೆ ವೇಳೆ ಡಿ.ಕೆ.ಶಿವಕುಮಾರ್ ಅವರು ಮೇಕೆದಾಟು ಅಸ್ತ್ರ ಬಳಸಿದ್ದರು. ಈ ಯೋಜನೆಗಾಗಿ ಪಾದಯಾತ್ರೆ ಕೂಡ ಮಾಡಿದ್ದರು. ಆದರೆ ಸ್ವತಃ ಜಲ ಸಂಪನ್ಮೂಲ ಸಚಿವರಾಗಿದ್ದರೂ ಈ ಯೋಜನೆ ಅನುಷ್ಠಾನಗೊಳಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆದರೆ, ಈಗ ಶಕ್ತಿ ಕೇಂದ್ರ ವಿಧಾನಸೌಧದ 3ನೆ ಮಹಡಿಯಲ್ಲಿ ಮುಖ್ಯಮಂತ್ರಿ ಸ್ಥಾನದ ಗದ್ದುಗೆ ಅಲಂಕರಿಸುವ ಡಿ.ಕೆ.ಶಿವಕುಮಾರ್ ಅವರು ಮೇಕೆದಾಟು ಯೋಜನೆ ಅನುಷ್ಠಾನಗೊಳಿಸಿ ಕೊಟ್ಟ ಮಾತು ಉಳಿಸಿಕೊಳ್ಳುವರೇ ಎಂಬ ಕುತೂಹಲ ಮೂಡಿದೆ.

ತಮಿಳುನಾಡಿನಲ್ಲಿ ಕಾಂಗ್ರೆಸ್ ಮತ್ತು ಟಿವಿಕೆ ಮೈತ್ರಿ ಪಕ್ಷದ ಸರ್ಕಾರ ಅಸ್ತಿತ್ವದಲ್ಲಿದೆ. ಈಗ ಡಿ.ಕೆ.ಶಿವಕುಮಾರ್ ಅವರು ವಿಜಯ್ ಅವರನ್ನು ಓಲೈಸಿ ಮೇಕೆದಾಟು ಯೋಜನೆಗೆ ಇರುವ ಅಡ್ಡಿ–ಆತಂಕಗಳನ್ನು ನಿವಾರಣೆ ಮಾಡುವರೇ ಎಂದು ಕಾದು ನೋಡಬೇಕು.

ಒಂದು ವೇಳೆ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಿಯೂ ಈ ಯೋಜನೆ ಸಾಕಾರಗೊಳಿಸಲಿಲ್ಲ ಅಂದರೆ ಚುನಾವಣೆಯಲ್ಲಿ ಲಾಭ ಪಡೆಯಲು ಮಾತ್ರ ಮೇಕೆದಾಟು ಯೋಜನೆ ಹೆಸರು ಬಳಕೆ ಮಾಡಿಕೊಂಡಿದ್ದಾರೆ ಎಂಬ ಅಭಿಪ್ರಾಯ ಜನರಲ್ಲಿ ಮೂಡುತ್ತದೆ.

ಮೇಕೆದಾಟು ಯೋಜನೆ ಸಂಬಂಧ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ಕಳೆದ 4 ದಿನಗಳ ಹಿಂದೆ ವಜಾಗೊಳಿಸಿದೆ. ಇದರಿಂದ ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಸುಲಭ ದಾರಿಯಾಗಿದೆ. ಆದರೆ ಡಿ.ಕೆ.ಶಿವಕುಮಾರ್ ಯಾವ ರೀತಿಯ ಇಚ್ಛಾಸಕ್ತಿ ಪ್ರದರ್ಶಿಸುತ್ತಾರೆ ಎಂಬುದನ್ನು ಕಾದು ನೋಡಬೇಕು.

ಇಂದು ರಾಜ್ಯ ಒಕ್ಕಲಿಗರ ಸಂಘದ ಸರ್ವ ಸದಸ್ಯರ ಸಭೆ

ಮೈಸೂರು: ರಾಜ್ಯ ಒಕ್ಕಲಿಗರ ಸಂಘದ 2014–2025ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ಮೇ 31ರಂದು ಬೆಳಗ್ಗೆ 11 ಗಂಟೆಗೆ ಹಾಗೂ ವಿಶೇಷ ಸರ್ವ ಸದಸ್ಯರ ಸಭೆಯನ್ನು ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ಅರಮನೆ ಮೈದಾನದ ಗಾಯಿತ್ರಿ ವಿಹಾರ ಮತ್ತು ಗಾಯಿತ್ರಿ ವೃಕ್ಷ ಗೇಟ್ ನಂ.4ರ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ ತಿಳಿಸಿದ್ದಾರೆ.

ಪೊನ್ನಣ್ಣರಿಗೆ ಸಚಿವ ಸ್ಥಾನ ನೀಡುವಂತೆ ಮೈಸೂರು ಕೊಡವ ಸಮಾಜ ಆಗ್ರಹ

ಮೈಸೂರು, ಮೇ 30– ಕೊಡಗು ಜಿಲ್ಲೆ, ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರಿಗೆ ಸಂಪುಟ ದರ್ಜೆಯ ಸಚಿವ ಸ್ಥಾನ ನೀಡಬೇಕೆಂದು ಮೈಸೂರು ಕೊಡವ ಸಮಾಜ ಒಕ್ಕೊರಲಿನಿಂದ ಒತ್ತಾಯಿಸಿದೆ.



ಎ.ಎಸ್.ಪೊನ್ನಣ್ಣ

ಈ ಕುರಿತು ಮೈಸೂರು ಕೊಡವ ಸಮಾಜದ ಅಧ್ಯಕ್ಷರು, ಆಡಳಿತ ಮಂಡಳಿ ಹಾಗೂ ಸರ್ವ ಸದಸ್ಯರು ಜಂಟಿ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ತಮ್ಮ ಬೇಡಿಕೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುವಂತೆ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಅಲ್ಪಸಂಖ್ಯಾತ ಜನಾಂಗಕ್ಕೆ ಪ್ರಾತಿನಿಧ್ಯ: ಕೊಡವ ಸಮುದಾಯವು ಜನಸಂಖ್ಯೆಯ ದೃಷ್ಟಿಯಿಂದ ಅತ್ಯಂತ ಕನಿಷ್ಠ ಸಂಖ್ಯೆಯಲ್ಲಿರುವ, ಸಾಂಸ್ಕೃತಿಕವಾಗಿ ವಿಶಿಷ್ಟ ಹಾಗೂ ಅತೀ ಸೂಕ್ಷ್ಮ ಜನಾಂಗವಾಗಿದೆ. ರಾಜಕೀಯವಾಗಿ ಈ ಜನಾಂಗಕ್ಕೆ ಸೂಕ್ತ ಪ್ರಾತಿನಿಧ್ಯ ಸಿಗಬೇಕಾದರೆ ಅರ್ಹ ನಾಯಕರಾದ ಎ.ಎಸ್.ಪೊನ್ನಣ್ಣ ಅವರಿಗೆ ಸಚಿವ ಸ್ಥಾನ ನೀಡುವುದು ಅತ್ಯಗತ್ಯ ಎಂದು ಸಮಾಜ ಅಭಿಪ್ರಾಯಪಟ್ಟಿದೆ.

ಅರ್ಹತೆ ಮತ್ತು ನಾಯಕತ್ವ: ಎ.ಎಸ್.ಪೊನ್ನಣ್ಣ ಅವರು ಕಾನೂನು ತಜ್ಞರಾಗಿ, ಸಾರ್ವಜನಿಕ ರಂಗದಲ್ಲಿ ಸುದೀರ್ಘ ಅನುಭವ ಹೊಂದಿರುವ ಪ್ರಬಲ ನಾಯಕರಾಗಿದ್ದಾರೆ. ಇವರಿಗೆ ಸಂಪುಟ ದರ್ಜೆಯ ಜವಾಬ್ದಾರಿ ನೀಡುವುದರಿಂದ ಕೇವಲ ಕೊಡಗು ಜಿಲ್ಲೆಯಷ್ಟೇ ಅಲ್ಲದೆ, ಇಡೀ ರಾಜ್ಯದ ಅಭಿವೃದ್ಧಿಗೆ ಮತ್ತು ಮೈಸೂರು ಸೇರಿದಂತೆ ವಿವಿಧೆಡೆ ಹರಡಿಕೊಂಡಿರುವ ಕೊಡವ ಬಾಂಧವರ ಹಿತರಕ್ಷಣೆಗೂ ದೊಡ್ಡ ಶಕ್ತಿ ಸಿಕ್ಕಂತಾಗುತ್ತದೆ. ಪಕ್ಷದ ವರಿಷ್ಠರು ಹಾಗೂ ಹಿರಿಯ ನಾಯಕರು ಕೊಡವ ಜನಾಂಗದ ಈ ಆಶಯ ಹಾಗೂ ಭಾವನೆಗಳನ್ನು ಗೌರವಿಸಿ, ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರಿಗೆ ಸೂಕ್ತ ಸ್ಥಾನಮಾನ ಕಲ್ಪಿಸಿಕೊಡಬೇಕೆಂದು ಒತ್ತಾಯಿಸಿದ್ದಾರೆ.

ನಿಧನ



ಅಲೈಸ್ ಜೋಸೆಫ್

ಮೈಸೂರು,ಮೇ 30–ದಿವಂಗತ ಪ್ರೊ.ಕೆ.ವಿ.ಜೋಸೆಫ್ ಅವರ ಪತ್ನಿ ಅಲೈಸ್ ಜೋಸೆಫ್ (93) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಎನ್.ಆರ್.ಮೊಹಲ್ಲಾದ ಅವರ ನಿವಾಸ 'ಅನ್ ವಿಲ್ಲಾ'ದಲ್ಲಿ ಜೂನ್ 1ರಂದು ಬೆಳಗ್ಗೆ 7.30ರಿಂದ 10.30ರವರೆಗೆ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ಅಂತ್ಯಕ್ರಿಯೆ ಅಂದು ಬೆಳಗ್ಗೆ 11.30ಕ್ಕೆ ಮೈಸೂರಿನ ಗಾಂಧಿನಗರದ ರೋಮನ್ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್‌ಐಆರ್ ಪ್ರಕ್ರಿಯೆ ವಿರೋಧಿಸಿ ಡಿಸಿ ಕಚೇರಿ ಮುಂದೆ ಪ್ರತಿಭಟನೆ

ಮೈಸೂರು, ಮೇ30(ಜಿಎ)–ಮತದಾರರ ಪಟ್ಟಿಯಿಂದ ಒಬ್ಬ ಅರ್ಹ ಮತದಾರರೂ ಹೊರಗುಳಿಯದಂತೆ ನೋಡಿಕೊಳ್ಳಲು ಹಾಲಿ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಅಗತ್ಯ ಬದಲಾವಣೆಗಳನ್ನು ಜಾರಿಗೆ ತರಬೇಕೆಂದು ಆಗ್ರಹಿಸಿ ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟ ಕರ್ನಾಟಕದ ವತಿಯಿಂದ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಎಸ್‌ಐಆರ್ ಪ್ರಕ್ರಿಯೆಯು ಸಂವಿಧಾನ ವಿರೋಧಿ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ತರುವ ಕ್ರಮವಾಗಿದೆ. ಈ ಪ್ರಕ್ರಿಯೆಯು ಮಹಿಳೆಯರು, ವಲಸೆ ಕಾರ್ಮಿಕರು, ಅಲೆಮಾರಿ ಸಮುದಾಯಗಳು, ಆದಿವಾಸಿಗಳು, ದಲಿತರು ಮತ್ತು ಅಲ್ಪಸಂಖ್ಯಾತರನ್ನು ಮತದಾನದ ಹಕ್ಕಿನಿಂದ ವಂಚಿಸುವ ಅಪಾಯವನ್ನು ಹೊಂದಿದೆ ಎಂದು ಪ್ರತಿಭಟನಾಕಾರರು ಕಳವಳ ವ್ಯಕ್ತಪಡಿಸಿದರು.



ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟದಿಂದ ಮೈಸೂರಿನ ಡಿಸಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.


ಕೆಲವು ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಪರಿಣಾಮವಾಗಿ ಕೋಟ್ಯಂತರ ಮತದಾರರ ಹೆಸರುಗಳು ಮತದಾರರ ಪಟ್ಟಿಯಿಂದ ಕೈಬಿಡಲ್ಪಟ್ಟಿವೆ. ಕರ್ನಾಟಕದಲ್ಲಿಯೂ ಇದೇ ರೀತಿಯ ಪರಿಸ್ಥಿತಿ ನಿರ್ಮಾಣವಾಗದಂತೆ ಎಚ್ಚರಿಕೆ ವಹಿಸಬೇಕೆಂದು ಒತ್ತಾಯಿಸಿ, ಮತದಾರರ ಪಟ್ಟಿಯ ಪರಿಷ್ಕರಣೆಗೆ ತಮ್ಮ ಬೆಂಬಲವಿದ್ದರೂ, ದೋಷಪೂರಿತ ಮತ್ತು ಅಪಾರದರ್ಶಕ ವಿಧಾನಗಳನ್ನು ಅನುಸರಿಸುವುದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

'ಲಾಜಿಕಲ್ ಡಿಸ್ಕ್ರಿಪೆನ್ಸಿ' ಎಂಬ ಅವೈಜ್ಞಾನಿಕ ಮತ್ತು ಅಪಾರದರ್ಶಕ ವಿಧಾನವನ್ನು ರಾಜ್ಯದಲ್ಲಿ ಅಳವಡಿಸಬಾರದು. ಮತದಾರರ ಪಟ್ಟಿಯನ್ನು ಸಾರ್ವಜನಿಕರಿಗೆ ಸುಲಭವಾಗಿ ಪರಿಶೀಲಿಸಬಹುದಾದ ಕಂಪ್ಯೂಟರ್ ರೀಡಬಲ್ ರೂಪದಲ್ಲಿ ಪ್ರಕಟಿಸಬೇಕು. ಕರಡು ಮತದಾರರ ಪಟ್ಟಿಯನ್ನು ಗ್ರಾಮ ಪಂಚಾಯಿತಿ ಮತ್ತು ವಾರ್ಡ್ ಮಟ್ಟದಲ್ಲಿ ಬಹಿರಂಗವಾಗಿ ಪ್ರಕಟಿಸಿ ಸಾರ್ವಜನಿಕ ಪರಿಶೀಲನೆಗೆ ಅವಕಾಶ ಕಲ್ಪಿಸಬೇಕು. ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯನ್ನು ಗಡಿಬಿಡಿಯಲ್ಲಿ ನಡೆಸದೆ, ಕನಿಷ್ಠ ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಕೇಂದ್ರ ಚುನಾವಣಾ ಆಯೋಗಕ್ಕೆ ಆಗ್ರಹಿಸಿದರು.

ವಿವಾಹಿತ ಮಹಿಳೆಯರು, ವಲಸೆ ಕಾರ್ಮಿಕರು, ವಿದ್ಯಾರ್ಥಿಗಳು, ಅಲೆಮಾರಿಗಳು, ಆದಿವಾಸಿಗಳು, ದಲಿತರು ಹಾಗೂ ಬಡ ಅಲ್ಪಸಂಖ್ಯಾತರು ದಾಖಲೆಗಳ ಕೊರತೆಯಿಂದ ಮತದಾನದ ಹಕ್ಕಿನಿಂದ ವಂಚಿತರಾಗದಂತೆ ವಿಶೇಷ ಮತ್ತು ಸರಳ ಕ್ರಮಗಳನ್ನು ರೂಪಿಸಬೇಕು. ಪ್ರಜಾತಾಂತ್ರಿಕ ಮೌಲ್ಯಗಳಿಗೆ ಧಕ್ಕೆ ತರುವ ಯಾವುದೇ ಕ್ರಮವನ್ನು ಕರ್ನಾಟಕದ ಜನತೆ ಒಪ್ಪುವುದಿಲ್ಲ. ಚುನಾವಣಾ ಆಯೋಗವು ಈ ಆಗ್ರಹಗಳನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಬದಲಾವಣೆಗಳನ್ನು ಜಾರಿಗೆ ತರಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ತೀವ್ರ ಹೋರಾಟ ರೂಪುಗೊಳ್ಳಲಿದೆ ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಈ ವಿಷಯಗಳನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುವಂತೆ ಜಿಲ್ಲಾಡಳಿತದ ಮೂಲಕ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಪ್ರಗತಿಪರ ಚಿಂತಕ ಕೆಕಾಳಚನ್ನೇಗೌಡ, ಡಾ.ಎಂ.ಪಿ. ಪೂರ್ಣಾನಂದ, ಡಾ.ಮಹೇಶ ದಳಪತಿ, ಸವಿತಾ ಪ.ಮಲ್ಲೇಶ್, ಪಂಡಿತರಾಧ್ಯ, ಎಂ.ಎಫ್.ಕಲಿಮ್, ಟಿ.ಗುರುರಾಜ್, ಪಿ.ಮರಂಕಯ್ಯ, ಕೆ.ಬಸವರಾಜ್, ಸಬಿಹಾ ಭೂಮಿಗೌಡ, ಭೂಮಿಗೌಡ, ಶ್ರೀನಿವಾಸ್ ಕಂದೇಗಾಲ, ಅಮ್ಜದ್ ಖಾನ್, ಎಸ್. ಸ್ವಾಮಿ, ಬಂಗವಾದಿ ನಾರಾಯಣಸ್ವಾಮಿ, ಸಾನಿಯ ಭಾನು, ಜರೀನಾ ಭಾನು, ಕೆಆರ್. ಗೋಪಾಲಕೃಷ್ಣ, ಫೈರೋಜ್ ಉಲ್ಲಾ ಶರೀಫ್, ಬಸವರಾಜು, ಶಿವಣ್ಣ, ಕಮಲ್ ಗೋಪಿನಾಥ್, ಲಕ್ಷ್ಮಮ್ಮ, ಪ್ರಭಾಕರ್, ಚಂದ್ರಶೇಖರ್, ಮಹೇಶ್ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.5.2026 ಭಾನುವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಅನೂರಾಧ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ**: ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಸರ್ವಕಲಾ ಸೇವಾ ಟ್ರಸ್ಟ್, ಪಂಚಾಯತ್ ಗ್ರಾಮೀಣಾಭಿವೃದ್ಧಿ ರೈತರ ಸೇವಾ ಸಮಿತಿ**: ರಾಷ್ಟ್ರ ಮಟ್ಟದ ಸಪ್ತಸ್ವರ ಕರೋಕೆ ಗಾಯನ ಸೀಸನ್–3 ಕಾರ್ಯಕ್ರಮ, ಸಾನ್ನಿಧ್ಯ: ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಸ್ವಾಮೀಜಿ, ಆಧ್ಯಾತ್ಮಿಕ ಚಿಂತಕ ಶ್ರೀ ರಮಾನಂದ ಗುರೂಜಿ, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ.ದೇವೇಗೌಡ, ಸ್ಥಳ: ಅನಂತೇಶ್ವರ ಭವನ, ಹೂಟಗಳ್ಳಿ, ಬೆಳಗ್ಗೆ 10.30ಕ್ಕೆ.

■ **ಕಲಾಸುರುಚಿ** : ಸಾಹಿತ್ಯ ಚಾವಡಿ ಕಾರ್ಯಕ್ರಮ –168, ಲೇಖಕರು, ಅನುವಾದಕರು ಹಾಗೂ ಸಂಪಾದಕರಾದ ಹರಿ ರವಿಕುಮಾರ್ ಅವರಿಂದ ಮಹಾಭಾರತದ ಪಾತ್ರಗಳ ಅಂತರಾಳ ಕುರಿತು ಭಾಷಣ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ** : ಶತಮಾನೋತ್ಸವ ಸಂಭ್ರಮ ಕಾರ್ಯಕ್ರಮ, ಬೆಳಗ್ಗೆ 8 ಗಂಟೆಗೆ ಲೋಕ ಕಲ್ಯಾಣಾರ್ಥವಾಗಿ 180ಕ್ಕೂ ಹೆಚ್ಚು ದಂಪತಿಯಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ, ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ, ಪುರಸ್ಕಾರ, ಸ್ಥಳ: ಸಾ.ರಾ.ಕನ್ವೆನ್ಷನ್ ಹಾಲ್, ದಟ್ಟಗಳ್ಳಿ, ಬೆಳಗ್ಗೆ 11ಕ್ಕೆ

■ **ಪರಿವರ್ತನ ಬಿಸಿನೆಸ್ ಸ್ಕೂಲ್** : ಯೀಲ್ಡ್ ಮ್ಯಾಟ್ರಿಕ್ಸ್ ತಂಡದ ವತಿಯಿಂದ ಕೃಷಿ ಸಮೃದ್ಧಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕರ್ನಾಟಕದ ಹಳ್ಳಿಕಾರ್ ಸಂಘದ ಅಧ್ಯಕ್ಷ ವರ್ತೂರ್ ಸಂತೋಷ್, ವರಕೋಡು ಪೇಪರ್ ಬೋರ್ಡ್ ಮಾಲೀಕ ಮುರಳಿ, ಓಂ ಶ್ರೀನಿಕೇತನ ಟ್ರಸ್ಟ್ ಅಧ್ಯಕ್ಷ ಡಾ.ಪುಟ್ಟೇಗೌಡ, ಮಂಜುರಾಮ್, ಪ್ರೊರಾಮು, ಪ್ರಿನ್ಸಿಪಾಲ್ ಡಾ.ರಘುನಂದನ್, ಸ್ಥಳ: ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ವರಕೋಡು, ಮಧ್ಯಾಹ್ನ 12ಕ್ಕೆ.

■ **ಕರ್ನಾಟಕ ದಲಿತ ಸಂಘರ್ಷ ಸಮಿತಿ, ಅಶೋಕಪುರಂ ಫ್ರೆಂಡ್ಸ್ ಬಳಗ:** ನಾಡಕುಸ್ತಿ ಪಂದ್ಯಾವಳಿ, ಉಪಸ್ಥಿತರು: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಗುರುಲಿಂಗ ಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ, ನಟ ದುನಿಯಾ ವಿಜಯ್, ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಪುರುಷೋತ್ತಮ್, ದಲಿತ ಮುಖಂಡ ವಿ.ರಾಮಸ್ವಾಮಿ, ಬಿ.ಸಿದ್ದರಾಜು, ಅಹಿಂದ ಜವರಪ್ಪ ಸ್ಥಳ: ಡಿ.ದೇವರಾಜ ಅರಸು ಕ್ರೀಡಾಂಗಣ, ಸಂಜೆ 4ಕ್ಕೆ

■ **ಸುಯೋಗ್ ಆಸ್ಪತ್ರೆ ಸಾಂಸ್ಕೃತಿಕ ವಿಭಾಗ, ಮೈಸೂರು ಹಾಗೂ ಕನ್ನಡ ಸಾಹಿತ್ಯ ಕಲಾಕೂಟ** : ಹಿರಿಯ ಲೇಖಕ, ವೈದ್ಯರಾದ ಡಾ. ಭಿ. ನಾಗರಾಜ್ ಅವರ ಇಂಗ್ಲಿಷ್ ಕೃತಿ 'ಡೀಪ್ ಡೈವ್ (Deep Dive)' ಲೋಕಾರ್ಪಣೆ ಸಮಾರಂಭ, ಉಪಸ್ಥಿತರು : ಕವಿ ಡಾ. ಎಚ್.ಪಿ. ಯೋಗಾನಂದ, ಗಾಯಕ ಡಾ. ಬಿ.ಗುರುಮೂರ್ತಿಸ್ವಾಮಿ, ಪ್ರಾಧ್ಯಾಪಕರಾದ ಶ್ರೀಮತಿ ಹೆಚ್.ನಿವೇದಿತಾ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕೃತಿಯ ಲೇಖಕ ಡಾ. ಬಿ.ನಾಗರಾಜ್, ಬಿ. ಪಣೀಕಾ ದೀಪಕ್, ಸ್ಥಳ: ಸುಯೋಗ್ ಆಸ್ಪತ್ರೆ ಸಾಂಸ್ಕೃತಿಕ ವಿಭಾಗ ಸಭಾಂಗಣ, ರಾಮಕೃಷ್ಣನಗರ, ಸಂಜೆ 5ಕ್ಕೆ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ**: ಅಧಿಕ ಮಾಸೋತ್ಸವ, ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮಗಳು, ಡಾ. ಅನಂತ ಕುಲಕರ್ಣಿ ಅವರಿಂದ ದಾಸವಾಣಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 5.30ಕ್ಕೆ.

■ **ದೀಕ್ಷಿತ್ ಆರೋಗ್ಯ ಧಾಮ** : ಆನಂದ ಆರೋಗ್ಯ ಅಧಿಕ ಜ್ಯೇಷ್ಠ ಮಾಸದ ಹುಣ್ಣಿಮೆ ಕಾರ್ಯಕ್ರಮ, ಎ.ಜಿ. ಪುನೀತ್ ಅವರಿಂದ ಸಂಗೀತ ಕಾರ್ಯಕ್ರಮ, ಕುಮಾರಿ ಶ್ರೀಲತಾ–ಪಿಟೀಲು, ಭುವನ್ ರವಿಶಂಕರ್ –ಮೃದಂಗ, ದೀಕ್ಷಿತ್ ಆರೋಗ್ಯಧಾಮ ನಿರ್ದೇಶಕ ಡಾ.ಅನಿಲಕುಮಾರ್ ಅವರಿಂದ ಪರಿಸರ ಆರೋಗ್ಯ ನಮ್ಮ ಕರ್ತವ್ಯ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6 ರಿಂದ.

■ **ಶ್ರೀ ಸುತ್ತೂರು ಮಠ** : ಬೆಳದಿಂಗಳ ಸಂಗೀತ–292ರ ಅಂಗವಾಗಿ ವಿದುಷಿ ಅರ್ಚನಾ ಎಲ್. ರಾವ್ ಅವರಿಂದ ಗಾಯನ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದುಷಿ ಸಿ.ವಿ. ಶ್ರುತಿ–ವಯೋಲಿನ್, ವಿದ್ವಾನ್ ಸುನೀಲ್ ಸುಬ್ರಹ್ಮಣ್ಯಂ–ಮೃದಂಗ, ವಿದ್ವಾನ್ ರಾಜಾಪುರಂ ಆರ್. ಕಾರ್ತಿಕ್–ಖಂಜಿರ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ**: ಉಪನ್ಯಾಸ ಕಾರ್ಯಕ್ರಮ, ತಿಂಗಳ ತಿಳಿವು ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ತಿಂಗಳ ಅತಿಥಿ: ನಿವೃತ್ತ ಪ್ರಾಧ್ಯಾಪಕ ಪ್ರೊ.ಜಿ.ಚಂದ್ರಶೇಖರ್, ಉಪಸ್ಥಿತರು: ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ಕಾರ್ಯದರ್ಶಿ ಕೆ.ಕೆಂಪಲಿಂಗರಾಜು, ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸಂಚಾಲಕ ಪ್ರೊ.ಜಿ. ಚಂದ್ರಶೇಖರ್, ಉಪಾಧ್ಯಕ್ಷ ಬಸವಣ್ಣ, ಖಜಾಂಚಿ ಪುರುಷೋತ್ತಮ, ಮಹಿಳಾ ಘಟಕದ ಅಧ್ಯಕ್ಷೆ ಅಮೃತ, ಸಹ ಕಾರ್ಯದರ್ಶಿ ಬೋರೇಗೌಡ, ಬೆಳಗ್ಗೆ 6ರಿಂದ ಗೋಪಿನಾಥ್ ಮತ್ತು ತಂಡದವರಿಂದ ಭಜನೆ ಮತ್ತು ವಚನವೇದ ಪಠಣ, ಸುಪ್ರಭಾತ, ಸಂಜೆ 6 ರಿಂದ ವಿದುಷಿ ಶ್ರೀಮತಿ ಭಾಸ್ಕರಮೂರ್ತಿ ತಂಡದವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಪರಮಹಂಸ ಧ್ಯಾನ ಕೇಂದ್ರ, ರಾಮಕೃಷ್ಣ ವೃತ್ತದ ನೆಲಮಹಡಿ.

■ **ರಂಗಾಯಣ** : ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಹಂದಿ–ಮಂದಿ ನಾಟಕ ಪ್ರದರ್ಶನ, ನಿರ್ದೇಶನ: ಜಾರ್ಜ್ ಅರ್ವೆಲ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಸಿನಿಮಾಯಾನ –ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತಕುಮಾರ್, 8.30 ನಾ ಕಸ್ತೂರಿ ಅವರ ಪಾತಾಳದಲ್ಲಿ ಪಾಪಚ್ಚಿ–ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್. ಎಸ್., 8.45 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ತಂಬಾಕು ರಹಿತ ದಿನದ ಮಹತ್ವ, ಧ್ಯೇಯವಾಕ್ಯ ಹಾಗೂ ಬಾಯಿಯ ಆರೋಗ್ಯ ಈ ಕುರಿತು ಜೆ.ಎಸ್.ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯದ ಒಸಡುಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕರಾದ ಡಾ.ಅರವಿಂದ್.ಬಿ.ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ–ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ, ಶಿಶುಗೀತೆಗಳ ಕಾರ್ಯಕ್ರಮ–ಚಿಣ್ಣರ ಚಿಲಿಪಿಲಿ, ಪ್ರಸ್ತುತಿ–ಬಿ.ಜಿ.ಕವಿತಾ, 11.00 MANN KI BAAT – ಭಾರತದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು.

ಮಧ್ಯಾಹ್ನ: 12.05 ವನಿತಾ ವಿಹಾರ–ಬಹುಮುಖ ಪ್ರತಿಭೆಯ ಮಹಿಳೆ ಹಾಗೂ ವಿಶೇಷ ವಾದ್ಯ ಮೆಲೋಡಿಕಾ ನುಡಿಸುವ ಸುಧಾ ಗಡಿಯಾರ್ ಅವರ ಪರಿಚಯ, 12.35 ಭಕ್ತಿಗೀತೆಗಳು, 12.45 ಜನಪದ ಸಂಗೀತ: ಸಿ.ಎಸ್.ಮುದ್ದಪ್ಪ ಮತ್ತು ಸಂಗಡಿಗರಿಂದ ಭಾಗವಂತಿಕೆ ಮೇಳದ ಹಾಡು, ಶ್ರೀ ಕೃಷ್ಣಲೀಲೆ, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನ ಮಂತ್ರಿಗಳ ಹೊಸಯುಗದ ಮೂಲಸೌಕರ್ಯ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ಹರಿಣಾಕ್ಷಿ.ಜಿ.ಎಸ್., 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಚಲನಚಿತ್ರ ನಿರ್ದೇಶಕ ಹಾಗೂ ಬರಹಗಾರ ಪ್ರಕಾಶ್ ರಾಜ್ ಮೇಹು ಅವರ ಸಂದರ್ಶನದ ಮರು ಪ್ರಸಾರ, ಪ್ರಸ್ತುತಿ–ಶ್ರೀಮಾನ್.ಎಸ್., 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.45 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಉಸ್ತಾದ್ ಸಾಬ್ರಿಖಾನ್ ಅವರ ಸಾರಂಗಿ ವಾದನ, 4.45 ಚಿತ್ರಗೀತೆಗಳು, 6.51 ಕೃಷಿರಂಗ: ಕೃಷಿರಂಗ: ಹಟ್ಟಿಹರಟೆ–ವಾರದ ಗ್ರಾಮೀಣ ಚರ್ಚೆ, ಪ್ರಸ್ತುತಿ: ಎನ್.ಕೇಶವಮೂರ್ತಿ, ಡಾ.ಮೈಸೂರು ಉಮೇಶ್, ಬಿ.ಜಿ.ಕವಿತಾ, ಕೃಷಿಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಜಿ.ಎನ್. ಮಂಜುನಾಥ್, 7.45 ಕನ್ನಡದಲ್ಲಿ ಭಾಷಣ–ಸ್ತ್ರೀ ಸಂವೇದನೆ ಈ ಕುರಿತು ಡಾ. ರಾಜಶ್ರೀ ಕಲ್ಲೂರಕರ್ ಅವರಿಂದ ಭಾಷಣ, 8.00 ಭಾರತದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 8.30 ಹಿಂದಿ ಚಿತ್ರಗೀತೆಗಳು, 9.30 ಭಾರತದ ಉಪರಾಷ್ಟ್ರಪತಿಗಳಾದ ಸಿ.ಪಿ.ರಾಧಾಕೃಷ್ಣನ್ ಅವರು ಭಾಗವಹಿಸಲಿರುವ ಬೆಳ್ತಂಗಡಿಯ ಸಿರಿ ಕೈಗಾರಿಕಾ ಘಟಕದ ಸಮಾರಂಭದ ಬಾನುಲಿ ವರದಿ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಎ.ಯರ್ರಯ್ಯ–ಸ್ಯಾಕ್ಸೋಫೋನ್ ವಾದನ


ಬಸವ ಮಾರ್ಗ ಸಂಸ್ಥಾಪಕರಾದ
ಎಸ್.ಬಸವರಾಜು
ರವರಿಗೆ
ಜನುಮದಿನದ
ಶುಭಾಶಯಗಳು
31-05-2026
ಶುಭಕೋರುವವರು : ಸ್ಕಂದನ್ (ಉದ್ಯಮಿಗಳು) ಮತ್ತು ಸ್ನೇಹಿತರು

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ದಿನಾ ಹೋಟೆಲ್‌ನಲ್ಲೇ ಊಟ ಮಾಡಿದ್ದರಿಂದ ನಿಮಗೆ ಅಲ್ಸರ್ ಆಗಿದೆ.

ರೋಗಿ : ಹಾಗಾದ್ರೆ ಇವತ್ತಿನಿಂದ ಮನೆಗೆ ಪಾರ್ಸೆಲ್ ತಗೊಂಡು ಬಂದು ತಿಂತಿನಿ.

ಮೈಸೂರು ಮಿತ್ರ

ಭಾನುವಾರ, ಮೇ 31, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಎಲ್ಲಾ ಗೊತ್ತಿದ್ದು, ಗೊತ್ತಿಲ್ಲದಂತೆ ಇದ್ದು ಬಿಡು. ಅರ್ಥ ಮಾಡಿಕೊಂಡವರು ಜೊತೆಯುಳಿಯುತ್ತಾರೆ. ಅನುಮಾನ ಪಟ್ಟವರು ದೂರ ಸರಿದು ಹೋಗುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಹಲ್ಲಿರುವ ತನಕ ಊಟ, ಕಣ್ಣಿರುವ ತನಕ ನೋಟ.

ನಿಮ್ಮ ಪತ್ರಗಳು

ಡಿಕೆಶಿಗೆ ಸಿಎಂ ಸಾಮಾಜಿಕ ನ್ಯಾಯ

ಮಾನ್ಯರೆ,

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಸಿಎಂ ಯಾರಾಗಬೇಕು ಎನ್ನುವಾಗ ಕಾಂಗ್ರೆಸ್ ವಲಯದಲ್ಲಿ ಪ್ರಬಲವಾಗಿ ಕೇಳಿ ಬಂದ ಎರಡೇ ಹೆಸರು ಡಿ.ಕೆ.ಶಿ ಮತ್ತು ಸಿದ್ದರಾಮಯ್ಯನವರದ್ದು. ಅದರಲ್ಲಿ ಸಿದ್ದರಾಮಯ್ಯ ಅಂತಿಮವಾಗಿ ಯಶಸ್ಸು ಕಂಡವರು. ಇದರ ನಡುವೆ ಕಾಂಗ್ರೆಸ್ ಹೈಕಮಾಂಡ್ ಈ ಇಬ್ಬರು ನಾಯಕರ ಮಧ್ಯೆ ಒಂದು ಒಪ್ಪಂದ ಮಾಡಿದ್ದು ಗುಟ್ಟಾಗೇನು ಉಳಿದಿಲ್ಲ. ಒಪ್ಪಂದದ ಪ್ರಕಾರ ಸಿದ್ದರಾಮಯ್ಯ ಮೊದಲಾರ್ಧ ಅಧಿಕಾರ ನಡೆಸಿ ಉತ್ತಮ ಆಡಳಿತ ನೀಡಿದ್ದಾರೆ. ಜನತೆಯ ಮೆಚ್ಚುಗೆಗೂ ಪಾತ್ರರಾಗಿದ್ದಾರೆ. ಜೆಡಿಎಸ್ ಬಿಟ್ಟು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿ ಪಕ್ಷಕ್ಕೂ ಹೆಸರು ತರುವುದರ ಜೊತೆಗೆ ಅಧಿಕಾರವನ್ನು ಅನುಭವಿಸಿದ್ದಾರೆ. ಈಗ ಒಪ್ಪಂದದಂತೆ ರಾಜೀನಾಮೆ ನೀಡಿರುವುದು ಅವರ ಘನತೆಯನ್ನು ಹೆಚ್ಚಿಸಿದೆ. ಇದರಿಂದ ಡಿ.ಕೆ.ಶಿವಕುಮಾರ್‌ರಂತಹ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ಪಕ್ಷಕ್ಕೆ ದುಡಿದು ಶಾಸಕರಾಗಿ, ಕೆಪಿಸಿಸಿ ಅಧ್ಯಕ್ಷರಾಗಿ ಸಚಿವರಾಗಿ, ಉಪ ಮುಖ್ಯಮಂತ್ರಿಯಾಗಿ ಈಗ ಸಿಎಂ ಗಾದಿಗೇರುತ್ತಿರುವುದು ಸಾಮಾಜಿಕ ನ್ಯಾಯವೇ ಸರಿ. ಜೊತೆಗೆ ಸಿದ್ದರಾಮಯ್ಯರಂತಹ ನಾಯಕ ಈ ರಾಜ್ಯಕ್ಕೆ ಮತ್ತು ಪಕ್ಷಕ್ಕೆ ಬೇಕು. ಕೆಲ ಸಂಘಟನೆ ಸಿದ್ದರಾಮಯ್ಯ ಅವರನ್ನು ದಾರಿ ತಪ್ಪಿಸುವ ಹೇಳಿಕೆ ನೀಡಿ ಒತ್ತಡ ಹಾಕಬಹುದು. ಇದರಿಂದ ಪ್ರಭಾವಿತರಾದರೆ ಇಷ್ಟು ದಿನ ಮಾಡಿದ ಹೆಸರಿಗೆ ಚ್ಯುತಿ ಬರಬಹುದು ಆದ್ದರಿಂದ ಅವರೇ ಮುಂದೆ ನಿಂತು ಡಿಕೆಶಿಗೆ ಮಾರ್ಗದರ್ಶನ ನೀಡಿ ಸಾಮಾಜಿಕ ನ್ಯಾಯ ಎತ್ತಿ ಹಿಡಿಯಬೇಕು ಇದರಿಂದ ಪಕ್ಷಕ್ಕೂ ಅನುಕೂಲವಾಗುತ್ತದೆ

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

ರಾಷ್ಟ್ರ ರಾಜಕಾರಣಕ್ಕೆ ಮಾಜಿ ಸಿಎಂ, ಅನುಭವಿ ರಾಜಕಾರಣಿಗಳ ಅವಶ್ಯಕತೆ

ಮಾನ್ಯರೆ,

ಅನುಭವಿ ಹಿರಿಯ ರಾಜಕಾರಣಿ ಅದರಲ್ಲಿ ಮಾಜಿ ಮುಖ್ಯಮಂತ್ರಿಗಳ ಕೊಡುಗೆ ರಾಷ್ಟ್ರ ರಾಜಕಾರಣಕ್ಕೆ ಅವಶ್ಯ ಇದೆ. ಮುಖ್ಯಮಂತ್ರಿ ಆದವರು ರಾಜ್ಯದ ಮಂತ್ರಿ ಸ್ಥಾನ ಸೇರಿದಂತೆ ಇನ್ನಿತರ ಮುಖ್ಯಮಂತ್ರಿ ಸ್ಥಾನಕ್ಕಿಂತ ಸಣ್ಣ ಹುದ್ದೆ ಪಡೆಯಲು ಬರುವುದಿಲ್ಲ ಅಥವಾ ಒಂದು ವೇಳೆ ಪಡೆದರೂ ಗೌರವ ತಕ್ಕುದ್ದಲ್ಲ. ಬದಲಾಗಿ ಕೇಂದ್ರ ಮಂತ್ರಿಯಾಗಬಹುದು. ಇತ್ತೀಚೆಗೆ ಕೇಂದ್ರ ಸರ್ಕಾರ ಸತತ ಅಧಿಕಾರಕ್ಕೆ ಬರಲು ಕಾರಣ ಒಳ್ಳೆ ವ್ಯಕ್ತಿ ನೋಡಿ, ಜನ ವೋಟು ಹಾಕಿದ್ದಾರೆ. ಮುಂದೊಂದು ದಿನ ಕಾಂಗ್ರೆಸ್ ಪಕ್ಷದಿಂದ ಬೇರೆ ಪಕ್ಷಕ್ಕೆ ಮಹಾ ವಲಸೆ ಹೋದವರು ವಾಪಸ್ ಮಾತೃ ಕಾಂಗ್ರೆಸ್ ಪಕ್ಷಕ್ಕೆ ಸೇರುವುದು ಖಚಿತ. ಆಗ ಮತ್ತೆ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲಿದೆ.

ಮುಂದೊಂದು ದಿನ ರಾಹುಲ್ ಗಾಂಧಿ ಪ್ರಧಾನಮಂತ್ರಿಯಾಗಬಹುದು. ಹಾಗಾಗಿ ಹಿರಿಯ ಅನುಭವಿ, ಮಾಜಿ ಮುಖ್ಯಮಂತ್ರಿಗಳು ರಾಷ್ಟ್ರ ರಾಜಕಾರಣಕ್ಕೆ ಹೋಗುವುದು ಒಳ್ಳೆಯದು. ಒಮ್ಮೆ ಮುಖ್ಯಮಂತ್ರಿಯಾದರೆ ಮುಗಿಯಿತು. ಮತ್ತೆ ಮುಖ್ಯಮಂತ್ರಿ ಆಗಬಹುದು. ಆದರೆ ಅದು ಅವಶ್ಯಕತೆ ಇರುವುದಿಲ್ಲ. ಪದೇ ಪದೆ ಒಂದೇ ಹುದ್ದೆಯಲ್ಲಿ ಮುಂದುವರಿದರೆ ಜನರಿಂದ ಒಳ್ಳೆಯ ಅಭಿಪ್ರಾಯ ಬರುವುದಿಲ್ಲ. ಆದ್ದರಿಂದ ರಾಷ್ಟ್ರ ರಾಜಕಾರಣದ ಕಡೆ ಮುಖ ಮಾಡಬೇಕು. ಅದೇ ಸರಿಯಾದ ನಿರ್ಧಾರ.

ರಾಹುಲ್ ಗಾಂಧಿಯವರು ರಾಜ್ಯಸಭೆ ಮೂಲಕ ಸಿದ್ದರಾಮಯ್ಯ ಅವರಿಗೆ ರಾಷ್ಟ್ರ ರಾಜಕಾರಣಕ್ಕೆ ಬರುವಂತೆ ಸೂಚಿಸಿದ್ದಾರೆ. ಅವರು ರಾಷ್ಟ್ರ ರಾಜಕಾರಣಕ್ಕೆ ಹೋಗುವುದು ಒಳ್ಳೆಯದು. ರಾಜ್ಯ ರಾಜಕಾರಣ ಸಾಕು. ಅದರ ಜೊತೆಗೆ ಕಾಂಗ್ರೆಸ್ ನಾಯಕರು ಮತ್ತೊಮ್ಮೆ ರಾಜ್ಯಸಭೆ ಮೂಲಕ ರಾಷ್ಟ್ರ ರಾಜಕಾರಣಕ್ಕೆ ಬರುವಂತೆ ಅವರ ಮನವೊಲಿಸಬೇಕು. ಅನುಭವಿ ಹಿರಿಯ ರಾಜಕಾರಣಿಗಳು, ಮಾಜಿ ಮುಖ್ಯಮಂತ್ರಿಗಳು ರಾಜ್ಯದ ಆಲೋಚನೆ ಅಥವಾ ಚಿಂತನೆಗಳಗಿಂತ ರಾಷ್ಟ್ರ ರಾಜಕಾರಣದತ್ತ ಗಮನ ಹರಿಸಬೇಕು.

–ವೀರೇಶ ಧೂಪದಮಠ, ಮೈಸೂರು.

ರಸ್ತೆಗಿಳಿದ ಜನರಿಗೆ ಪ್ರಾಣಭಯದ ಗ್ಯಾರಂಟಿ

ಮಾನ್ಯರೆ,

ನಮ್ಮ ರಾಜ್ಯದ ಪ್ರಮುಖ ನಗರಗಳ ರಸ್ತೆಗಳಲ್ಲಿ 'ಮೊಳೆ ಮಾಫಿಯಾ' ಮತ್ತೆ ತಲೆಯೆತ್ತಿರುವ ವರದಿ ಆತಂಕಕಾರಿ. ಕಿಡಿಗೇಡಿಗಳು ಉದ್ದೇಶಪೂರ್ವಕವಾಗಿ ಮೊಳೆ ಹಾಗೂ ಕಬ್ಬಿಣದ ಚೂರುಗಳನ್ನು ಎಸೆದು ವಾಹನಗಳನ್ನು ಪಂಕ್ಚರ್ ಮಾಡುತ್ತಿದ್ದಾರೆ. ಕೇವಲ ಹಣ ಲೂಟಿ ಮಾಡಲು ಅಮಾಯಕರ ಜೀವದ ಜತೆ ಆಟವಾಡುತ್ತಿರುವ ಇಂತಹ ಕ್ರಿಮಿನಲ್‌ಗಳ ಕೃತ್ಯ ಅತ್ಯಂತ ಹೀನಾಯ ಹಾಗೂ ಖಂಡನೀಯ. ನಗರಗಳ ಪ್ರಮುಖ ರಸ್ತೆಗಳೇ ಇವರ ಟಾರ್ಗೆಟ್ ಆಗಿರುವುದು ಆತಂಕಕಾರಿ. ಶೇಕಡ 100 ರಷ್ಟು ಸುರಕ್ಷಿತವಾಗಿರಬೇಕಾದ ಸಾರ್ವಜನಿಕ ರಸ್ತೆಗಳು ಇಂದು ರಕ್ತ ಪಿಪಾಸುಗಳ ಅಡ್ಡೆಯಾಗುತ್ತಿವೆ. ಪೊಲೀಸರು ಕೇವಲ ನೆಪಮಾತ್ರದ ಎಚ್ಚರಿಕೆ ನೀಡದೆ, ಸಿಸಿಟಿವಿ ನಿಗಾ ಹೆಚ್ಚಿಸಿ, ಈ ದಂಧೆಕೋರರನ್ನು ಜೈಲಿಗಟ್ಟಬೇಕು. ಇಲ್ಲದಿದ್ದರೆ ಆಡಳಿತ ವ್ಯವಸ್ಥೆ ಸತ್ತುಹೋಗಿದೆ ಎಂದೇ ಭಾವಿಸಬೇಕಾಗುತ್ತದೆ.

–ಡಾ.ಎಚ್.ಕೆ.ವಿಜಯಕುಮಾರ್, ಮೈಸೂರು.

ಶಾಸಕ ತನ್ವೀರ್ ಸೇಠ್‌ಗೆ ಸಚಿವ ಸ್ಥಾನ ದೊರೆಯಲಿ

ಮಾನ್ಯರೆ,

ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯನವರು ರಾಜೀನಾಮೆ ನೀಡಿದ್ದಾರೆ. ನೂತನ ಮುಖ್ಯಮಂತ್ರಿ ಯಾಗಿ ಅಧಿಕಾರ ವಹಿಸಿ ಕೊಂಡವರು ತಮ್ಮ ನೂತನ ಸಚಿವ ಸಂಪುಟದಲ್ಲಿ ಶಾಸಕ ತನ್ವೀರ್‌ಸೇಠ್‌ಗೆ ಸಚಿವ ಸ್ಥಾನ ಕಲ್ಪಿಸಬೇಕು. ಹಳೆ ಮೈಸೂರು ಪ್ರಾಂತ್ಯದ ನರಸಿಂಹರಾಜ ಕ್ಷೇತ್ರದಲ್ಲಿ 2002 ರಲ್ಲಿ ಉಪ ಚುನಾವಣೆಯಲ್ಲಿ ಗೆದ್ದ ನಂತರ 2023ರ ತನಕ ಸೋಲಿಲ್ಲದ ಸರದಾರನಾಗಿ ಗೆಲುವು ಸಾಧಿಸುತ್ತಾ ಬಂದಿರುವ ಹಿರಿಯ ರಾಜಕಾರಣಿ ಮತ್ತು ಹಿಂದಿನ ಸರ್ಕಾರಗಳಲ್ಲಿ ಕಾರ್ಮಿಕ ಸಚಿವರು ಹಾಗೂ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಖಾತೆಗಳನ್ನು ನಿಭಾಯಿಸಿ ಅನುಭವ ಉಳ್ಳವರಾಗಿದ್ದಾರೆ. ಇವರಿಗೆ ಈ ಬಾರಿ ನೂತನ ಸಂಪುಟದಲ್ಲಿ ಸಚಿವ ಸ್ಥಾನ ಕಲ್ಪಿಸಿಕೊಡಲಿ ಎಂದು ಈ ಮೂಲಕ ಮನವಿ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು




ನಮ್ಮೂರ ಆದರ್ಶಪ್ರಾಯರು...

ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೋ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

8. 'ಧರ್ಮಪ್ರವರ್ತಕ' ಸಾಹುಕಾರ್ ಡಿ.ಬನುಮಯ್ಯ





ಗೌರಿ ಸತ್ಯ

ಹಿರಿಯ ಪತ್ರಕರ್ತರು

ಮೊ. 87627 88685

ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನವನ್ನು ನೋಡದ ಮೈಸೂರಿನವರಿಲ್ಲ. ಕೋಟೆ ಕಟ್ಟುವಾಗ ಬಾಗಿಲು ಕಾಯುವ ಹನುಮನ ಗುಡಿಯನ್ನು ಕಟ್ಟುವುದು ಬಹಳ ಕಾಲದಿಂದ ಬಂದ ಪದ್ಧತಿ. ನಮ್ಮಲ್ಲೂ ಈ ಹನುಮ ಮೈಸೂರು ಕೋಟೆಯನ್ನು ಕಾಯುತ್ತಾ ಬಂದಿದ್ದಾನೆ. ಈ ಹಿಂದೆ ಅವನ ಗುಡಿಯ ಮುಂದೆ ಭಿಕ್ಷುಕರು, ನಿರ್ಗತಿಕರು ಅವನಲ್ಲಿಗೆ ಬರುತ್ತಿದ್ದ ಭಕ್ತರು ಕೊಡುವ ಮೂರು ಕಾಸೋ ಆರು ಕಾಸೋ ಭಿಕ್ಷೆಗಾಗಿ ಸಾಲುಗಟ್ಟಿ ಕುಳಿತಿರುತ್ತಿದ್ದರು. ಶ್ರೀಮಂತರು ತಮಗೆ ಭಿಕ್ಷೆ ತಪ್ಪುವುದಿಲ್ಲ ಎನ್ನುವ ಖಾತರಿ ಅವರಿಗೆ.

ಸಂತೇಪೇಟೆಯಲ್ಲಿ ಅಂಗಡಿಗಳನ್ನಿಟ್ಟು ವ್ಯಾಪಾರ ಮಾಡುತ್ತಿದ್ದವರಲ್ಲಿ ಅನೇಕರು ಶ್ರೀಮಂತರು. ಜನೋಪಯೋಗಿ ಕಾರ್ಯಗಳನ್ನು ಮಾಡಿ ಜನರ ಪ್ರೀತಿ–ವಿಶ್ವಾಸಗಳನ್ನು ಗಳಿಸಿದ್ದರು. ಊರಿನ ಸಾಹುಕಾರರೆನಿಸಿಕೊಂಡವರಾಗಿದ್ದ ಕಾರಣ ಅವರ ಹೆಸರಿನ ಹಿಂದೆ 'ಸಾಹುಕಾರ' ಪದ ಕೂಡಿಹೋಗಿತ್ತು.

ಪ್ರತಿದಿನ ವ್ಯಾಪಾರದ ಹಣವನ್ನು ಮನೆಗೆ ತೆಗೆದುಕೊಂಡು ಹೋಗುವಾಗ ಸಣ್ಣ ನಾಣ್ಯಗಳನ್ನು ಗಲ್ಲದಲ್ಲೇ ಬಿಟ್ಟು ಹೋಗುತ್ತಿದ್ದರು. ವಾರದ ಕೊನೆಯಲ್ಲಿ ಶನಿವಾರದ ದಿನ ಬಾಗಿಲು ಹಾಕಿ ಅರಮನೆ ಕಡೆ ಹೊರಟು ದಕ್ಷಿಣ ಬಾಗಿಲಿನ ಆಂಜನೇಯನ ದರ್ಶನ ಮಾಡಿ ಮನೆಗೆ ಹೋಗುತ್ತಿದ್ದರು. ಹಾಗೆ ಅಲ್ಲಿಗೆ ಹೋಗುವಾಗ ಅಂಗಡಿಯಲ್ಲಿ ಒಂದು ವಾರದಿಂದ ಕೂಡಿಸಿಟ್ಟಿದ್ದ ಪುಡಿಗಾಸುಗಳನ್ನೆಲ್ಲಾ ಒಂದು ಸಣ್ಣ ಚೀಲದಲ್ಲಿ ತೆಗೆದುಕೊಂಡು ಹೋಗಿ ದೇವಸ್ಥಾನದ ಮುಂದೆ ಕುಳಿತಿರುತ್ತಿದ್ದ ಭಿಕ್ಷುಕರಿಗೆ ಅವನ್ನು ಹಂಚಿ ಹೋಗುವುದು ಅವರಿಗೆ ರೂಢಿಯಾಗಿತ್ತು.

ಹಾಗೆ ಚಿಲ್ಲರೆ ಕಾಸುಗಳನ್ನು ಹಂಚುತ್ತಿದ್ದವರಲ್ಲಿ ಸಂತೇಪೇಟೆಯ ವರ್ತಕರಾದ ಸಾಹುಕಾರ್ ಡಿ.ಬನುಮಯ್ಯನವರೂ ಒಬ್ಬರು. ತಮ್ಮ ಬದುಕನ್ನು ತಾವೇ ರೂಪಿಸಿಕೊಂಡು ಆರ್ಥಿಕವಾಗಿ ಬೆಳೆದಾಗ ಅದನ್ನು ಸಾರ್ಥಕವಾಗಿ ವಿನಿಯೋಗಿಸಿದರು. ದಾನ ಕಾರ್ಯಗಳಲ್ಲಿ ಪ್ರಮುಖರೆನಿಸಿಕೊಂಡವರಲ್ಲಿ ಒಬ್ಬರಾದರು.

ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಮೈಸೂರು ನಗರದಲ್ಲಿ ವಿದ್ಯಾಭ್ಯಾಸಕ್ಕೆ ಸಾಕಷ್ಟು ಅನುಕೂಲಗಳಿರಲಿಲ್ಲ. ಶಾಲೆಗಳ ಸಂಖ್ಯೆ ಬಹಳ ಕಡಿಮೆ. ಅದರಲ್ಲಿಯೂ ಎಲ್ಲರೂ ಪ್ರೌಢಶಾಲೆಗೆ ಸೇರುವ ಅವಕಾಶವಿರಲಿಲ್ಲ. ಹಳ್ಳಿಗಳಲ್ಲಿ ಓದಿದ ವಿದ್ಯಾರ್ಥಿಗಳಿಗೆ ಇದು ಅಸಾಧ್ಯವೇ ಆಗಿತ್ತು. ಇದನ್ನು ಗಮನಿಸಿದ ಮೈಸೂರಿನ ಕೆಲವು ಪ್ರಮುಖರು ಹಳ್ಳಿಗಳಿಂದ ಬಂದ ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲಗಳನ್ನು ಕಲ್ಪಿಸಲು ಮುಂದಾದರು.

ಅವರಲ್ಲಿ ಪ್ರಮುಖರಾದ ಡಿ ಬನುಮಯ್ಯನವರು 1908ರಲ್ಲಿ ಧರ್ಮಪ್ರವರ್ತಕ ಗುಂಜಾ ನರಸಿಂಹಯ್ಯನವರ ಉದಾರ ಮನೋಭಾವದಿಂದ ಕುಲಬಾಂಧವರೊಡಗೂಡಿ ತಮ್ಮ ಸ್ವಂತ ಮನೆಯಲ್ಲಿ ಕುಂಚಿಟಿಗರ ಆಂಗ್ಲೋ–ವರ್ನಾಕ್ಯುಲರ್ ಶಾಲೆಯನ್ನು (ಎ.ವಿ. ಸ್ಕೂಲ್) ಪ್ರಾರಂಭಿಸಿದರು. ಅದರ ಅಧ್ಯಕ್ಷರಾಗಿದ್ದುಕೊಂಡು 1912ರಲ್ಲಿ ಅದನ್ನು ಡಿ.ಬನುಮಯ್ಯ ಉನ್ನತ ಪ್ರಾಥಮಿಕ ಶಾಲೆಯನ್ನಾಗಿ ಪರಿವರ್ತಿಸಿದರು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಕೋರಿ ಅರಮನೆಯ ಹಿಂದಿನ ವಿಶಾಲ ಜಾಗವನ್ನು ಪಡೆದುಕೊಂಡರು. 1914ರಲ್ಲಿ ಮಹಾರಾಜರೇ ಕಟ್ಟಡದ ಶಂಕುಸ್ಥಾಪನೆ ಮಾಡಿದರು. ದಿವಾನ್ ಸರ್. ಎಂ.ವಿಶ್ವೇಶ್ವರಯ್ಯನವರ ಮಾರ್ಗದರ್ಶನದಂತೆ 1.50 ಲಕ್ಷ ರೂಪಾಯಿ ವಿನಿಯೋಗಿಸಿ ಬನುಮಯ್ಯನವರು ಈಗಿರುವ ಕಟ್ಟಡವನ್ನು ನಿರ್ಮಿಸಿದರು. 1917ರಲ್ಲಿ ಯುವರಾಜ ಕಂಠೀರವ ನರಸಿಂಹರಾಜ ಒಡೆಯರು ಶಾಲೆಯ ಉದ್ಘಾಟನೆ ಮಾಡಿದರು. 1919ರಲ್ಲಿ ಅದು ಪ್ರೌಢಶಾಲೆಯಾಯಿತು. 1921ರಲ್ಲಿ ಯೂನಿವರ್ಸಿಟಿ ಎಂಟ್ರೆನ್ಸ್ ತರಗತಿಗಳು ಪ್ರಾರಂಭವಾದವು. ಅಲ್ಲಿಂದ ಮುಂದೆ ಸಂಸ್ಥೆಯು ಹಲವಾರು ಬೆಳವಣಿಗೆಗಳನ್ನು ಕಂಡಿತು.

ಡಿ.ಬನುಮಯ್ಯನವರು 1860ರ ಜುಲೈ 5ರಂದು ನಂಜನಗೂಡು ತಾಲೂಕು ತುಂಬುನೇರಳೆ ಗ್ರಾಮದಲ್ಲಿ ಹುಟ್ಟಿದ್ದರು. ತಂದೆ ದೊಡ್ಡಯ್ಯನವರು, ತಾಯಿ ಮಲ್ಲಮ್ಮನವರು. ಹಿರಿಯ ಅಣ್ಣ ಡಿ.ರಾಮಣ್ಣನವರು. ತಮ್ಮ ಚಿಕ್ಕ ಚೌಡಯ್ಯನವರು. ಸಹೋದರಿ ಅಕ್ಕಿ ಪುಟ್ಟಮ್ಮನವರು. ಅಂದು ಈ ತುಂಬು ಮನೆಗೆ ಗ್ರಾಮದ ಬದುಕಿನಲ್ಲಿ ಬದುಕು ಸಾಗಿಸುವುದು ಕಷ್ಟವಾಗಿತ್ತು. ಕುಟುಂಬ ರಾಜಧಾನಿ ಮೈಸೂರಿಗೆ ವಲಸೆ ಬಂದಿತು. ಸಂತೇಪೇಟೆಯಲ್ಲಿರುವ ಇಂದಿನ ಬೊಮ್ಮಯ್ಯ ಛತ್ರದ ಪಕ್ಕದ ನಾಡಹೆಂಚಿನ ಸಣ್ಣ ಮನೆಯಲ್ಲಿ ವಾಸಿಸತೊಡಗಿದರು. ಕುಂಚಿಟಿಗ ಜನಾಂಗಕ್ಕೆ ಸೇರಿದ್ದ ಅವರು ತಮ್ಮ ಕುಟುಂಬದ ನಿರ್ವಹಣೆಗೆ ತಮ್ಮ ಜನಾಂಗದವರು ನಡೆಸುತ್ತಿದ್ದ ತೊಗರಿಬೇಳೆ ವ್ಯಾಪಾರವನ್ನು ಅವಲಂಬಿಸಿದರು.

ಬನುಮಯ್ಯನವರು ಹಳ್ಳಿಯಲ್ಲಿ ಬೆಳೆದ ಕಟ್ಟುಮಸ್ತಾದ ಬಾಲಕ. ಸಂಸಾರ ನಿರ್ವಹಣೆಯಲ್ಲಿ ಕುಟುಂಬಕ್ಕೆ ನೆರವಾಗಲು ಪ್ರಾರಂಭಿಸಿದರು. ಅದಕ್ಕಾಗಿ ಅವರು ಆರಿಸಿಕೊಂಡಿದ್ದು ಸಂತೇಪೇಟೆಯಲ್ಲಿ ಸಿಗುತ್ತಿದ್ದ ಮೂಟೆ ಹೊರುವ ಕೆಲಸ. ಹಳ್ಳಿಗಳಿಂದ ಎತ್ತಿನ ಗಾಡಿಗಳಲ್ಲಿ ಧಾನ್ಯದ ಮೂಟೆಗಳು ಸಂತೇಪೇಟೆಗೆ ಬರುತ್ತಿತ್ತು. ಒಂದು ಮೂಟೆ ಹೊತ್ತರೆ ಒಂಬತ್ತು ಕಾಸು ಕೂಲಿ. ಅವರು ಆರಿಸಿಕೊಂಡ ಇನ್ನೊಂದು ಕೆಲಸ ದೂರದ ದೊಡ್ಡಕೆರೆಯಿಂದ ದೊಡ್ಡ ಕೊಡಗಳಲ್ಲಿ ಸೀ–ನೀರನ್ನು ಹೊತ್ತು ಸಾಗಿಸುವುದು. ಅಂದು ಮನೆಗಳಿಗೆ ಕೊಳಾಯಿಗಳಲ್ಲಿ ನೀರು ಸರಬರಾಜಿರಲಿಲ್ಲ. ಊರಿನ ಜನ ಹತ್ತಿರದ ಕೆರೆ ಬಾವಿಗಳನ್ನೇ ಅವಲಂಬಿಸಿದ್ದರು. ಅವರಿಗೆ ನೀರು ತಂದುಕೊಟ್ಟರೆ ಒಂದಷ್ಟು ಕಾಸು ಸಿಗುತ್ತಿತ್ತು. ಈ ರೀತಿ ಸಂಪಾದಿಸಿದ ಹಣ ಕುಟುಂಬದ ಬದುಕಿಗೆ ನೆರವಾಯಿತು. ಅವರ ಪರಿಸ್ಥಿತಿ ಸುಧಾರಿಸಿತು.

ಕ್ರಮೇಣ ದೊಡ್ಡಯ್ಯನವರ ವ್ಯಾಪಾರವೂ ಕುದುರಿತು. ಅವರು ವ್ಯಾಪಾರ ಮಾಡಿ ಉಳಿದಿದ್ದ ಹಣದಲ್ಲಿ ಕೆಲವು ಮಕ್ಕಳ ಮದುವೆ ಮಾಡಿದರು. ಬನುಮಯ್ಯನವರ ಮದುವೆ ಇನ್ನೂ ಆಗಿರಲಿಲ್ಲ. ಅಷ್ಟರಲ್ಲಿ ತಂದೆ ನಿಧನರಾದರು. ಕುಟುಂಬದ ಭಾರ ಇವರ ಹೆಗಲಿಗೆ ಬಿತ್ತು. ಸಂತೇಪೇಟೆಯಲ್ಲಿ ಅಂದು ದೊಡ್ಡ ವರ್ತಕರಾಗಿದ್ದ ಕರಿತಿಮ್ಮಯ್ಯ ಎಂಬುವರ ಹತ್ತಿರ ಕೆಲಸಕ್ಕೆ ಸೇರಿದರು. ದುಡಿದು ಉಳಿದ ನಲ್ವತ್ತು ರೂಪಾಯಿಗಳ ಬಂಡವಾಳದಿಂದ ಸ್ವಂತ ವ್ಯಾಪಾರ ಪ್ರಾರಂಭಿಸಿದರು. ಅವರ ಅನುಭವ, ಚಾತುರ್ಯ ವ್ಯಾಪಾರವನ್ನು ಹೆಚ್ಚಿಸಿತು. ಈ ಘಟ್ಟದಲ್ಲಿ ಸಂತೇಪೇಟೆಯ ಧರ್ಮಪ್ರವರ್ತಕ ಗುಂಜಾ ನರಸಿಂಹಯ್ಯ ಅವರೊಡನೆ ಚೌಬೀನೆ ಅಂದರೆ ಮರಮುಟ್ಟಿನ ವ್ಯಾಪಾರದಲ್ಲಿ ಪಾಲುದಾರರಾದರು. ಆರು ವರ್ಷಗಳ ಕಾಲ ನಡೆದ ಈ ವ್ಯವಹಾರ ಸಾಕಷ್ಟು ಲಾಭ ತಂದುಕೊಟ್ಟಿತು.

ಯಶಸ್ಸಿನ ಹಾದಿ ಕಂಡುಕೊಂಡು ಹೋಗುತ್ತಿದ್ದ ಬನುಮಯ್ಯನವರಿಗೆ 1890ರಲ್ಲಿ ಸಂತೇಪೇಟೆಯ ಹೆಸರಾಂತ ವರ್ತಕರಾದ ಮಲ್ಲಣ್ಣ ಅವರ ಮಗಳು ಅಕ್ಕಮ್ಮ ಅವರೊಂದಿಗೆ ವಿವಾಹ ನಡೆಯಿತು. ಆದರೆ ಎರಡೇ ವರ್ಷಗಳಲ್ಲಿ ಅಕ್ಕಮ್ಮ ದೈವಾಧೀನರಾದರು. ಅನಂತರ 1895ರಲ್ಲಿ ಡಿ. ಬನುಮಯ್ಯನವರು ಬೆಂಗಳೂರಿನ ಪ್ರಮುಖ ವರ್ತಕರಾದ ಬೀದಿಮನೆ ನಂಜುಂಡಪ್ಪ ಉರುಫ್ ದಾಸಪ್ಪ ಅವರ ಮಗಳು ಲಕ್ಷ್ಮಮ್ಮ (ಗಂಗಮ್ಮ ಇನ್ನೊಂದು ಹೆಸರು) ಅವರನ್ನು ಮದುವೆಯಾದರು. ಗೃಹಸ್ಥಾಶ್ರಮ ಪ್ರವೇಶಿಸಿದ ಬನುಮಯ್ಯನವರು ಮತ್ತೊಬ್ಬ ಟಿಂಬರ್ ವ್ಯಾಪಾರಗಾರರಾದ ಎಲ್ಲಪ್ಪ ಅವರೊಡನೆ 10 ಆಣೆ ಪಾಲುದಾರರಾಗಿ ವ್ಯವಹಾರ ನಡೆಸಿದರು. ಅಂದಿಗೆ ರೂಪಾಯಿ, ಆಣೆ ಚಲಾವಣೆಯಲ್ಲಿತ್ತು. ಒಂದು ರೂಪಾಯಿಗೆ 16 ಆಣೆ, ಒಂದು ಆಣೆಗೆ 12 ಪೈಸೆ.

ಈ ಮಧ್ಯೆ 1896ರಲ್ಲಿ ತಾಯಿ ಮಲ್ಲಮ್ಮ ನಿಧನರಾದರು. ಬನುಮಯ್ಯನವರ ಮನಸ್ಸು ಧರ್ಮ ಕಾರ್ಯಗಳತ್ತ ಹರಿಯಿತು. ಸಾಧುಸಂತರೊಂದಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದ ಅವರಿಗೆ ಉತ್ತರ ಭಾರತದಿಂದ ಬಂದಿದ್ದ ಯತಿಗಳಾದ ಶ್ರೀ ಸುದರ್ಶನಾನಂದ ಪರಮಹಂಸಸ್ವಾಮಿಗಳ ದರ್ಶನ ಲಭ್ಯವಾಯಿತು. ಅವರ ತೇಜಸ್ಸು ಇವರ ದಿಕ್ಕನ್ನು ಬದಲಾಯಿಸಿತು. ವ್ಯಾಪಾರ ವ್ಯವಹಾರಗಳಿಗೆ ಧರ್ಮದ ನೆಲೆಗಟ್ಟು ದೊರೆಯಿತು.

ಸ್ವಾಮಿಗಳಿಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿದ್ದ ತಮ್ಮ ಗುಪ್ತಗಂಗಾ ತೋಟದಲ್ಲಿ ಕುಟೀರವನ್ನು ಕಟ್ಟಿಸಿ ಅವರು ಅಲ್ಲಿಯೇ ನೆಲೆ ನಿಲ್ಲುವಂತೆ ಮಾಡಿದರು. ಪ್ರತಿದಿನ ಅವರ ದರ್ಶನ ಪಡೆದು ಅವರಿಗೆ ಬೇಕಾದ ಸಾಮಗ್ರಿಗಳನ್ನು ತಪ್ಪದೇ ಒದಗಿಸುತ್ತಿದ್ದರು. 1905ರಲ್ಲಿ ಸ್ವಾಮಿಗಳು ಅಂತ್ಯಗೊಂಡರು. ಸ್ವಾಮಿಗಳ ಸಂಪರ್ಕ–ಉಪದೇಶಗಳು ಇವರಿಗೆ ದಾರಿದೀಪಗಳಾದವು. ಬನುಮಯ್ಯನವರು ಬದುಕಿಗೆ ಬೇಕಾದ ವ್ಯಾಪಾರವನ್ನು ಕಡೆಗಣಿಸದೆ ಅಭಿವೃದ್ಧಿಪಡಿಸಿಕೊಂಡು ಹೋದರು. 1904ರಲ್ಲಿ ಅರಮನೆಗೆ ಬೇಕಾದ ಸಾಮಗ್ರಿಗಳನ್ನು ಒದಗಿಸುವ ಕಂಟ್ರಾಕ್ಟ್ ಪಡೆದುಕೊಂಡರು. **(ಮುಂದುವರೆಯುತ್ತದೆ)**

ಸತ್ಯವಂತರಿಗಿದು ಕಾಲವಲ್ಲ...



ನಾದಲಹರಿ

ಡಾ.ರಮಾ ವಿ. ಬೆಣ್ಣೂರ್

ಸಂಗೀತ ವಿಮರ್ಶಕರು

ಮೊ: 99452 82346

ಅದೊಂದು ವಿಖ್ಯಾತವಾದ ವಿಶ್ವವಿದ್ಯಾಲಯ. ಒಂದು ಕಾಲಕ್ಕೆ ಅದರ ಕೀರ್ತಿ ವಿದೇಶಗಳಲ್ಲೂ ಹರಡಿತ್ತು. ದೇಶದ ವಿದ್ವಾಂಸರೆಲ್ಲರೂ ಅಲ್ಲಿ ವಿದ್ಯಾರ್ಥಿಗಳಿಗೆ ಕಲಿಸಿ, ಅವರನ್ನು ಸತ್ಪ್ರಜೆಗಳನ್ನಾಗಿ ಮಾಡಿದ್ದರು. ಅಲ್ಲಿಂದ ತಯಾರಾಗಿ ದೇಶ–ವಿದೇಶಗಳಲ್ಲಿ ಹೆಸರು ಮಾಡಿ ಕೀರ್ತಿವಂತರಾಗಿದ್ದ ವಿದ್ವಾಂಸರ ದೊಡ್ಡ ಪಟ್ಟಿಯೇ ಇತ್ತು. ಕಾಲಕ್ರಮೇಣ ಆ ವಿಶ್ವವಿದ್ಯಾಲಯವು ಗಳಿಸಿದ ಹೆಸರು ಕ್ಷೀಣಿಸುತ್ತಾ ಬಂದು, ಯಾವಾಗ ಸರ್ಕಾರ ಭಾರತದ ಎಲ್ಲ ವಿಶ್ವವಿದ್ಯಾಲಯಗಳಂತೆ ಅದರಲ್ಲೂ ಮೂಗು ತೂರಿಸಿತೋ ಅದರ ಒಳ–ಹೊರ ಚಿತ್ರಣ ಬದಲಾಯಿತು. ಪಾಂಡಿತ್ಯ, ಕಲಿಸುವ ಕ್ಷಮತೆ, ಅರ್ಹತೆಯು ಹಿಂದೆ ಸರಿದಂತೆ ಕೇವಲ ಜಾತಿಯೇ ಎಲ್ಲವನ್ನೂ ಆಳತೊಡಗಿತು. ವಿದ್ಯೆಯ ಮಟ್ಟ ಕುಸಿಯತೊಡಗಿತು. ಮೊದಲೆಲ್ಲಾ ಅಭ್ಯರ್ಥಿಯ ವಿದ್ಯಾರ್ಹತೆಯ ಜೊತೆಗೆ ಆತನ ಕ್ಷಮತೆ, ಜ್ಞಾನದ ಮಟ್ಟ, ಕಲಿಸುವ ಪದ್ಧತಿ ಎಲ್ಲವನ್ನೂ ಚೆನ್ನಾಗಿ ಪರೀಕ್ಷೆ ಮಾಡಿದ ನಂತರವೇ ಆತನಿಗೆ ಉಪನ್ಯಾಸಕನಾಗಲು ಅನುಮತಿ–ಆಯ್ಕೆ ಸಿಗುತ್ತಿತ್ತು. ಆದರೆ ಈಗ ಅದರ ತದ್ವಿರುದ್ಧ. ಪ್ರಭಾವ, ಜಾತಿ ಅರ್ಹತೆಗೆ ಪ್ರಾಧಾನ್ಯತೆ ಉಳಿದವು ತೀರಾ ನಗಣ್ಯ.

ಆತ ಸಣ್ಣ ಊರೊಂದರ ಮಧ್ಯಮ ವರ್ಗದಲ್ಲಿ ಹುಟ್ಟಿದ ಸ್ವಾಭಿಮಾನಿ. ಬಾಲ್ಯದಲ್ಲಿಯೇ ತಂದೆಯಿಂದ ಸಂಸ್ಕೃತ, ವ್ಯಾಕರಣ, ವೇದ, ಭಗವದ್ಗೀತೆ ಮುಂತಾದವುಗಳ ಶಿಕ್ಷಣ ಆಗಿತ್ತು. ಜ್ಯೋತಿಷಿಯೂ ಆಗಿದ್ದ ತಂದೆಯವರನ್ನು ಕಾಣಲು ಹಲವಾರು ರಾಜಕೀಯ ವ್ಯಕ್ತಿಗಳೂ ಸಹ ಅವರ ಮನೆಗೆ ಬರುತ್ತಿದ್ದುದುಂಟು. ತಂದೆಗಾಗಲೀ, ಅವನಿಗಾಗಲೀ ಅವನು ತನ್ನ ಸ್ವಸಾಮರ್ಥ್ಯದಿಂದ ಓದಿ, ವಿದ್ಯಾವಂತನಾಗಿ ತನ್ನ ಬದುಕನ್ನು ಕಟ್ಟಿಕೊಳ್ಳಬೇಕೆಂಬ ಆಸೆ. ಅವನ ಊರಿನಲ್ಲಿ ಪ್ರೌಢಶಾಲೆ ಮುಗಿಸಿ, ಕಾಲೇಜು ವಿದ್ಯಾಭ್ಯಾಸಕ್ಕೆಂದು ದೊಡ್ಡ ಊರಿಗೆ ಬಂದ. ಅವನ ಬಳಿ ಯಾವ ಶಿಫಾರಸು ಪತ್ರವೂ ಇರಲಿಲ್ಲ. ಕೆಲವು ವಾರಾನ್ನದ ಮನೆಗಳು ಸಿಕ್ಕವು. ಕಷ್ಟಪಟ್ಟು ಓದುವ ಹುಮ್ಮಸ್ಸು ಇತ್ತು. ವಾರಾನ್ನದ ಮನೆಗಳ ಮಕ್ಕಳಿಗೆ ಪಾಠ ಹೇಳಿ ಗಳಿಸಿದ ದುಡ್ಡಿನಿಂದ ತನ್ನ ಕಾಲೇಜಿನ ಫೀಸನ್ನು ಕಟ್ಟುತ್ತಿದ್ದ. ಅತ್ಯುನ್ನತ ಅಂಕಗಳಿಂದ ಪದವಿಯನ್ನು ಗಳಿಸಿದ.

ಓದಿನಲ್ಲಿ ಅತ್ಯಂತ ಚುರುಕಾಗಿದ್ದ ಇವನನ್ನು ಕಂಡರೆ ಎಲ್ಲರಿಗೂ ಇಷ್ಟ. ದೇವಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನೂ ಗಳಿಸಿದ. ಸಂಶೋಧನೆಯನ್ನು ಮಾಡಿ ಪಿಎಚ್.ಡಿಯನ್ನೂ ಪಡೆದು ಡಾಕ್ಟರೇಟ್ ಪಡೆದಿದ್ದ. ತಾನು ಓದಿದ ವಿಶ್ವವಿದ್ಯಾಲಯದಲ್ಲಿಯೇ ಸಂಸ್ಕೃತ ಉಪನ್ಯಾಸಕರ ಹುದ್ದೆಗೆ ಕರೆ ಬಂದಾಗ ಉತ್ಸಾಹದಿಂದ ಅರ್ಜಿ ಸಲ್ಲಿಸಿದ. ಜಾತಿಯ ಆಧಾರದ ಮೇಲೆ ಇವನಿಗಿಂತ ಕಡಿಮೆ ಅಂಕ ಬಂದಿದ್ದ ವ್ಯಕ್ತಿಗೆ ನೌಕರಿ ಸಿಕ್ಕಿತು. ಮರಳಿ ಯತ್ನ ಮಾಡುತ್ತಿದ್ದ ಈತನಿಗೆ ಕೊನೆಗೆ ದಕ್ಕಿದ್ದು ಹಂಗಾಮಿ ಉಪನ್ಯಾಸಕನ ಹುದ್ದೆ. ಇಂದಲ್ಲ ನಾಳೆ ಅದು ಖಾಯಂ ಆಗಬಹುದೆಂಬ ಆಸೆಯಿಂದ ಅವನು ಪ್ರಾಮಾಣಿಕನಾಗಿ ದುಡಿಮೆ ಆರಂಭಿಸಿದ. ಆತನ ವಿಭಾಗದಲ್ಲಿದ್ದ ಬಹುತೇಕರು ವಾಸಕ್ಕೆ ಮನೆ, ಕೈತುಂಬ ಸಂಬಳ, ಭತ್ಯೆ ಪಡೆಯುತ್ತಿದ್ದವರೇ. ಭಾಷೆ ಮತ್ತು ಸಾಹಿತ್ಯ ಎರಡರಲ್ಲೂ ನಿಪುಣನಾಗಿದ್ದ ಈತನ ಮೇಲೆ ತಮ್ಮ ಕರ್ತವ್ಯದ ಹೊರೆಯನ್ನೂ ಹೊರಿಸಲು ಅವರು ಹಿಂದೇಟು ಹಾಕಲಿಲ್ಲ. ವಿದ್ಯಾರ್ಥಿಗಳಿಗಂತೂ ಈತನ ಪಾಠ ಎಂದರೆ ಅಚ್ಚುಮೆಚ್ಚು.

ಅವನಿಗಿಂತ ಎಲ್ಲ ರೀತಿಯಲ್ಲೂ ಅನರ್ಹರಾದವರು ಬಡ್ತಿ ಪಡೆಯುತ್ತ ಮೇಲೇರುತ್ತಲೇ ಹೋದರು. ಇವನ ವಿದ್ವತ್ತೆ ಇವನಿಗೆ ಶಾಪವಾಗಿತ್ತು. ಏನೇ ಆದರೂ ಇವನಿಗೆ ಮೇಲೇರುವ ಅಥವಾ ಖಾಯಂ ಆಗುವ ಸಾಧ್ಯತೆಗಳನ್ನೆಲ್ಲಾ ನಿವಾರಿಸು ವಂತೆ ಅವನ ವಿಭಾಗದ ಮುಖ್ಯಸ್ಥರು ನೋಡಿಕೊಂಡರು. ಹೆಂಡತಿ, ಮಕ್ಕಳನ್ನು ಸಾಕುವ ಜವಾಬ್ದಾರಿಯು ಆತನನ್ನು ಮೌನವಾಗಿ ಇವೆಲ್ಲವನ್ನೂ ಸಹಿಸುವಂತೆ ನೋಡಿಕೊಂಡಿತು. ಅದೇ ನೋವು, ನಿರಾಶೆ, ಹತಾಶೆಗಳಲ್ಲಿಯೇ ಆತ ಅಲ್ಲಿಂದ ನಿವೃತ್ತನೂ ಆದ.

ಮತ್ತೊಂದು ಪ್ರಕರಣ: ಅದೊಂದು ಬಹು ದೊಡ್ಡ ಆಸ್ಪತ್ರೆ, ಅತ್ಯಾಧುನಿಕವಾದ ಸೌಲಭ್ಯಗಳನ್ನು ಒಳಗೊಂಡು, ಬಡವರಿಗೆ ಕಡಿಮೆ ದರದಲ್ಲಿ ಸಿಗುವಂತೆ ಮಾಡಲು ಕಟಿಬದ್ಧವಾಗಿತ್ತು. ಒಂದು ಟ್ರಸ್ಟಿನ ಆಡಳಿತಕ್ಕೆ ಅದು ಒಳಪಟ್ಟಿತ್ತು. ಆಸ್ಪತ್ರೆಯ ಮುಖ್ಯಸ್ಥ ಒಬ್ಬ ಹೆಸರಾಂತ ವೈದ್ಯ. ಎಲ್ಲ ಆಸ್ಪತ್ರೆಗಳಲ್ಲಿ ಇರುವಂತೆ ಇಲ್ಲಿಯೂ, ಆಸ್ಪತ್ರೆಯ ಕೆಲಸದ ವೇಳೆಯಲ್ಲಿ ವೈದ್ಯರು ಬೇರೆ ಶುಶ್ರೂಷಾಲಯಗಳಿಗೆ ಹೋಗಬಾರದು. ಇಲ್ಲಿಗೆ ಬರುವ ರೋಗಿಗಳನ್ನು ತಮ್ಮ ಸ್ವಂತ ಕ್ಲಿನಿಕ್ಕಿಗೆ ಕರೆಸಿಕೊಳ್ಳಬಾರದು ಮುಂತಾದ ನಿಯಮಗಳಿದ್ದರೂ ಅದನ್ನು ಪಾಲಿಸುವುದರಲ್ಲಿ ಯಾರಿಗೂ ಆಸಕ್ತಿ ಇರಲಿಲ್ಲ. ಮುಖ್ಯಸ್ಥನಿಗೇ ಅದು ಇರದಿದ್ದಾಗ, ಆತ ಬೇರೆಯವರಿಗೆ ಏನು ಹೇಳಿಯಾನು? ಆಸ್ಪತ್ರೆಯ ಇತರ ಸಿಬ್ಬಂದಿ ವರ್ಗದ ಬಹುತೇಕರಿಗೆ ಇದು ನಮ್ಮ ಸಂಸ್ಥೆ ಎಂಬ ಭಾವನೆ ಲವಲೇಶವೂ ಇಲ್ಲದೆ ಇದರಿಂದ ನಾವು ಎಷ್ಟು ಲಾಭ ಪಡೆಯಬಹುದು ಎಂಬುದರ ಕಡೆಗೇ ಗಮನ ಇದ್ದಿತು. ಆಸ್ಪತ್ರೆ ಖರೀದಿಸುವ ಔಷಧಿಗಳಿರಲಿ, ಯಂತ್ರೋಪಕರಣವಾಗಲೀ, ಪೀಠೋಪಕರಣವಾಗಲೀ ಎಲ್ಲದರಲ್ಲೂ ನಿಜ ಬೆಲೆಗಿಂತ ಬಹಳ ಹೆಚ್ಚು ತೋರಿಸಿ, ತಮ್ಮ ಭಾಗದ ಪಾಲನ್ನು ಪಡೆಯುವುದರಲ್ಲಿಯೇ ಆಸಕ್ತಿ ತೋರಿದವರು. ಇವೆಲ್ಲ ಮ್ಯಾನೇಜ್ಮೆಂಟಿನ ಗಮನಕ್ಕೆ ಬಂದರೂ, ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ಬೇಕಾದ ಗಟ್ಟಿತನ ಅವರಲ್ಲಿ ಇಲ್ಲವಾಗಿತ್ತು.

ಇಂತಹ ಆಸ್ಪತ್ರೆಯಲ್ಲಿ ಅದರ ಅಭಿಯಂತರರ ಜಾಗಕ್ಕೆ ಬಂದ ವ್ಯಕ್ತಿ, ಹರಿಶ್ಚಂದ್ರನ ಅಪರಾವತಾರದಂತಿದ್ದ. ತಾನೂ ತಿನ್ನದ, ಪರರಿಗೂ ತಿನ್ನಲು ಕೊಡದ ಆತ ಬಹುಶಃ ಆ ಸಂಸ್ಥೆಯ ಏಕೈಕ ಪ್ರಾಮಾಣಿಕ ಅಧಿಕಾರಿ. ತನ್ನ ಸಂಬಳಕ್ಕಿಂತ ಹೆಚ್ಚು ಸಂಸ್ಥೆಗೆ ಉಳಿತಾಯ ಆಗುವಂತೆ ಮಾಡಿದ್ದ ದಕ್ಷ. ಆತ ಬಂದ ದಿನದಿಂದ ಆಸ್ಪತ್ರೆಯ ಕಾಂಟ್ರಾಕ್ಟರುಗಳಿಗೆ ಅಚ್ಚರಿ. ಏಕೆಂದರೆ, ಈತ ತನ್ನ ಪಾಲು ಎಷ್ಟೆಂದು ಹೇಳದ ಮೊದಲನೆಯವ. ಸಾಧ್ಯವಾದಷ್ಟೂ ಆಸ್ಪತ್ರೆಗೆ ಕಡಿಮೆ ಬೆಲೆಯಲ್ಲಿ ನಿಮ್ಮ ಕೆಲಸ ಮಾಡಿ ಎಂಬುದು ಆತನ ಬೇಡಿಕೆ. ಅಷ್ಟೇ ಅಲ್ಲ, ಆಸ್ಪತ್ರೆಗೆ ಬೇಕಾದ ವಸ್ತುಗಳನ್ನು ಖರೀದಿಸುವಾಗಲೂ ಹಲವಾರು ಕೊಟೇಷನ್ನುಗಳನ್ನು ತರಿಸಿ, ಅದರಲ್ಲಿ ಅತ್ಯುತ್ತಮವಾದುದನ್ನು ಅತೀ ಕಡಿಮೆ ಬೆಲೆಗೆ ಕೊಡುವಂತೆ ಮಾಡುತ್ತಿದ್ದ. ಆದರೆ, ನಿಯಮಿತವಾಗಿ ತಮ್ಮ ಪಾಲನ್ನು ಪಡೆಯುತ್ತಿದ್ದ ಇತರ ಅಧಿಕಾರಿಗಳಿಗೆ ಸಹಜವಾಗಿಯೇ ಈತ ಬಿಸಿತುಪ್ಪವಾದ. ಈಗ ಈತ ನೇರವಾಗಿ ತಾನೇ ಅವನ್ನು ನಿರ್ವಹಿಸುತ್ತಿದ್ದುದು ಅವರ ಮೇಲಿನ ಗಳಿಕೆಗೆ ಅಡ್ಡಿ ತಂದೊಡ್ಡಿತ್ತು. ಸಂಸ್ಥೆಯ ನೀರು ಮತ್ತು ವಿದ್ಯುತ್ ಬಳಕೆಯ ವಿಷಯದಲ್ಲಿ ಈತ ಮಾಡಿದ ಬದಲಾವಣೆಗಳು ಆಸ್ಪತ್ರೆಯ ಸಾಕಷ್ಟು ಹಣದ ಉಳಿತಾಯಕ್ಕೆ ಎಡೆ ಮಾಡಿಕೊಟ್ಟಿತ್ತು. ಇದನ್ನು ಆತ ಯಾರ ಹೊಗಳಿಕೆಗಾಗಿ ಮಾಡಿರಲಿಲ್ಲ. ಪ್ರಾಮಾಣಿಕತೆ ಎಂಬುದು ಅವನ ರಕ್ತದಲ್ಲಿಯೇ ಬಂದಿತ್ತು.

ಎಲ್ಲರಿಗಿಂತ ಕಿರಿಕಿರಿ ಆಗತೊಡಗಿದುದು ಆಸ್ಪತ್ರೆಯ ಮುಖ್ಯಸ್ಥನಿಗೆ. ಬಡವರಿಗಾಗಿ ಸರಕಾರ ತಂದ ಸ್ಕೀಮಿನವರನ್ನು ಸಾಧ್ಯವಾದಷ್ಟೂ ಬಿಟ್ಟು, ಹಣ ಬರುವ ಪ್ರೈವೇಟ್ ಕೇಸುಗಳನ್ನೇ ಆತ ತೆಗೆದುಕೊಳ್ಳುತಿದ್ದುದು. ಹಾಗೆ ಮಾಡಿ ಸಾಕಷ್ಟು ದುಡ್ಡು ಮಾಡಿದ್ದ. ಸ್ವಂತಕ್ಕಾಗಿ ಹಲವಾರು ವಸ್ತುಗಳನ್ನು ಆಸ್ಪತ್ರೆಯ ಉಗ್ರಾಣದಿಂದಲೇ ಬಳಸಿಕೊಂಡರೆ, ತನ್ನ ಮನೆಯ ಖರ್ಚು ಕಡಿಮೆ ಆಗುತ್ತದೆ ಎಂಬುದು ಆತನ ಲೆಕ್ಕಾಚಾರ. ಆದರೆ, ಈ ಅಭಿಯಂತರ ಅಡ್ಡಿಯಾಗಿದ್ದನಲ್ಲ! ಹೇಗೋ ಫ್ಯಾನು, ಕೇಬಲು ಮತ್ತಿತರ ವಸ್ತುಗಳನ್ನು ತನ್ನ ಮನೆಗೆ ಸಾಗಿಸಿದ್ದ. ಆಸ್ಪತ್ರೆಯ ಸಿಬ್ಬಂದಿಯನ್ನೂ ತನ್ನ ಮನೆಯ ಕೆಲಸಕ್ಕೆ ಬಳಸಿಕೊಳ್ಳಲು ಆರಂಭಿಸಿದಾಗ ಈತ ಅದಕ್ಕೆ ತಡೆಯೊಡ್ಡಿದ. ಎಲೆಕ್ಟ್ರಿಷಿಯನ್, ಪ್ಲಂಬರ್, ಕಾರ್ಪೆಂಟರ್ ಎಲ್ಲರ ಸೇವೆ ಆತನಿಗೆ ಬೇಕಿತ್ತು. ಈಗ ಇವನನ್ನು ನಿವಾರಿಸುವುದು ಹೇಗೆಂದು ಯೋಚಿಸ ತೊಡಗಿದ ಆತ, ಅವನ ಕಾನ್ಫಿಡೆಂಷಿಯಲ್ ರಿಪೋರ್ಟಿನಲ್ಲಿ ಅವನ ವಿರುದ್ಧ ಇಲ್ಲಸಲ್ಲದ ದೂರುಗಳನ್ನು ಸೇರಿಸಿ ಕಳುಹಿಸಿದ. ಅದರ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ಗೋಜಿಗೇ ಹೋಗದ ಆ ಟ್ರಸ್ಟಿಗಳು ಈ ಪ್ರಾಮಾಣಿಕನನ್ನು ಕೆಲಸದಿಂದ ವಜಾ ಮಾಡಿದರು.!

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 31 ಭಾನುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 45 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜೂ.3ಕ್ಕೆ ನೂತನ ಮುಖ್ಯಮಂತ್ರಿಯಾಗಿ
ಡಿ.ಕೆ.ಶಿವಕುಮಾರ್ ಪ್ರಮಾಣ ವಚನ

ಲೋಕಭವನದ ಗಾಜಿನ ಮನೆಯಲ್ಲಿ ಸರಳ ಸಮಾರಂಭ; ಸಾರ್ವಜನಿಕರಿಗೆ ಪ್ರವೇಶಾವಕಾಶ ಇಲ್ಲ



ಶನಿವಾರ ಸಂಜೆ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯ ಬಳಿಕ ಲೋಕಭವನಕ್ಕೆ ಎಐಸಿಸಿ ಸಂಘಟನಾ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ, ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ತೆರಳಿದ ಶಾಸಕಾಂಗ ಪಕ್ಷದ ನೂತನ ನಾಯಕ ಡಿ.ಕೆ.ಶಿವಕುಮಾರ್, ಸರ್ಕಾರ ರಚನೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಲ್ಲಿ ಹಕ್ಕು ಮಂಡಿಸಿದರು.

ಬೆಂಗಳೂರು, ಮೇ 30(ಕೆಎಂಶಿ)–ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಜೂನ್ 3ರ (ಬುಧವಾರ) ಸಂಜೆ 4.05ಕ್ಕೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಲೋಕಭವನದ ಗಾಜಿನಮನೆಯಲ್ಲಿ ನಡೆಯಲಿರುವ ಸರಳ ಸಮಾರಂಭದಲ್ಲಿ ಶಿವಕುಮಾರ್ ಅವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಲಿದ್ದಾರೆ.

ಶಾಸಕಾಂಗ ಪಕ್ಷದ ಸಭೆಯ ಬಳಿಕ ಲೋಕಭವನಕ್ಕೆ ಎಐಸಿಸಿ ಸಂಘಟನಾ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ, ಹಂಗಾಮಿ ಸಿಎಂ ಸಿದ್ದರಾಮಯ್ಯ ಅವರೊಂದಿಗೆ ತೆರಳಿದ ಶಾಸಕಾಂಗ ಪಕ್ಷದ ನೂತನ ನಾಯಕ ಡಿ.ಕೆ.ಶಿವಕುಮಾರ್, ಸರ್ಕಾರ ರಚನೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಲ್ಲಿ ಹಕ್ಕು ಮಂಡಿಸಿದರು. ಬಳಿಕ ರಾಜ್ಯಪಾಲರು ಡಿ.ಕೆ.ಶಿವಕುಮಾರ್ ಹಾಗೂ ಅವರ ತಂಡಕ್ಕೆ ಲೋಕಭವನದ ಆವರಣದಲ್ಲಿ ಜೂ.3ರ ಬುಧವಾರ ಸಂಜೆ 4.05 ಗಂಟೆಗೆ ಪ್ರಮಾಣ ವಚನ ಸ್ವೀಕರಿಸಲು ಆಹ್ವಾನಿಸಿದ್ದಾರೆ.

ಸರಳ ಸಮಾರಂಭ: ಕಾಂಗ್ರೆಸ್ ಶಾಸಕಾಂಗ ಸಭೆಗೂ ಮುನ್ನವೇ ಪಕ್ಷದ ಕಾರ್ಯಾಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್ ಸುದ್ದಿಗೋಷ್ಠಿಯಲ್ಲಿ ಪ್ರಮಾಣವಚನ ದಿನಾಂಕವನ್ನು ಅಧಿಕೃತವಾಗಿ ಪ್ರಕಟಿಸಿದರು. ಕೆಪಿಸಿಸಿ ತೀರ್ಮಾನದಂತೆ ಶಿವಕುಮಾರ್ ಸರಳವಾಗಿ ಅಧಿಕಾರ ಸ್ವೀಕರಿಸಲು ಸಮ್ಮತಿಸಿದ್ದಾರೆ. ಇಂಧನ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಮಿತವ್ಯಯದ ಉದ್ದೇಶದಿಂದ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ನಿಗದಿಯಾಗಿದ್ದ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ಗಾಜಿನಮನೆಗೆ ಸ್ಥಳಾಂತರಿಸಲಾಗಿದೆ ಎಂದರು.

ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳಿಗೆ ಅವಕಾಶ ಇರುವುದಿಲ್ಲ. ಅಂದು ಯಾರೂ ರಾಜಧಾನಿಗೆ ಬರಬಾರದೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತೇವೆ. ಪ್ರಮಾಣ ವಚನ ಸಮಾರಂಭಕ್ಕೆ ಯಾವುದೇ ಪ್ರವೇಶ ಪಾಸ್‌ಗಳನ್ನು ಮಾಡಿಸಿಲ್ಲ, ಶಾಸಕರು ಮತ್ತು ಗಣ್ಯರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಪ್ರತೀ ಜಿಲ್ಲೆಗೂ ತೆರಳಿ ಅಲ್ಲೇ ಅಭಿಮಾನಿಗಳು ಮತ್ತು ಕಾರ್ಯಕರ್ತರ ಆಶೀರ್ವಾದ ಪಡೆದುಕೊಳ್ಳಲು ನಿರ್ಧರಿಸಿದ್ದಾರೆ. ▶ 6ನೇ ಪುಟಕ್ಕೆ

ನೂತನ ಸಿಎಂ ಆಯ್ಕೆ ನೆರವೇರಿದೆ; ವಿಪಕ್ಷಗಳ 'ತಲ್ಲಣ' ಹುಸಿಯಾಗಿದೆ

ಎಐಸಿಸಿ ಸಂಘಟನಾ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಎದಿರೇಟು

ಬೆಂಗಳೂರು, ಮೇ 30(ಕೆಎಂಶಿ)– ರಾಜ್ಯದಲ್ಲಿ ನೂತನ ಮುಖ್ಯಮಂತ್ರಿ ಆಯ್ಕೆ ಅತ್ಯಂತ ಸುಗಮವಾಗಿ ನಡೆದಿದ್ದು, ಕಾಂಗ್ರೆಸ್ ಪಕ್ಷದಲ್ಲಿ ದೊಡ್ಡ 'ತಲ್ಲಣ' ಉಂಟಾಗಲಿದೆ ಎಂದು ಪ್ರತಿಪಕ್ಷಗಳು ಸೇರಿದಂತೆ ಹಲವರ ನಿರೀಕ್ಷೆ ಸಂಪೂರ್ಣ ಹುಸಿಯಾಗಿದೆ ಎಂದು ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ.

ಶಾಸಕಾಂಗ ಪಕ್ಷದ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಸ್ತಾಂತರ ಪ್ರಕ್ರಿಯೆ ಅತ್ಯಂತ ಸುಗಮವಾಗಿ ಮತ್ತು ಸಂತಸದಿಂದ ಮುಕ್ತಾಯಗೊಂಡಿದೆ. ಈ ಮೂಲಕ ಕಾಂಗ್ರೆಸ್ ಪಕ್ಷ ಒಂದು ಕುಟುಂಬ ಎನ್ನುವುದು ಸಾಬೀತಾಗಿದೆ. ಕುಟುಂಬದ ಎಲ್ಲ ಸದಸ್ಯರು ಒಗ್ಗಟ್ಟಾಗಿ ಕುಳಿತು ಒಮ್ಮತದಿಂದ ಸರ್ವಾನುಮತದೊಂದಿಗೆ ತೀರ್ಮಾನ ಕೈಗೊಂಡಿದ್ದೇವೆ ಎಂದು ಹೇಳಿದರು.

ಹೈಕಮಾಂಡ್ ಸೂಚನೆ ಅನ್ವಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ರಾಜೀನಾಮೆ ನೀಡುವ ಸಮಯದಲ್ಲಿ ಹೈಕಮಾಂಡ್ ನಿರ್ಧಾರವನ್ನು ಗೌರವಿಸುತ್ತೇನೆ ಎಂದು ಹೇಳುವ ಮೂಲಕ ಕಾಂಗ್ರೆಸ್ ಪಕ್ಷ ಒಂದು ಕುಟುಂಬವಿದ್ದಂತೆ ಎಂಬುದನ್ನು ಸಾಬೀತುಪಡಿಸಿದರು. ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಸ್ತಾಂತರ ನಡೆದರೆ ದೊಡ್ಡ ತಳಮಳ ಉಂಟಾಗಲಿದೆ. ಭಿನ್ನಮತ ಭುಗಿಲೇಳಲಿದೆ ಎಂದು ಪ್ರತಿಪಕ್ಷಗಳು ಸೇರಿದಂತೆ ಹಲವು ಮಾಧ್ಯಮಗಳು ವರದಿ ಮಾಡಿದ್ದವು. ಆದರೆ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅತ್ಯಂತ ಎತ್ತರದ ನಡವಳಿಕೆಯನ್ನು ಅನುಸರಿಸಿ ಎಲ್ಲರಿಗೂ ಮಾರ್ಗದರ್ಶಿಯಾಗಿದ್ದಾರೆ. ಈ ಮೂಲಕ ಕಾಂಗ್ರೆಸ್ ಪಕ್ಷ ಒಂದು ದೊಡ್ಡ ಕುಟುಂಬ ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದು ಬಣ್ಣಿಸಿದರು. ಸಿದ್ದರಾಮಯ್ಯ ಅವರ ರಾಜೀನಾಮೆಯಿಂದ ತೆರವಾದ ಶಾಸಕಾಂಗ ಪಕ್ಷದ ನಾಯಕನ ▶ 6ನೇ ಪುಟಕ್ಕೆ

ಸಿದ್ದರಾಮಯ್ಯ ಹೆಸರು ಸೂಚನೆ... ಡಾ.ಪರಮೇಶ್ವರ್ ಅನುಮೋದನೆ...

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಡಿ.ಕೆ.ಶಿವಕುಮಾರ್ ಒಕ್ಕೊರಲ ಆಯ್ಕೆ


ಬೆಂಗಳೂರು, ಮೇ 30(ಕೆಎಂಶಿ)–ಮಾಜಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಗೊಂಡಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ಸಂಜೆ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಸರ್ವಾನುಮತದಿಂದ ಶಿವಕುಮಾರ್ ಅವರನ್ನು ಮುಂದಿನ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಲಾಯಿತು.

ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಶಿವಕುಮಾರ್ ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಜೂನ್ 3ರಂದು ಅಧಿಕಾರ ಸ್ವೀಕರಿಸಲಿದ್ದಾರೆ. ಎಐಸಿಸಿ ಅದರಲ್ಲೂ ಅಧಿನಾಯಕ ರಾಹುಲ್ ಗಾಂಧಿ ಮಧ್ಯಪ್ರವೇಶದಿಂದ ನಾಯಕತ್ವಕ್ಕೆ ಶಿವಕುಮಾರ್ ಹೊರತುಪಡಿಸಿ ಯಾರದೇ ಸ್ಪರ್ಧೆಗೆ ಅವಕಾಶ ಇರಲಿಲ್ಲ.

ಎಐಸಿಸಿ ವೀಕ್ಷಕರಾಗಿದ್ದ ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಪಕ್ಷದ ನಿರ್ಧಾರವನ್ನು ಸಭೆಗೆ ತಿಳಿಸಿದರು.

ವರಿಷ್ಠರ ಆದೇಶದಂತೆ ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೆಸರು ಸೂಚಿಸಿ, ಮಾಜಿ ಸಚಿವ ಹಾಗೂ ಹಿರಿಯ ನಾಯಕ ಡಾ.ಜಿ.ಪರಮೇಶ್ವರ್ ಅನುಮೋದಿಸಿದರು. ಅನುಮೋದನೆ ಮಾಡುತ್ತಿದ್ದಂತೆ ಇಡೀ ಸಭೆ ಒಕ್ಕೊರಲಿನಿಂದ ಶಿವಕುಮಾರ್ ಅವರಿಗೆ ಬೆಂಬಲ ಸೂಚಿಸುವ ಮೂಲಕ ಸರ್ವಾನುಮತದಿಂದ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಮಾಡಲಾಯಿತು. ನಂತರ 10 ನಿಮಿಷಗಳ ವಿರಾಮ ನೀಡಲಾಗಿದೆ ಎಂದು ಸುರ್ಜೇವಾಲಾ ಪ್ರಕಟಿಸಿದರು. ಬಳಿಕ ಹಂಗಾಮಿ ಸಿಎಂ ಸಿದ್ದರಾಮಯ್ಯ, ಎಐಸಿಸಿ ಸಂಘಟನಾ ಕಾರ್ಯದರ್ಶಿ ವೇಣುಗೋಪಾಲ್, ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರು ಸಿಎಂ ಕೊಠಡಿಗೆ ತೆರಳಿದರು. ಅಲ್ಲಿಂದ ಸಮ್ಮೇಳನಾ ಸಭಾಂಗಣಕ್ಕೆ ಮೂವರು ಒಟ್ಟಿಗೆ ವಾಪಸ್ ಬಂದು ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಪ್ರಕಟಿಸಿದರು.

ಶಾಸಕಾಂಗ ಪಕ್ಷದ ನಾಯಕರಾಗಿ ಡಿ.ಕೆ.ಶಿವಕುಮಾರ್ ಆಯ್ಕೆ ಆಗುತ್ತಿದ್ದಂತೆ ಪಕ್ಷದ ಶಾಸಕರು, ಹಿರಿಯ ಸದಸ್ಯರು ಅವರಿಗೆ ಹೂಗುಚ್ಛ ನೀಡಿ ಅಭಿನಂದನೆ ಸಲ್ಲಿಸಿದರು. ಬಳಿಕ ನೂತನ ನಾಯಕ ಡಿ.ಕೆ.ಶಿವಕುಮಾರ್, ನಿರ್ಗಮಿತ ನಾಯಕ ಸಿದ್ದರಾಮಯ್ಯ ಅವರ ಮುಖ್ಯಮಂತ್ರಿ ಅವಧಿಯ ಸೇವೆಯನ್ನು ಕೊಂಡಾಡುವ ನಿರ್ಣಯ ಮಂಡಿಸಿ, ಸಭೆಯ ಬೆಂಬಲ ಕೋರಿದರು. ಇದಕ್ಕೆ ಸಭೆ ಒಕ್ಕೊರಲಿನಿಂದ ಬೆಂಬಲಿಸಿತು.



ಶಾಸಕಾಂಗ ಪಕ್ಷದ ನೂತನ ನಾಯಕ ಡಿ.ಕೆ.ಶಿವಕುಮಾರ್ ಅವರನ್ನು ಹಂಗಾಮಿ ಸಿಎಂ ಸಿದ್ದರಾಮಯ್ಯ ಅಭಿನಂದಿಸಿದರು.

ಎಲ್ಲವೂ ಸುಸೂತ್ರ ಮೇ 28ರಂದು ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅವರ ರಾಜೀನಾಮೆಯನ್ನು ರಾಜ್ಯಪಾಲರು ಮೇ 29ರಂದು ಅಂಗೀಕರಿಸಿ ಮಂತ್ರಿಮಂಡಲ ವಿಸರ್ಜಿಸಿದರು. ರಾಜೀನಾಮೆ ಅಂಗೀಕಾರ ಆಗುತ್ತಿದ್ದಂತೆ ಎಐಸಿಸಿ ನಾಯಕರು ಶಿವಕುಮಾರ್ ಹೆಸರನ್ನು ಮುನ್ನೆಲೆಗೆ ತಂದಿಲ್ಲದೆ, ಮೇ 30ಕ್ಕೆ ಶಾಸಕಾಂಗ ಪಕ್ಷದ ಸಭೆಯನ್ನೂ ನಿಗದಿಪಡಿಸಿದರು. ಶಾಸಕಾಂಗ ಸಭೆ ನಿಗದಿಗೂ ಮುನ್ನ ನಿರ್ಗಮಿತ ಸಿಎಂ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿಕೊಂಡ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಹೊಸ ನಾಯಕನ ಆಯ್ಕೆ ಹಾಗೂ ಹೊಸ ಸರ್ಕಾರ ಕುರಿತು ಸಮಾಲೋಚಿಸಿದರು. ಸರ್ಕಾರ ರಚನೆ ಕುರಿತಂತೆ ರಾಹುಲ್ ಗಾಂಧಿ ಉಭಯ ನಾಯಕರಿಗೂ ಕೆಲವು ಸಲಹೆ–ಸೂಚನೆ ನೀಡಿ ಕಳುಹಿಸಿಕೊಟ್ಟರು. ಅದರಂತೆ, ಪ್ರಮಾಣವಚನ ಸಮಾರಂಭ ಆಡಂಬರವಿಲ್ಲದೆ ಸರಳವಾಗಿರುತ್ತದೆ ಹಾಗೂ ಮಂತ್ರಿಮಂಡಲ ಸ್ವರೂಪ ಕುರಿತು ಬುಧವಾರದವರೆಗೂ ಕಾಯಬೇಕಿದೆ.

ಪ್ರಿಯ ಶಿವಕುಮಾರ್.... ನಿಮಗೆ ಸದಾ ಯಶಸ್ಸು ಸಿಗಲಿ...!

ನಿರ್ಗಮಿತ ಸಿಎಂ ಸಿದ್ದರಾಮಯ್ಯರಿಂದ ಭಾವಿ ಸಿಎಂ ಡಿ.ಕೆ.ಶಿವಕುಮಾರ್‌ಗೆ ಶುಭ ಕೋರಿಕೆ



ಬೆಂಗಳೂರು: ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾವಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮನದಾಳದ ಮಾತುಗಳೊಂದಿಗೆ ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಿದ್ದಾರೆ.

ಈ ಸಂಬಂಧ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, 'ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಸಂಗಾತಿ ಡಿ.ಕೆ.ಶಿವಕುಮಾರ್ ಅವರಿಗೆ ಹಾರ್ದಿಕವಾದ ಅಭಿನಂದನೆಗಳು' ಎಂದು ತಿಳಿಸಿದ್ದಾರೆ.

ಪ್ರಿಯ ಶಿವಕುಮಾರ್, ನಿಮ್ಮಲ್ಲಿರುವ ಅದಮ್ಯವಾದ ಕ್ರಿಯಾಶೀಲತೆ, ಸಂಘಟನಾ ಚಾತುರ್ಯ ಮತ್ತು ಕಾಂಗ್ರೆಸ್ ಪಕ್ಷದ ಮೇಲಿನ ಸಂಶಯಾತೀತ ನಿಷ್ಠೆಯನ್ನು ಒಬ್ಬ ಸಹದ್ಯೋಗಿಯಾಗಿ ನಾನು ಸಮೀಪದಿಂದ ಗಮನಿಸಿದ್ದೇನೆ. ಇವೆಲ್ಲದರ ಸದುಪಯೋಗ ರಾಜ್ಯದ ಜನತೆಗೆ ಆಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುವೆ.

ಇಂದು ಕರ್ನಾಟಕ ತಲಾವಾರು ಆದಾಯದಲ್ಲಿ ದೇಶದಲ್ಲೇ ಮೊದಲನೇ ಸ್ಥಾನದಲ್ಲಿರುವುದು ಮಾತ್ರವಲ್ಲ ಸಂಪತ್ತು, ಅಧಿಕಾರ ಮತ್ತು ಅವಕಾಶಗಳ ಸಮಾನ ಹಂಚಿಕೆಯಲ್ಲಿಯೂ ದೇಶಕ್ಕೆ ಮಾದರಿಯಾಗಿದೆ. ನಾವು ಪ್ರಾರಂಭಿಸಿರುವ ಪ್ರತಿಯೊಂದು ಯೋಜನೆಯನ್ನೂ ಉಳಿದ ರಾಜ್ಯಗಳು ಮಾದರಿಯಾಗಿ ಸ್ವೀಕರಿಸಿ ಅನುಷ್ಠಾನಕ್ಕೆ ತರುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ. ಒಟ್ಟು 8 ವರ್ಷಗಳ ಕಾಲ ▶ 6ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆ 2ರ ಫಲಿತಾಂಶ ಪ್ರಕಟ: ಶೇ.62 ಫಲಿತಾಂಶ

ಬೆಂಗಳೂರು, ಮೇ 30– ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ರ ಫಲಿತಾಂಶ ಪ್ರಕಟವಾಗಿದ್ದು, ಪರೀಕ್ಷೆ ಬರೆದಿದ್ದ 49,351 ವಿದ್ಯಾರ್ಥಿಗಳ ಪೈಕಿ 31,080 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.62 ಫಲಿತಾಂಶ ದಾಖಲಾಗಿದೆ. ಮೇ 18ರಿಂದ 25ರವರೆಗೆ 358 ಪರೀಕ್ಷಾ ಕೇಂದ್ರಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ನ್ನು ನಡೆಸಲಾಗಿತ್ತು. ವಿಶೇಷ ಅಂದರೆ ಪರೀಕ್ಷೆ–2ರಲ್ಲಿ ಬರೋಬ್ಬರಿ 8,385 ಶಾಲಾ ವಿದ್ಯಾರ್ಥಿಗಳು ತಮ್ಮ ಫಲಿತಾಂಶವನ್ನು ಉತ್ತಮಪಡಿಸಿಕೊಂಡಿದ್ದಾರೆ. 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರ ಫಲಿತಾಂಶ ಏ.23ರಂದು ಪ್ರಕಟವಾಗಿದ್ದು, ಶೇ.94.1ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ 7,70,209 ವಿದ್ಯಾರ್ಥಿಗಳ ಪೈಕಿ 7,24,794 ಮಕ್ಕಳು ಪಾಸ್ ಆಗಿದ್ದರು. ಶೇ 96.18 ರಷ್ಟು ಬಾಲಕಿಯರು, ಶೇ 91.94ರಷ್ಟು ಬಾಲಕರು ಉತ್ತೀರ್ಣರಾಗಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡಾ 98.40ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಫಲಿತಾಂಶದಲ್ಲಿ ಮೊದಲ ಸ್ಥಾನ ಪಡೆದಿತ್ತು. ಉಡುಪಿ ಜಿಲ್ಲೆ ಶೇ.98.18ರ ಫಲಿತಾಂಶದೊಂದಿಗೆ 2ನೇ ಸ್ಥಾನ, ಉತ್ತರ ಕನ್ನಡ 3ನೇ ಸ್ಥಾನ (ಶೇ.98.09), ಹಾಸನ 4ನೇ ಸ್ಥಾನ (ಶೇ.97.51) ಗಳಿಸಿದ್ದವು. ಈ ಬಾರಿ ಎಸ್‌ಎಸ್‌ಎಲ್‌ಸಿ 3ನೇ ಪರೀಕ್ಷೆ ಇರುವುದಿಲ್ಲ. ಈ ಬಗ್ಗೆ ಏ.23ರಂದು ನಡೆದ ಗೋಷ್ಠಿಯಲ್ಲೇ ಅಂದಿನ ಶಿಕ್ಷಣ ಸಚಿವ ಮಧು ಬಂಗಾರಪ್ಪ ಈ ಬಗ್ಗೆ ಮಾಹಿತಿ ನೀಡಿದ್ದರು. ಪರೀಕ್ಷೆ 1ರಲ್ಲಿ ಉತ್ತಮ ಫಲಿತಾಂಶ ಬಂದಿರುವುದರಿಂದ 3ನೇ ಪರೀಕ್ಷೆ ಇರಲ್ಲ ಎಂದಿದ್ದರು.

ಇಂದು ಐಪಿಎಲ್ ಫೈನಲ್

ಮತ್ತೆ ಕಪ್ ಗೆಲ್ಲುವ ತವಕದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ



ಮೈಸೂರು, ಮೇ 30(ವಿವಿಹೆಚ್)– 2026ರ ಐಪಿಎಲ್ (ಇಂಡಿಯನ್ ಪ್ರೀಮಿಯರ್ ಲೀಗ್) ಕೊನೆಯ ಹಂತಕ್ಕೆ ತಲುಪಿದ್ದು, ನಾಳೆ(ಭಾನುವಾರ) ಹಾಲಿ ಚಾಂಪಿಯನ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟನ್ಸ್ ತಂಡಗಳು ಟ್ರೋಫಿಗಾಗಿ ಸೆಣಸಾಡಲಿವೆ.

ನಾಳೆ (ಭಾನುವಾರ) ಸಂಜೆ 7.30ಕ್ಕೆ ನಡೆಯಲಿರುವ ಈ ಹೈ ವೋಲ್ಟೇಜ್ ಪಂದ್ಯಕ್ಕೆ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಸಾಕ್ಷಿಯಾಗಲಿದೆ. ಈ ಪಂದ್ಯದಲ್ಲಿ ಗೆದ್ದ ತಂಡಕ್ಕೆ 2ನೇ ಟ್ರೋಫಿ ಸಿಗಲಿದೆ.

ಟೂರ್ನಿಯುದ್ಧಕ್ಕೂ ಹೈ ರಿಸ್ಕ್ ಹಾಗೂ ದಿಟ್ಟ ಪ್ರದರ್ಶನಕ್ಕೆ ಹೆಸರುವಾಸಿಯಾಗಿರುವ, ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡೂ ವಿಭಾಗದಲ್ಲಿಯೂ ಉತ್ತಮ ಪ್ರದರ್ಶನ ತೋರುತ್ತಿರುವ ಆರ್‌ಸಿಬಿ, ಭರ್ಜರಿ ಬೌಲಿಂಗ್ ಫಾರ್ಮ್ ಹಾಗೂ ಸಮತೋಲಿತ ಬ್ಯಾಟಿಂಗ್ ಲೈನ್ ಅಪ್ ಹೊಂದಿರುವ ಗುಜರಾತ್ ಟೈಟನ್ಸ್ ತಂಡದೊಂದಿಗೆ ಸೆಣಸಬೇಕಿದೆ.

ನರೇಂದ್ರ ಮೋದಿ ಕ್ರೀಡಾಂಗಣ ಗುಜರಾತ್ ತಂಡಕ್ಕೆ ತವರಿನಂಗಳವಾಗಿದ್ದು, ಲೀಗ್‌ನಲ್ಲಿ ತಾವಾಡಿದ 7 ಪಂದ್ಯಗಳಲ್ಲಿ 6ರಲ್ಲಿ ಗೆದ್ದು ಬೀಗುವ ಮೂಲಕ ಪಾರುಪತ್ಯ ಮೆರೆದಿದೆ. ಗುಜರಾತ್ ತಂಡವನ್ನು ತವರಿನಂಗಳದಲ್ಲಿ ಮಣಿಸುವುದು ಸುಲಭದ ಮಾತಲ್ಲ. ಗುಜರಾತ್ ಕಟ್ಟಿಹಾಕಿ ಟ್ರೋಫಿ ಗೆಲ್ಲಲು ಆರ್‌ಸಿಬಿ ತಂತ್ರವೇನು ಎಂಬುದನ್ನು ಕಾದು ನೋಡಬೇಕಿದೆ. ಇನ್ನು ಮೇಲ್ನೋಟಕ್ಕೆ ನೋಡುವುದಾದರೆ, ▶ 6ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ ಭಾರೀ ಮಳೆಗೆ ಅಪಾರ ಹಾನಿ

ಮೈಸೂರು ನಗರದಲ್ಲಿ 20ಕ್ಕೂ ಹೆಚ್ಚು ಮರಗಳು ಧರೆಗೆ

ಮೈಸೂರು, ಮೇ30(ಜಿಎ)–ಮೈಸೂರು ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಸುರಿದ ಭಾರೀ ಗಾಳಿ ಸಹಿತ ಮಳೆಯಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಹಲವು ಭಾಗಗಳಲ್ಲಿ ಮರಗಳು ಉರುಳಿ ಬಿದ್ದು ಸಾರ್ವಜನಿಕ ಆಸ್ತಿಗೆ ಹಾನಿಯಾಗಿದೆ. ಆದರೆ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಮೈಸೂರು ನಗರದಲ್ಲೇ ಸುಮಾರು 20ಕ್ಕೂ ಹೆಚ್ಚು ಮರಗಳು ಉರುಳಿದ ಪ್ರಕರಣಗಳು ವರದಿಯಾಗಿವೆ. ಅಲ್ಲದೆ, ಭೂಗತ ಒಳ ಚರಂಡಿ (ಯುಜಿಡಿ) ಮಾರ್ಗಗಳು ಮುಚ್ಚಿಕೊಂಡ ಪರಿಣಾಮ ಹಲವು ರಸ್ತೆಗಳಲ್ಲಿ ಒಳಚರಂಡಿ ನೀರು ಹರಿದು ಸಾರ್ವಜನಿಕರಿಗೆ ತೊಂದರೆ ಉಂಟಾಯಿತು.

ಮೈಸೂರು ಮಹಾನಗರ ಪಾಲಿಕೆಯ ಮೂರು ಅಭಯ ತಂಡಗಳನ್ನು ಎರಡು ತಂಡಗಳಾಗಿ ಮಾಡಿ ಎರಡು ಪಾಳಿಗಳಲ್ಲಿ ಕಾರ್ಯನಿರ್ವಹಿಸಿ, ಪಾಲಿಕೆಯ ಸಹಾಯವಾಣಿ ಸಂಖ್ಯೆಗೆ ಬಂದ ದೂರುಗಳನ್ನು ಆದ್ಯತೆಯ ಮೇರೆಗೆ ಪರಿಹರಿಸಿವೆ. ಕಳೆದ ರಾತ್ರಿ 16 ದೂರುಗಳು ಹಾಗೂ ಇಂದು ಬೆಳಗ್ಗೆ ಇನ್ನೂ 4 ದೂರುಗಳು ದಾಖಲಾಗಿವೆ.

ಚಾಮರಾಜಪುರಂನ ಪಶ್ಚಿಮ ಆರ್‌ಟಿಒ ಕಚೇರಿ ಎದುರಿನ ಸರ್ಕಾರಿ ತಮಿಳು ಹಿರಿಯ ಪ್ರಾಥಮಿಕ ಶಾಲೆ ಸಮೀಪದ ಬೃಹತ್ ಮರದ ಕೊಂಬೆಗಳು ಮಳೆಯಿಂದ ಮುರಿದು ಬಿದ್ದಿವೆ. ಗಾಯತ್ರಿಪುರಂನಲ್ಲಿ ಮಿಂಚು ಬಡಿದ ಪರಿಣಾಮ ಮರದ ಮಧ್ಯಭಾಗ ಸೀಳಿ ಹಾನಿಗೊಳಗಾಗಿದೆ.

ಜನತಾ ನಗರದಲ್ಲಿ ಬಿರುಗಾಳಿಯಿಂದ ವಿದ್ಯುತ್ ತಂತಿಗಳತ್ತ ವಾಲಿದ್ದ ತೆಂಗಿನ ಮರದ ಕೊಂಬೆಗಳನ್ನು ಅಭಯ ಸಿಬ್ಬಂದಿ ಕ್ರೇನ್ ಸಹಾಯದಿಂದ ತೆರವುಗೊಳಿಸಿದರು. ಸಿದ್ಧಾರ್ಥನಗರದ 5ನೇ ಕ್ರಾಸ್‌ನಲ್ಲಿ ಮಧ್ಯರಾತ್ರಿ ವೇಳೆ ಟಾರ್ಚ್‌ಲೈಟ್ ಬೆಳಕಿನಲ್ಲಿ ಮರ ಕತ್ತರಿಸುವ ಯಂತ್ರದ ಸಹಾಯದಿಂದ ರಸ್ತೆ ಮೇಲೆ ಬಿದ್ದಿದ್ದ ಮರವನ್ನು ತೆರವುಗೊಳಿಸಲಾಯಿತು.

ಮೈಸೂರು ತಾಲ್ಲೂಕಿನ ಕುಪ್ಪೆಗಾಲ ಹಾಗೂ ಸಜ್ಜೆಹುಂಡಿ ಗ್ರಾಮಗಳಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಲಿಮಿಟೆಡ್‌ಗೆ ಸೇರಿದ ಎರಡು ವಿದ್ಯುತ್ ಕಂಬಗಳು ಹಾನಿಗೊಳಗಾಗಿದ್ದು, ಅವುಗಳಲ್ಲಿ ಒಂದು ಕಂಬ ಬಿರುಗಾಳಿಯ ಹೊಡೆತಕ್ಕೆ ಕುಸಿದಿದೆ. ಇದೇ ವೇಳೆ, ಬೋಗಾದಿ ರಸ್ತೆಯ ಹರ್ಷ ಬಾರ್ ಜಂಕ್ಷನ್ ಸಮೀಪ ಕಾಮಗಾರಿಗಾಗಿ ತೋಡಲಾಗಿದ್ದ ಹೊಂಡದಲ್ಲಿ ಕಾರಿನ ಮುಂಭಾಗದ ಚಕ್ರಗಳು ಸಿಲುಕಿದ ಘಟನೆ ನಡೆದಿದೆ.







ಮೈಸೂರು ನಗರದಲ್ಲಿ ಶುಕ್ರವಾರ ರಾತ್ರಿ ಸುರಿದ ಮಳೆಗೆ ಬೋಗಾದಿ ರಸ್ತೆಯ ಹರ್ಷ ಬಾರ್ ಜಂಕ್ಷನ್ ಸಮೀಪ ಕಾಮಗಾರಿಗಾಗಿ ತೋಡಲಾಗಿದ್ದ ಹೊಂಡದಲ್ಲಿ ಕಾರಿನ ಚಕ್ರಗಳು ಸಿಲುಕಿರುವುದು. ಮತ್ತೊಂದು ಚಿತ್ರದಲ್ಲಿ ಗಾಯತ್ರಿಪುರಂನಲ್ಲಿ ಬೃಹತ್ ಮರವೊಂದು ವಾಹನದ ಮೇಲೆ ಉರುಳಿರುವುದನ್ನು ಹಾಗೂ ಹೊಲದಲ್ಲಿ ಲೈಟ್ ಕಂಬ ಉರುಳಿರುವುದನ್ನು ಕಾಣಬಹುದು.

ದಾಸನೂರಿನಲ್ಲಿ ಗರಿಷ್ಠ ಮಳೆ ದಾಖಲು

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರ(ಕೆಎಸ್‌ಎನ್‌ಡಿಎಂಸಿ) ಮಾಹಿತಿ ಪ್ರಕಾರ, ಮೇ 30ರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದಾಸನೂರು ಗ್ರಾಮದಲ್ಲಿ ಗರಿಷ್ಠ 52.5 ಮಿ.ಮೀ. ಮಳೆಯಾಗಿದೆ.

ನೆರೆಯ ಜಿಲ್ಲೆಗಳ ಪೈಕಿ ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಚೆಂಬು ಗ್ರಾಮದಲ್ಲಿ 86.5 ಮಿ.ಮೀ. ಮಳೆ ದಾಖಲಾಗಿದ್ದು, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೋಗಾಡಿಯಲ್ಲಿ 66.5 ಮಿ.ಮೀ., ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಹಂಡ್ರಾಳು ಗ್ರಾಮದಲ್ಲಿ 53.5 ಮಿ.ಮೀ. ಹಾಗೂ ಚಾಮರಾಜನಗರ ಜಿಲ್ಲೆಯ ಉಮ್ಮತ್ತೂರಿನಲ್ಲಿ 43 ಮಿ.ಮೀ. ಮಳೆಯಾಗಿದೆ. ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿಯೂ ಮಳೆಯಾಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಐದನೇ ಪುಟದಿಂದ

ನಿಮಗೆ ಸದಾ ಯಶಸ್ಸು ಸಿಗಲಿ...!

ರಾಜ್ಯದ ಮುಖ್ಯಮಂತ್ರಿಯಾಗಿ ಕನ್ನಡಿಗರ ಸೇವೆಯನ್ನು ಮಾಡಲು ಒದಗಿಬಂದಿದ್ದ ಅವಕಾಶವನ್ನು ಬಳಸಿಕೊಂಡು ಕರ್ನಾಟಕವನ್ನು ಸಮೃದ್ಧ, ಸ್ವಾವಲಂಬಿ ಮತ್ತು ಸ್ವಾಭಿಮಾನಿ ರಾಜ್ಯವನ್ನಾಗಿ ಅಭಿವೃದ್ಧಿ ಪಡಿಸಿದ ಹೆಮ್ಮೆ ನನ್ನದಾಗಿದೆ. ಈ ಅಭಿವೃದ್ಧಿಯ ಬಂಡಿಯನ್ನು ಮುಂದಕ್ಕೆ ಎಳೆದೊಯ್ಯುವ ಜವಾಬ್ದಾರಿ ನಿಮ್ಮ ಹೆಗಲ ಮೇಲಿದೆ. ಅದಕ್ಕೆ ಬೇಕಾಗಿರುವ ಬದ್ಧತೆ, ಸಾಮರ್ಥ್ಯ ಮತ್ತು ಮುನ್ನೋಟ ನಿಮ್ಮಲ್ಲಿದೆ ಎನ್ನುವ ನಂಬಿಕೆ ನನ್ನದು. ಇಡೀ ದೇಶ ಇಂದು ಆರ್ಥಿಕ ಅಭದ್ರತೆಯಲ್ಲಿ ಭೀತಿಗೊಳಗಾಗಿರುವ ಸ್ಥಿತಿಯಲ್ಲಿ ರಾಜ್ಯದ ಜನತೆ ಕೂಡಾ ಭವಿಷ್ಯದ ಬಗ್ಗೆ ಆತಂಕಿತರಾಗಿದ್ದಾರೆ. ಸಮರ್ಥ ಆಡಳಿತದ ಮೂಲಕ ಅವರಲ್ಲಿ ಭರವಸೆಯನ್ನು ಹುಟ್ಟಿಸುವ ಜೊತೆಯಲ್ಲಿ ರಾಜ್ಯವನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸುವ ಜವಾಬ್ದಾರಿ ನಿಮ್ಮ ಮೇಲಿದೆ.

ಇತ್ತೀಚಿನ ದಿನಗಳಲ್ಲಿ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯವಾಗಿ ಸ್ವಲ್ಪ ಹಿನ್ನಡೆಯಾಗಿದೆ. ನಾವು ಚುನಾವಣೆಯಲ್ಲಿ ಸೋಲಬಹುದು, ಗೆಲ್ಲಬಹುದು. ಆದರೆ ಸೈದ್ಧಾಂತಿಕವಾಗಿ ಎಂದೂ ಸೋಲಬಾರದು. ಒಂದು ರಾಜಕೀಯ ಪಕ್ಷ ಸೈದ್ಧಾಂತಿಕವಾಗಿ ಸೋತರೆ ಆ ಪಕ್ಷ ಚುನಾವಣೆಯನ್ನು ಗೆಲ್ಲಲಾಗದೆ ನಾಶವಾಗುತ್ತದೆ ಎಂದು ನಂಬಿದವನು ನಾನು. ರಾಜ್ಯದ ಅಭಿವೃದ್ಧಿಯ ಜೊತೆಯಲ್ಲಿ ನಮ್ಮೆಲ್ಲರ ಮಾತೃಸ್ವರೂಪಿಯಾಗಿರುವ ಕಾಂಗ್ರೆಸ್ ಪಕ್ಷದ ಗತವೈಭವವನ್ನು ಮರಳಿ ಸ್ಥಾಪಿಸುವ ಹೊಣೆಗಾರಿಕೆ ಕೂಡಾ ನಮ್ಮೆಲ್ಲರ ಮೇಲಿದೆ. ಕಾಂಗ್ರೆಸ್ ಪಕ್ಷ ಇಂತಹ ಸವಾಲಿನ ಅನೇಕ ಅಗ್ನಿದಿವ್ಯಗಳನ್ನು ಯಶಸ್ವಿಯಾಗಿ ದಾಟಿ ಬಂದಿರುವ ಇತಿಹಾಸ ನಮಗೆಲ್ಲರಿಗೂ ಪ್ರೇರಣೆಯಾಗಲಿ. ನಿಮ್ಮ ನಾಯಕತ್ವ ಬಲ ಈ ಪ್ರಯತ್ನವನ್ನು ಸಫಲಗೊಳಿಸಲಿ.

ಕಾಂಗ್ರೆಸ್ ಪಕ್ಷದ ಹಿರಿಯರು ತ್ಯಾಗ–ಬಲಿದಾನಗಳ ಮೂಲಕ ಕಟ್ಟಿದ ಸೌಹಾರ್ದ ಭಾರತವನ್ನು ಜಾತಿ–ಧರ್ಮಗಳ ಹೆಸರಲ್ಲಿ ಒಡೆದು ಹಾಕಲಾಗುತ್ತಿದೆ. ಸಂವಿಧಾನವನ್ನೇ ಪ್ರಶ್ನಿಸಲಾಗುತ್ತಿದೆ. ಪ್ರಭುತ್ವವನ್ನು ಪ್ರಶ್ನಿಸುವವರ ದಮನ ಮಾಡಲಾಗುತ್ತಿದೆ. ಗಾಂಧಿಯವರನ್ನು ಕೊಂದವರು ಇಂದು ಗೋಡ್ಸೆಯನ್ನು ಮೆರೆಸಲು ಹೊರಟಿದ್ದಾರೆ.

ಸಂವಿಧಾನದ ಆಶಯಗಳಾದ ಸಮಾನತೆ, ಸೌಹಾರ್ದತೆ, ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತತೆಯ ಮೌಲ್ಯಗಳನ್ನೇ ತನ್ನ ಸಿದ್ಧಾಂತವಾಗಿ ಸ್ವೀಕರಿಸಿರುವ ಕಾಂಗ್ರೆಸ್ ಪಕ್ಷವನ್ನು ಸೈದ್ಧಾಂತಿಕವಾಗಿ ತಳಮಟ್ಟದಿಂದಲೇ ಗಟ್ಟಿಗೊಳಿಸಲು ಮುಂದಾಗುವುದೇ ದೇಶವನ್ನು ಉಳಿಸಲು ನಮಗೆ ಇರುವ ಏಕೈಕ ಮತ್ತು ಸರಿಯಾದ ದಾರಿಯಾಗಿದೆ. ದೇಶದ ಏಕತೆ, ಸಮಗ್ರತೆಯನ್ನು ಉಳಿಸಲು ಸಂವಿಧಾನದ ಗೌರವವನ್ನು ಕಾಪಾಡಲು ಎರಡನೇ ಸ್ವಾತಂತ್ರ್ಯ ಹೋರಾಟ ನಡೆಸಬೇಕಾಗಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಈ ಹೋರಾಟದಲ್ಲಿ ಇಡೀ ಶಾಸಕಾಂಗ ಪಕ್ಷ ಮಾತ್ರವಲ್ಲ ರಾಜ್ಯದ ಏಳುಕೋಟಿ ಜನತೆ ನಿಮ್ಮ ಜೊತೆಯಲ್ಲಿರುತ್ತದೆ. ನಿಮಗೆ ಸದಾ ಯಶಸ್ಸು ಸಿಗಲಿ... ಎಂದು ಮನಸಾರೆ ಹಾರೈಸಿದ್ದಾರೆ.

ಡಿ.ಕೆ.ಶಿವಕುಮಾರ್ ಪ್ರಮಾಣ ವಚನ

ಇಂಧನ ಸೇರಿದಂತೆ ಬೆಲೆಗಳು ಹೆಚ್ಚಾಗಿರುವ ಈ ಸಂದರ್ಭದಲ್ಲಿ ದೂರದ ಊರುಗಳಿಂದ ಬರುವ ಮೂಲಕ ನಿಮ್ಮ ಸಮಯ ಮತ್ತು ಹಣವನ್ನು ವೆಚ್ಚ ಮಾಡಬೇಡಿ. ಅವರು ಅಧಿಕಾರ ವಹಿಸಿ ಕೊಳ್ಳುವ ಕ್ಷಣದಿಂದಲೇ ಸರ್ಕಾರ ಮಿತ ವ್ಯಯ ಪಾಲನೆಗೆ ಮುಂದಾಗಿದೆ.

ನೀವುಗಳು ಬಂದು ಲೋಕಭವನದ ಹೊರಗೆ ಗೊಂದಲ ಸೃಷ್ಟಿಸಬೇಡಿ, ನಿಮ್ಮಗಳ ಆಶಯದಂತೆ ಸಿದ್ದರಾಮಯ್ಯ ಸರ್ಕಾರದ ಮಾದರಿಯಲ್ಲೇ ಉತ್ತಮ ಆಡಳಿತ ನೀಡಲಿದ್ದಾರೆ. ವಿಧಾನಸೌಧದ ಮುಂಭಾಗ ಇಲ್ಲವೇ ಕಂಠೀರವ ಕ್ರೀಡಾಂ ಗಣದಲ್ಲಿ ಪ್ರಮಾಣ ವಚನ ಸ್ವೀಕರಿಸಲು ನಿರ್ಧರಿಸಿದ್ದರು. ಆದರೆ, ಪಕ್ಷದ ಅಧಿ ನಾಯಕ ರಾಹುಲ್ ಗಾಂಧಿ ಇದಕ್ಕೆ ಕಡಿವಾಣ ಹಾಕಿ, ಸರಳವಾಗಿ ಅಧಿಕಾರ ಸ್ವೀಕಾರಕ್ಕೆ ಸೂಚಿಸಿದ್ದಾರೆ. ಬಹುತೇಕ ದೆಹಲಿಯಿಂದ ಯಾವುದೇ ನಾಯಕರು ಸಮಾರಂಭಕ್ಕೆ ಬರುವ ಸಾಧ್ಯತೆಗಳಿಲ್ಲ. ರಾಹುಲ್‌ಗಾಂಧಿ ಆದೇಶದ ಹಿನ್ನೆಲೆಯಲ್ಲಿ ಶಿವಕುಮಾರ್ ಇಂದು ಲೋಕಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಿ, ಲೋಕಭವನದ ಗಾಜಿನ ಮನೆಯಲ್ಲೇ ಪ್ರಮಾಣವಚನ ಸ್ವೀಕಾರಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೋರಿಕೊಂಡರು. ರಾಜ್ಯಪಾಲರು ಸಮಯ ನೀಡಿದ ನಂತರವೇ ಕೆಪಿಸಿಸಿ ಬುಧವಾರದಂದು ಪ್ರಮಾಣವಚನ ಸಮಾರಂಭ ನಡೆಯಲಿದೆ ಎಂದು ಅಧಿಕೃತವಾಗಿ ಪ್ರಕಟಿಸಿತು.

ಇದಕ್ಕೂ ಮೊದಲು ಶಿವಕುಮಾರ್, ತಮ್ಮ ಆರಾಧ್ಯ ದೈವ ತುಮಕೂರಿನ ಕಾಡಸಿದ್ದೇಶ್ವರ ಅಜ್ಜಯ್ಯ ಪೀಠದ ಆದೇಶದಂತೆ ಜೂ. 3ರಂದು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲು ನಿರ್ಧರಿಸಿದರು ಎನ್ನಲಾಗಿದೆ.

ತಮ್ಮ ಬದುಕಿನ ಪ್ರತಿಯೊಂದು ಹಂತದಲ್ಲೂ ಅಜ್ಜಯ್ಯ ಪೀಠದ ಅಪ್ಪಣೆ ಪಡೆದ ನಂತರವೇ ಶಿವಕುಮಾರ್ ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳುತ್ತಾ ಬಂದಿದ್ದಾರೆ.

ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಗೊಂಡ ಮರುದಿನವೇ ಅಂದರೆ, ಮೇ 31 ಅಥವಾ ಜೂ.1ರಂದು ಅಧಿಕಾರ ಸ್ವೀಕರಿಸಲು ತೀರ್ಮಾನ ಮಾಡಿದ್ದರಾದರೂ, ತಮ್ಮ ನಿರ್ಧಾರ ಬದಲಿಸಿ, ಪೀಠದ ಆದೇಶದಂತೆ ಬುಧವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ವಿಪಕ್ಷಗಳ 'ತಲ್ಲಣ' ಹುಸಿಯಾಗಿದೆ

ಆಯ್ಕೆಗಾಗಿ ಇಂದು ಶಾಸಕಾಂಗ ಸಭೆ ನಡೆಯಿತು. ಸಭೆಯಲ್ಲಿ ಎಲ್ಲಾ ಶಾಸಕರು ಸರ್ವಾನುಮತದ ನಿರ್ಧಾರ ತೆಗೆದುಕೊಳ್ಳುವ ಅಧಿ ಕಾರವನ್ನು ಹೈಕಮಾಂಡ್‌ಗೆ ನೀಡಿದರು. ಆನಂತರ ನಾವುಗಳೆಲ್ಲ ಒಟ್ಟಾಗಿ ಕುಳಿತು ಹೈಕಮಾಂಡ್ ಜೊತೆ ಚರ್ಚೆ ಮಾಡಿದೆವು. ಹೈಕಮಾಂಡ್ ಸಿದ್ದರಾಮಯ್ಯ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಉಪಮುಖ್ಯಮಂತ್ರಿಯಾಗಿದ್ದ ಡಿ.ಕೆ.ಶಿವ ಕುಮಾರ್ ಅವರ ಹೆಸರನ್ನು ಸೂಚಿಸಿತು. ಅದನ್ನು ಮತ್ತೆ ಶಾಸಕಾಂಗ ಸಭೆಯಲ್ಲಿ ಸಿದ್ದರಾಮಯ್ಯ ಅವರು ಪ್ರಸ್ತಾಪಿಸಿದರು ಅದನ್ನು ಹಿರಿಯ ನಾಯಕ ಡಾ.ಜಿ.ಪರಮೇಶ್ವರ್ ಬೆಂಬಲಿಸಿದರೆ, ಇಡೀ ಶಾಸಕರು ಸರ್ವಾನುಮತದಿಂದ ಅದಕ್ಕೆ ಸಮ್ಮತಿ ಸೂಚಿಸುವ ಮೂಲಕ ಅನುಮೋದನೆ ನೀಡಲಾಯಿತು. ಇದರೊಂದಿಗೆ ಡಿ.ಕೆ.ಶಿವಕುಮಾರ್ ರಾಜ್ಯ ಕಾಂಗ್ರೆಸ್‌ನ ನೂತನ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಜೂನ್ 3ರ ಸಂಜೆ 4.05 ಗಂಟೆಗೆ ಇವರು ತಮ್ಮ ತಂಡದೊಂದಿಗೆ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಪ್ರಕಟಿಸಿದರು. ನಂತರ ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಿದ್ದರಾಮಯ್ಯ, ಕೆ.ಸಿ.ವೇಣು ಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲಾ ಅವರೊಂದಿಗೆ ಲೋಕಭವನಕ್ಕೆ ತೆರಳಿ, ಸರ್ಕಾರ ರಚಿಸಲು ತಮಗೆ ಅನುಮತಿ ನೀಡುವಂತೆ ಕೋರಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಇಂದು ಐಪಿಎಲ್ ಫೈನಲ್

ಆರ್‌ಸಿಬಿಯೇ ಈ ಟೂರ್ನಿ ಗೆಲ್ಲುವ ನೆಚ್ಚಿನ ತಂಡವಾಗಿದೆ. ನಾಯಕ ರಜತ್ ಪಾಟೀದರ್, ವಿರಾಟ್ ಕೊಹ್ಲಿ, ಟಿಮ್ ಡೇವಿಡ್‌ರಂತಹ ಭರ್ಜರಿ ಬ್ಯಾಟರ್‌ಗಳು ಫಾರ್ಮ್‌ನಲ್ಲಿರುವುದು ಆರ್‌ಸಿಬಿಗೆ ವರದಾನವಾಗಿದೆ. ಭುವನೇಶ್ವರ್ ಕುಮಾರ್ 26 ವಿಕೆಟ್‌ಗಳೊಂದಿಗೆ ಪರ್ಪಲ್ ಕ್ಯಾಪ್ ರೇಸ್‌ನಲ್ಲಿ 2ನೇ ಸ್ಥಾನದಲ್ಲಿದ್ದರೆ, ಇವರಿಗೆ ಸಾಥ್ ನೀಡಲು ಹೇಜಲ್ವುಡ್ (13 ವಿಕೆಟ್), ರಸಿಕ್ ಸಲಾಂ ದರ್ (16 ವಿಕೆಟ್) ಇದ್ದಾರೆ. ಆಲ್‌ರೌಂಡರ್ ಆಗಿ ಕೃನಾಲ್ ಪಾಂಡ್ಯ, ರೊಮಾರಿಯೋ ಶೇಫರ್ಡ್ ತಂಡಕ್ಕೆ ಬಲ ತಂದುಕೊಡಲಿದ್ದಾರೆ. ಗುಜರಾತ್ ಪರ ನಾಯಕ ಶುಭ್‌ಮನ್ ಗಿಲ್ (722 ರನ್), ಸಾಯಿ ಸುದರ್ಶನ್ (710 ರನ್), ಜಾಸ್ ಬಟ್ಲರ್ (507 ರನ್) ಉತ್ತಮ ಲಯದಲ್ಲಿರುವುದು ಬಲ ತಂದುಕೊಡಲಿದೆ. ಪರ್ಪಲ್ ಕ್ಯಾಪ್ ಹೋಲ್ಡರ್ ಕಗಿಸೋ ರಬಾಡ (28 ವಿಕೆಟ್) ಎದುರಾಳಿ ತಂಡದಲ್ಲಿ ತಲ್ಲಣ ಉಂಟು ಮಾಡುವ ಸಾಮರ್ಥ್ಯವಿದೆ. ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ, ಜಾಸನ್ ಹೋಲ್ಡರ್ ಸ್ಥಿರ ಪ್ರದರ್ಶನದೊಂದಿಗೆ ಟ್ರೋಫಿ ಗೆಲ್ಲಲ್ಲಿದೇಯೇ ಎಂಬುದನ್ನು ಕಾದು ನೋಡಬೇಕಿದೆ.

ಚೆನ್ನೈ ಸೂಪರ್ ಕಿಂಗ್ಸ್ (2010–2011) ಹಾಗೂ ಮುಂಬೈ ಇಂಡಿಯನ್ಸ್ (2019–2020) ಬಳಿಕ ಸತತ ಎರಡನೇ ಸಲ ಟ್ರೋಫಿ ಗೆದ್ದ ತಂಡ ಎಂಬ ದಾಖಲೆ ಬರೆಯಲು ಆರ್‌ಸಿಬಿಗೆ ಉತ್ತಮ ಅವಕಾಶವಿದ್ದು, ತಂಡ ಟೂರ್ನಿಯುದ್ದಕ್ಕೂ ನೀಡಿದ ಉತ್ತಮ ಪ್ರದರ್ಶನವನ್ನು ಫೈನಲ್‌ನಲ್ಲೂ ನೀಡಬೇಕಿದೆ.

ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನ ಕಲ್ಪಿಸಲು ಆಗ್ರಹ

ಮೈಸೂರು, ಮೇ 30(ಎಂಟಿವೈ)– ರಾಜ್ಯದ ನೂತನ ಸರ್ಕಾರದಲ್ಲಿ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಎಸ್.ಚಿಕ್ಕಮಾದು ಅಭಿಮಾನಿ ಬಳಗ(ಮೈಸೂರು ಮತ್ತು ಚಾಮರಾಜ ನಗರ ಜಿಲ್ಲೆ) ಸಂಘದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು ಒತ್ತಾಯಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಅನಿಲ್ ಚಿಕ್ಕಮಾದು ಅವರು ಹೆಚ್.ಡಿ.ಕೋಟೆ ಕ್ಷೇತ್ರದಿಂದ ಸತತವಾಗಿ ಮೂರು ಬಾರಿ ಆಯ್ಕೆಯಾಗಿದ್ದಾರೆ. ಅಲ್ಲದೆ, ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲಿ ನಾಯಕ ಸಮಾಜದ ಪ್ರಮುಖ ಮುಖಂಡರೂ ಆಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಎಸ್.ಚಿಕ್ಕಮಾದು ಅಭಿಮಾನಿ ಬಳಗ (ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ)ದ ಸಂಘದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು ಸುದ್ದಿಗೋಷ್ಠಿಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದರು.

ಈ ಐದು ಜಿಲ್ಲೆಗಳಲ್ಲಿ ನಾಯಕ ಸಮುದಾಯದ ಮತದಾರರ ಸಂಖ್ಯೆ ಹೆಚ್ಚಾಗಿದ್ದರೂ, ಇದುವರೆಗೆ ನಮ್ಮ ಸಮಾಜಕ್ಕೆ ಸಚಿವ ಸ್ಥಾನ ದೊರೆತಿಲ್ಲ. ಕಳೆದ ಚುನಾವಣೆಯಲ್ಲಿ ಸಮಾಜದ ಶೇ.70ರಷ್ಟು ಮತದಾರರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದಾರೆ. ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸಮಾಜವನ್ನು ಮತ್ತಷ್ಟು ಬಲಪಡಿಸಲು ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡುವುದು ಅಗತ್ಯವಾಗಿದೆ ನೂತನ ಸರ್ಕಾರದಲ್ಲಿ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಹಳೆ ಮೈಸೂರು ಪ್ರಾಂತ್ಯದಲ್ಲಿ ನಾಯಕ ಸಮುದಾಯದ ಬೆಂಬಲವನ್ನು ಕಾಂಗ್ರೆಸ್‌ಗೆ ಮುಂದುವರೆಸುವಂತೆ ಮಾಡಬೇಕು ಎಂದರು.

ಶಾಸಕ ಅನಿಲ್ ಚಿಕ್ಕಮಾದು ಕೊಳ್ಳೇಗಾಲ, ಯಳಂದೂರು, ಮಳವಳ್ಳಿ, ಗುಂಡ್ಲುಪೇಟೆ, ನಂಜನಗೂಡು, ಟಿ.ನರಸೀಪುರ, ಚಾಮುಂಡೇಶ್ವರಿ, ಸಾಲಿಗ್ರಾಮ, ಕೆ.ಆರ್.ನಗರ, ಹುಣಸೂರು, ಪಿರಿಯಾಪಟ್ಟಣ, ಎಚ್.ಡಿ.ಕೋಟೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಯುವಕರನ್ನು ಹಾಗೂ ಸಮಾಜದ ಜನರನ್ನು ಸಂಘಟಿಸಿ ಕಾಂಗ್ರೆಸ್ ಪಕ್ಷದ ಪರವಾಗಿ ಕಾರ್ಯನಿರ್ವಹಿಸಿರುವ ಯಶಸ್ವಿ ನಾಯಕರಾಗಿದ್ದಾರೆ. ಆದ್ದರಿಂದ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಅನಿಲ್ ಚಿಕ್ಕಮಾದು ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ನಾಯಕ ಸಮಾಜದ ಆಶಯವನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಎಸ್.ಚಿಕ್ಕಮಾದು ಅಭಿಮಾನಿ ಬಳಗ(ಮೈಸೂರು ಮತ್ತು ಚಾಮರಾಜನಗರ) ಸಂಘದ ಗೌರವಾಧ್ಯಕ್ಷರಾದ ದೊರೆಸ್ವಾಮಿ ನಾಯಕ, ಹೊನ್ನನಾಯಕ, ಉಪಾಧ್ಯಕ್ಷರಾದ ಎಂ.ದೇವರಾಜು, ಸಾಹುಕಾರಹುಂಡಿ ಮಹದೇವ, ಪದಾಧಿಕಾರಿಗಳಾದ ಕಂದಹಳ್ಳಿ ಮಹೇಶ್, ಜೆ.ಶ್ರೀನಿವಾಸ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ದೆಹಲಿ, ಮುಂಬೈ ದಾಳಿಗೆ ಸಂಚು: 9 ಮಂದಿ ಶಂಕಿತ ಉಗ್ರರ ಬಂಧನ

ನವದೆಹಲಿ: ಐಸಿಸ್ ಹಾಗೂ ಮುಂಬೈ ಭೂಗತ ಜಗತ್ತಿನ ಜೊತೆ ಸಂಪರ್ಕ ಹೊಂದಿರುವ ಶಂಕೆ ಮೇರೆಗೆ ದೆಹಲಿ ಪೊಲೀಸ್ ವಿಶೇಷ ಘಟಕ 9 ಶಂಕಿತ ಉಗ್ರರನ್ನು ಬಂಧಿಸಿದೆ. ಬಂಧಿತರು ದೆಹಲಿ, ಮುಂಬೈ ಸೇರಿದಂತೆ ದೇಶದ ಪ್ರಮುಖ ನಗರಗಳಲ್ಲಿ ದಾಳಿ ನಡೆಸಲು ಸಂಚು ರೂಪಿಸಿದ್ದರು ಎಂಬ ವಿಚಾರವೂ ತನಿಖೆಯ ವೇಳೆ ಬಯಲಿಗೆ ಬಂದಿದೆ.

ತನಿಖಾಧಿಕಾರಿಗಳ ಪ್ರಕಾರ, ಈ ಗುಂಪು ಗಡಿಯಲ್ಲಿರುವ ಹ್ಯಾಂಡ್ಲರ್‌ಗಳ ನಿರ್ದೇಶನದಂತೆ ಕಾರ್ಯನಿರ್ವಹಿಸುತ್ತಿದ್ದು, ಆತಂಕ ಸೃಷ್ಟಿಸಿ ಭದ್ರತಾ ವ್ಯವಸ್ಥೆಯನ್ನು ಅಸ್ಥಿರಗೊಳಿಸುವ ನಿಟ್ಟಿನಲ್ಲಿ ದಾಳಿಗಳನ್ನು ನಡೆಸುವ ಜವಾಬ್ದಾರಿ ಅವರಿಗೆ ನೀಡಲಾಗಿತ್ತು. ಗುಪ್ತಚರ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿರುವ ವಿಶೇಷ ಘಟಕವು ಆರೋಪಿಗಳನ್ನು ಬಂಧಿಸಿದೆ.

ಬಂಧಿತರಿಂದ ದೊಡ್ಡ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೀದಿ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಮೇಲೆ ದಾಳಿ

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರ ಸಂತ್ರಸ್ತರ ಭೇಟಿ ವೇಳೆ ಟಿಎಂಸಿ ನಾಯಕ ಹಾಗೂ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಸೋದರ ಅಳಿಯ ಅಭಿಷೇಕ್ ಬ್ಯಾನರ್ಜಿ ಮೇಲೆ ದಾಳಿ ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಸೋನಾರ್ಪುರ್ ಪ್ರದೇಶದಲ್ಲಿ ಶನಿವಾರ ನಡೆದ ಘಟನೆಯೊಂದು ರಾಜಕೀಯ ವಲಯದಲ್ಲಿ ಭಾರೀ ಸಂಚಲನ ಮೂಡಿಸಿದೆ. ತೃಣಮೂಲ ಕಾಂಗ್ರೆಸ್ (ಟಿಎಂಸಿ) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸದ ಅಭಿಷೇಕ್ ಬ್ಯಾನರ್ಜಿ ಅವರು ಚುನಾವಣೋತ್ತರ ಹಿಂಸಾಚಾರ ಸಂತ್ರಸ್ತರ ಕುಟುಂಬಗಳನ್ನು ಭೇಟಿ ಮಾಡಲು ತೆರಳಿದ್ದ ವೇಳೆ ಅವರ ಮೇಲೆ ದಾಳಿ ನಡೆದಿದೆ ಎಂದು ಹೇಳಲಾಗಿದೆ.

ಮೂಲಗಳ ಪ್ರಕಾರ, ಚುನಾವಣೋತ್ತರ ಹಿಂಸಾಚಾರದಿಂದ ಬಾಧಿತ ಕುಟುಂಬಗಳನ್ನು ಭೇಟಿ ಮಾಡಲು ಬ್ಯಾನರ್ಜಿ ಸೋನಾರ್ಪುರ್‌ಗೆ ತೆರಳಿದ್ದರು. ಈ ವೇಳೆ ಗುರುತಿಸಲಾಗದ ಕೆಲವರು ಅವರ ವಿರುದ್ಧ ಪ್ರತಿಭಟನೆ ನಡೆಸಿ, ಕಲ್ಲು, ಮೊಟ್ಟೆ ಹಾಗೂ ಚಪ್ಪಲಿಗಳನ್ನು ಎಸೆದಿದ್ದಾರೆ ಎಂದು ತಿಳಿದುಬಂದಿದೆ. ಪ್ರತಿಭಟನಾಕಾರರು ಮಾಜಿ ಸಿಎಂ ಮಮತಾ ಬ್ಯಾನರ್ಜಿ ಮತ್ತು ಸೋದರಳಿಯ ಅಭಿಷೇಕ್ ಬ್ಯಾನರ್ಜಿ ವಿರುದ್ಧ "ಕಳ್ಳರು" ಎಂದು ಘೋಷಣೆಗಳನ್ನು ಕೂಗಿದರೆಂದು ವರದಿಯಾಗಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳಿಂದ ವಿಶೇಷ ಚೇತನರು, ಹಿರಿಯ ನಾಗರಿಕರಿಗೆ ಸಲಕರಣೆ ವಿತರಣೆ



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ನಡೆದ ಗಣಪತಿ ಸಚ್ಚಿದಾನಂದ ಶ್ರೀಗಳ ಜನ್ಮ ಜಯಂತಿ ಕಾರ್ಯಕ್ರಮದಲ್ಲಿ ವಿಕಲಚೇತನರಿಗೆ ಅಗತ್ಯ ಸಲಕರಣೆಗಳನ್ನು ವಿತರಿಸಲಾಯಿತು.

ಮೈಸೂರು, ಮೇ 30(ಎಂಟಿವೈ)– ಮೈಸೂರಿನ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ವಿಶೇಷ ಚೇತನರು ಹಾಗೂ ಹಿರಿಯ ನಾಗರಿಕರಿಗೆ ಅಗತ್ಯ ಸಲಕರಣೆಯನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ವಿತರಿಸಿದರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ನಾದ ಮಂಟಪದಲ್ಲಿ ನಡೆದ ಗಣಪತಿ ಸಚ್ಚಿದಾನಂದ ಶ್ರೀಗಳ ಜನ್ಮ ದಿನದ ಕಾರ್ಯಕ್ರಮದಲ್ಲಿ ವಿಕಲಚೇತನರು ಮತ್ತು ಹಿರಿಯ ನಾಗರಿಕರ ಇಲಾಖೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಗಳ ಮೂಲಕ ಗುರುತಿಸಲ್ಪಟ್ಟ ಅರ್ಹ ವಿಕಲಚೇತನರು ಹಾಗೂ ಹಿರಿಯ ನಾಗರಿಕರಿಗೆ ಅಗತ್ಯವಾದ ಒಟ್ಟು 89 ವೈದ್ಯಕೀಯ ಉಪಕರಣ ಹಾಗೂ ಕೆಲ ಸಲಕರಣೆಗಳನ್ನು ವಿತರಿಸಲಾಯಿತು.

ವೈದ್ಯಕೀಯ ಉಪಕರಣಗಳ ವಿವರ: ಇಂದು ನಡೆದ ಕಾರ್ಯಕ್ರಮದಲ್ಲಿ ವ್ಹೀಲ್ ಚೇರ್ 21, ಕಮೋಡ್ ವ್ಹೀಲ್‌ಚೇರ್ 2, ವಾಕರ್ಸ್ 9, ಕ್ರಚಸ್ 9, ಎಲ್ಬೊ ಕ್ರಚಸ್ 1, ವಾಕಿಂಗ್ ಸ್ಟಿಕ್ 5, ವೈಟ್ ಕೇನ್ 8, ವಿಶೇಷ ಸಿಪಿ ಚೇರ್ 18, ವಿಶೇಷ ಸಿಪಿ ಚೇರ್ (ವಾಕ್ ಮತ್ತು ಶ್ರವಣ ಸಂಸ್ಥೆ ನೆರವಿನಡಿ) 16 ಮಂದಿಗೆ ವಿತರಿಸಲಾಯಿತು.

ಇದೇ ವೇಳೆ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮ ಮಂದಿರದ ಪುನರ್ ನಿರ್ಮಾಣ ಕಾರ್ಯಕ್ಕಾಗಿ ಆಶ್ರಮದ ವತಿಯಿಂದ 10 ಲಕ್ಷ ರೂ ಆರ್ಥಿಕ ಸಹಾಯದ ಚೆಕ್ಕನ್ನು ದೇವಸ್ಥಾನದ ಸಮಿತಿಗೆ ಹಸ್ತಾಂತರಿಸಿ, ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಆಶ್ರಮದ ಬೆಂಬಲವನ್ನು ಘೋಷಿಸಲಾಯಿತು.

ಈ ಸಂದರ್ಭದಲ್ಲಿ ಗಣಪತಿ ಆಶ್ರಮದ ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ಡಾ.ಯತೀಂದ್ರ ಸಿದ್ದರಾಮಯ್ಯರಿಗೆ ಡಿಸಿಎಂ ಸ್ಥಾನ ಕೊಡಿ

ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಅಹಿಂದ ಒಕ್ಕೂಟದ ಸಭೆಯಲ್ಲಿ ಆಗ್ರಹ

ಮೈಸೂರು, ಮೇ30(ಜಿಎ)–ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಅಹಿಂದ ಒಕ್ಕೂಟದ ವತಿಯಿಂದ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ನಡೆದ ಸಭೆಯಲ್ಲಿ ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಿರುವ ಹಿನ್ನೆಲೆಯಲ್ಲಿ ರಾಜ್ಯದ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರು ಒಳಗೊಂಡ ಅಹಿಂದ ಸಮುದಾಯಗಳಲ್ಲಿ ಆತಂಕ ಉಂಟಾಗಿದ್ದು, ಈ ಹಿನ್ನೆಲೆಯಲ್ಲಿ ಅಹಿಂದ ಪರ ನಿಲ್ಲುವ ಯತೀಂದ್ರ ಅವರನ್ನು ಉಪಮುಖ್ಯಮಂತ್ರಿ ಮಾಡಬೇಕಿದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಅಹಿಂದ ಸಂಘಟನೆಗಳ ಮುಖಂಡರು ಅಭಿಪ್ರಾಯಪಟ್ಟರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ನಡೆದ ಸಭೆಯಲ್ಲಿ ಡಾ.ಯತೀಂದ್ರ ಸಿದ್ದರಾಮಯ್ಯಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಅಹಿಂದ ಒಕ್ಕೂಟದ ವತಿಯಿಂದ ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಮೈಸೂರಿನಲ್ಲಿ ನಡೆದ ಅಹಿಂದ ಮುಖಂಡರ ಸಭೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, 2023ರ ವಿಧಾನಸಭೆ ಚುನಾವಣೆಯಲ್ಲಿ ಅಹಿಂದ ಸಮುದಾಯಗಳು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬೆಂಬಲ ನೀಡಿದ್ದವು. ಇದರಿಂದ ಕಾಂಗ್ರೆಸ್ ಪಕ್ಷವೂ 136 ಕ್ಷೇತ್ರಗಳಲ್ಲಿ ಗೆಲ್ಲಲು ಸಾಧ್ಯವಾಯಿತು. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಸಾಮಾಜಿಕ ನ್ಯಾಯ, ಜನಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಪರವಾಗಿ ಕೆಲಸ ಮಾಡಿದ್ದಾರೆ ಎಂದರು.

ಸಿದ್ದರಾಮಯ್ಯ ಅವರ ರಾಜೀನಾಮೆಯಿಂದ ಅಹಿಂದ ಸಮುದಾಯಗಳಲ್ಲಿ ನಿರಾಸೆ ಉಂಟಾಗಿದ್ದು, ಕಾಂಗ್ರೆಸ್ ಪಕ್ಷವು ಈಗ ಅಹಿಂದ ಸಮುದಾಯಗಳ ವಿಶ್ವಾಸ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸೂಕ್ಷ್ಮ ಹಾಗೂ ಸಮತೋಲಿತ ನಿರ್ಧಾರಗಳನ್ನು ಕೈಗೊಳ್ಳಬೇಕು. ಇಲ್ಲವಾದರೆ ಪಕ್ಷಕ್ಕೆ ದೊಡ್ಡ ಪೆಟ್ಟು ಬೀಳಲಿದೆ ಎಂದು ಎಚ್ಚರಿಸಿದರು.

ಮೈಸೂರು ಭಾಗದಲ್ಲಿ ಹೊಸ ನಾಯಕತ್ವವನ್ನು ಬೆಳೆಸುವ ಉದ್ದೇಶದಿಂದ ಮೈಸೂರು ಭಾಗದ ಅಭಿವೃದ್ಧಿ ಹಾಗೂ ಅಹಿಂದ ಸಮುದಾಯಗಳ ಏಳಿಗೆಗಾಗಿ ಮೈಸೂರು ಭಾಗದಲ್ಲಿ ಸದ್ಯಕ್ಕೆ ಇರುವವರು ಯತೀಂದ್ರ ಮಾತ್ರ. ಈ ಹಿನ್ನೆಲೆಯಲ್ಲಿ ವಿದ್ಯಾವಂತರು ಹಾಗೂ ವಿಚಾರವಂತರಾದ ಯತೀಂದ್ರ ಅವರನ್ನು ಉಪ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದರೆ, ಕಾಂಗ್ರೆಸ್ ಪಕ್ಷದ ಮುಂದಿನ ಏಳಿಗೆಗೆ ಒಳಿತು ಎಂದರು.

ಸಿದ್ದರಾಮಯ್ಯ ಅವರು ಸ್ವೀಕರಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಜಾತಿ ಜನಗಣತಿ ವರದಿಯನ್ನು ಹೊಸ ಸರ್ಕಾರವು ಆದ್ಯತೆಯ ಮೇರೆಗೆ ಜಾರಿಗೊಳಿಸಿ, ವರದಿ ಅನುಷ್ಠಾನಗೊಳಿಸುವ ಮೂಲಕ ಹಿಂದುಳಿದ ವರ್ಗಗಳು, ದಲಿತರು ಹಾಗೂ ಅಲ್ಪಸಂಖ್ಯಾತರಿಗೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ಸಚಿವ ಸಂಪುಟ ರಚನೆಯಲ್ಲಿ ಹಿಂದುಳಿದ ವರ್ಗಗಳು, ದಲಿತರು ಮತ್ತು ಅಲ್ಪಸಂಖ್ಯಾತರಿಗೆ ಜನಸಂಖ್ಯೆ ಅನುಪಾತದಲ್ಲಿ ಸಮರ್ಪಕ ಪ್ರಾತಿನಿಧ್ಯ ನೀಡಬೇಕು. ಯಾವುದೇ ಸಮುದಾಯಕ್ಕೆ ಅನ್ಯಾಯವಾಗದಂತೆ ಸಮಾನ ಅವಕಾಶ ಕಲ್ಪಿಸಬೇಕು. ರಾಜ್ಯದ ಮುಂದಿನ ರಾಜಕೀಯ ಬೆಳವಣಿಗೆಗಳ ಕುರಿತು ಕಾಂಗ್ರೆಸ್ ಹೈಕಮಾಂಡ್ ಹಾಗೂ ರಾಜ್ಯ ನಾಯಕತ್ವವು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಸಿದ್ದರಾಮಯ್ಯ ಅವರು ಅನುಸರಿಸಿದ್ದ ಸಾಮಾಜಿಕ ನ್ಯಾಯದ ನೀತಿಗಳನ್ನು ಮುಂದುವರಿಸಬೇಕು ಎಂದು ಆಗ್ರಹಿಸಿದರು.

ಸಭೆಯಲ್ಲಿ ಅಹಿಂದ ಒಕ್ಕೂಟದ ಶಿವಣ್ಣ, ಮಡಿವಾಳ ಸಂಘದ ಅಧ್ಯಕ್ಷ ರವಿನಂದನ್, ಉಪ್ಪಾರ ಸಂಘ ಅಧ್ಯಕ್ಷ ಯೋಗೇಶ್ ಉಪ್ಪಾರ್, ವಿಶ್ವಕರ್ಮ ಸಮುದಾಯದ ಮೊಗಣ್ಣಚಾರ್, ಕೆಂಡಗಣ್ಣ ವಿಶ್ವಕರ್ಮ, ಕುಂಬಾರ ಸಂಘದ ಕುರುಬಾರಹಳ್ಳಿ ಪ್ರಕಾಶ್, ಲೋಕೇಶ್ ಮಾದಾಪುರ, ಎಸ್.ರಾಜೇಶ್, ಭವ್ಯ, ಲಕ್ಷ್ಮಿ, ಚೆನ್ನಪ್ಪ, ಸಂತೋಷ್ ಸೇರಿದಂತೆ ವಿವಿಧ ಹಿಂದುಳಿದವರ್ಗ, ದಲಿತ ಹಾಗೂ ಅಲ್ಪಸಂಖ್ಯಾತ ಸಂಘಟನೆಗಳ ಮುಖಂಡರು, ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿ, ಕಾಂಗ್ರೆಸ್ ಪಕ್ಷವು ಅಹಿಂದ ಸಮುದಾಯಗಳ ವಿಶ್ವಾಸ ಉಳಿಸಿಕೊಳ್ಳುವಂತೆ ಕ್ರಮ ಕೈಗೊಳ್ಳಬೇಕು ಎಂದು ಸಭೆ ಆಗ್ರಹಿಸಿದರು.

ಎಸ್.ಮಾದೇಗೌಡ ಮರಳಿ ಜೆಡಿಎಸ್ ಸೇರ್ಪಡೆಗೆ ಚಾಮುಂಡೇಶ್ವರಿ ಕ್ಷೇತ್ರದ ಪಕ್ಷದ ಮುಖಂಡರಿಂದ ತೀವ್ರ ಆಕ್ಷೇಪ

ಸಾ.ರಾ.ಮಹೇಶರಿಂದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್ ಇಬ್ಭಾಗ

ಕ್ಷೇತ್ರದ ಮುಖಂಡರಿಂದ ಗಂಭೀರ ಆರೋಪ



ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಮುಖಂಡರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಮೇ 30(ಪಿಎಂ)– ಕಾಂಗ್ರೆಸ್ ಮುಖಂಡ, ಜಿಪಂ ಮಾಜಿ ಸದಸ್ಯ ಯರಗನಹಳ್ಳಿ ಎಸ್.ಮಾದೇಗೌಡ ಅವರ ಜೆಡಿಎಸ್ ಸೇರ್ಪಡೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ ಚಾಮುಂಡೇಶ್ವರಿ ಕ್ಷೇತ್ರದ ಮುಖಂಡರು, ಸೇರ್ಪಡೆ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಗುಂಪುಗಾರಿಕೆ ಮಾಡುತ್ತಿದ್ದು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷಕ್ಕೆ ಹಾನಿಯಾಗುವಂತೆ ನಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ತುರ್ತು ಸುದ್ದಿಗೋಷ್ಠಿ ನಡೆಸಿದ ಮುಖಂಡರು, ಮಾಜಿ ಸಚಿವ ಸಾ.ರಾ. ಮಹೇಶ್ ಅವರು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷವನ್ನು ಇಬ್ಭಾಗ ಮಾಡಲು ಹೊರಟಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಾಜಿ ಅಧ್ಯಕ್ಷ ಕೋಟೆಹುಂಡಿ ಮಹದೇವಸ್ವಾಮಿ ಮಾತನಾಡಿ, ಮಾದೇಗೌಡ ಸೇರ್ಪಡೆಯ ಬಗ್ಗೆ ಚಾಮುಂಡೇಶ್ವರಿ ಕ್ಷೇತ್ರದ ಯಾವ ಕಾರ್ಯಕರ್ತರು ಅಥವಾ ಮುಖಂಡರಿಗೂ ಮಾಹಿತಿಯೇ ಇಲ್ಲ. ಸ್ವತಃ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಪಕ್ಷಕ್ಕೆ ಸೇರಿಸಿಕೊಳ್ಳುವುದು ಬೇಡ ಎಂದಿದ್ದಾರೆ. ಹೀಗಿದ್ದರೂ ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಪಕ್ಷ ಸೇರ್ಪಡೆ ಕಾರ್ಯಕ್ರಮ ನಡೆಸಿದ್ದಾರೆ. ಇದರ ಹಿಂದಿನ ಉದ್ದೇಶವೇನು? ಎಂದು ಪ್ರಶ್ನಿಸಿದರು.

ಕ್ಷೇತ್ರದಲ್ಲಿ ಜೆಡಿಎಸ್ ಅನ್ನು ಒಡೆಯುವ ಕೆಲಸ ಮಾಡಬೇಡಿ. ಕೆಆರ್ ನಗರ ಕ್ಷೇತ್ರದಲ್ಲಿ 2028ಕ್ಕೆ ಜೆಡಿಎಸ್ ಗೆಲ್ಲಿಸುವ ನಿಟ್ಟಿನಲ್ಲಿ ಕೆಲಸ ಮಾಡಿ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್ ಗಟ್ಟಿಯಾಗಿದ್ದು, ಅದನ್ನು ಹಾಳು ಮಾಡಬೇಡಿ. ಜಿ.ಡಿ. ಹರೀಶ್‌ಗೌಡರ ಗಮನಕ್ಕೆ ತರದೇ ನೀವು ಪಕ್ಷ ತೊರೆದು ಹೋದವರನ್ನು ಮತ್ತೆ ಕರೆತಂದಿದ್ದೀರಿ. ಅದಕ್ಕೆ ನಮ್ಮ ಆಕ್ಷೇಪ ವೇನೂ ಇಲ್ಲ. ಆದರೆ ಹೆಚ್.ಡಿ.ಕುಮಾರಸ್ವಾಮಿ ಅವರ ಗಮನಕ್ಕೆ ತಂದು ನಂತರ ಕರೆತರಬೇಕಿತ್ತು. ಆದರೆ ಕಾರ್ಯಕ್ರಮ ಮಾಡಿದ್ದೂ ಗೊತ್ತಿಲ್ಲ. ಜಿಪಂ, ಗ್ರಾಪಂ, ತಾಪಂ ಮಾಜಿ ಸದಸ್ಯರು ಪಕ್ಷದಲ್ಲಿದ್ದಾರೆ. ಆ ಒಬ್ಬರಿಗೂ ಈ ಕಾರ್ಯಕ್ರಮದ ಬಗ್ಗೆ ಗೊತ್ತಿಲ್ಲ. ಆ ರೀತಿಯಲ್ಲಿ ಕಾರ್ಯಕ್ರಮ ಮಾಡಿದ್ದೀರಿ. ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್‌ನ ಕಾರ್ಯಕರ್ತರು ಎಷ್ಟು ಮಂದಿ ಸೇರ್ಪಡೆ ಕಾರ್ಯಕ್ರಮದಲ್ಲಿ ಇದ್ದರು ಹೇಳಿ ಎಂದು ಸಾ.ರಾ.ಮಹೇಶ್ ವಿರುದ್ಧ ವಾಗ್ದಾಳಿ ನಡೆಸಿದರು.

ಜಿಪಂ ಮಾಜಿ ಸದಸ್ಯ ಉದ್ಬೂರು ಮಹದೇವಸ್ವಾಮಿ ಮಾತನಾಡಿ, ಚಾಮುಂಡೇಶ್ವರಿ ಕ್ಷೇತ್ರಕ್ಕೂ ಸಾ.ರಾ.ಮಹೇಶ್ ಅವರಿಗೂ ಏನು ಸಂಬಂಧ? ಇವರು ಯಾರ ಅನುಮತಿ ಪಡೆದು ಚಾಮುಂಡೇಶ್ವರಿ ಕ್ಷೇತ್ರದ ವಿಚಾರಕ್ಕೆ ಹಸ್ತಕ್ಷೇಪ ಮಾಡುತ್ತಿದ್ದಾರೆ. ನಾವೆಲ್ಲರೂ ದಶಕಗಳಿಂದ ನಿರಂತರವಾಗಿ ಪಕ್ಷ ಸಂಘಟನೆ ಮಾಡಿಕೊಂಡು ಬಂದಿದ್ದೇವೆ. ನಿಮಗೆ ಬೇಕಾದವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮೂಲಕ ಗುಂಪುಗಾರಿಕೆ ಮಾಡಲು ಬರಬೇಡಿ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮುಖಂಡರು, ಕಾರ್ಯಕರ್ತರ ಅಭಿಪ್ರಾಯವನ್ನು ಪಡೆಯಬೇಕಿತ್ತು ಹೆಚ್.ಡಿ.ಕುಮಾರಸ್ವಾಮಿ ಅವರ ಗಮನಕ್ಕೆ ತಂದು ಅವರನ್ನು ಸೇರಿಸಿಕೊಳ್ಳುವ ನಿರ್ಧಾರ ಮಾಡಬೇಕಿತ್ತು ಎಂದು ಕಿಡಿಕಾರಿದರು.

ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ(ಟಿಎಪಿಸಿಎಂಎಸ್) ನಿರ್ದೇಶಕ ಬೋಗಾದಿ ಚಂದ್ರಶೇಖರ್ ಮಾತನಾಡಿ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ನಡೆದ ಜನರೊಂದಿಗೆ ಜನತಾದಳ ಕಾರ್ಯಕ್ರಮ ಯಶಸ್ವಿಯಾಗಲು ಶಾಸಕ ಜಿ.ಡಿ.ಹರೀಶ್‌ಗೌಡರೇ ಕಾರಣ. ಕ್ಷೇತ್ರಾದ್ಯಂತ ಜನರ ಕಷ್ಟಸುಖಗಳಿಗೆ ಸ್ಪಂದಿಸುತ್ತಿರುವ ನಾಯಕ ಯಾರು ಎಂಬುದು ವರಿಷ್ಠರಿಗೂ ಗೊತ್ತಿದೆ. ಕಾರ್ಯಕರ್ತರು ಹಾಗೂ ಮುಖಂಡರ ಅಭಿಪ್ರಾಯಕ್ಕೆ ವಿರುದ್ಧವಾಗಿ ಸಾ.ರಾ.ಮಹೇಶ್ ನಡೆದುಕೊಳ್ಳುತ್ತಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಸಾ.ರಾ.ಮಹೇಶ್ ಅವರ ಈ ನಿರ್ಧಾರ ಖಂಡಿಸುತ್ತೇವೆ. ನಮ್ಮ ಕ್ಷೇತ್ರದಲ್ಲಿ ಜೆಡಿಎಸ್ ಪ್ರಬಲವಾಗಿದೆ. ಅದನ್ನು ಹಾಳು ಮಾಡಬೇಡಿ. ನಿಖಿಲ್ ಕುಮಾರಸ್ವಾಮಿ ಹಾಗೂ ಹೆಚ್.ಡಿ. ಕುಮಾರಸ್ವಾಮಿ ಅವರಿಗೂ ಇದು ಗೊತ್ತು. ಸಾ.ರಾ.ಮಹೇಶ್ ಅವರೇ ನಮ್ಮ ಕ್ಷೇತ್ರ ಹಾಳು ಮಾಡಬೇಡಿ. ಕೆಆರ್ ನಗರದಲ್ಲಿ ಪಕ್ಷ ಸಂಘಟನೆ ಮಾಡಿ. ಇದು ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರು ನೀಡುತ್ತಿರುವ ಎಚ್ಚರಿಕೆ ಎಂದು ಕಿಡಿಕಾರಿದರು.

ಈ ವೇಳೆ ಮುಖಂಡರಾದ ಲಾರಿ ಸೋಮಣ್ಣ ಸುರೇಶ್, ಹೂಟಗಳ್ಳಿ ಸುರೇಶ್, ಗೋಪಾಲಪುರ ಬಸವಣ್ಣ, ವಕೀಲ ಸಿದ್ದರಾಜು, ಬೋಗಾದಿ ಆನಂದ್, ಮಂಜು, ಶಶಿ ಬೋಗಾದಿ, ಹೆಚ್ಚಗಳ್ಳಿ ರವಿ, ಕೇಬಲ್ ರವಿ, ಲೋಕೇಶ್ ಚಾಮುಂಡಿ ಬೆಟ್ಟ, ಬೆಳವಾಡಿ ದೇವರಾಜು, ಮಧು ನಾಡನಹಳ್ಳಿ ಮತ್ತಿತರರು ಗೋಷ್ಠಿಯಲ್ಲಿದ್ದರು.

> ನಮ್ಮ ಪಾಲಿಗೆ ಹೆಚ್.ಡಿ.ಕುಮಾರ ಸ್ವಾಮಿ ಅವರೇ ನಾಯಕರು. ಅವರ ಮಾತಿಗೆ ಎಲ್ಲರೂ ಬದ್ಧರಾಗಿದ್ದೇವೆ. ಸಾ.ರಾ. ಮಹೇಶ್ ಅವರು ಕೆ.ಆರ್.ನಗರ ಕ್ಷೇತ್ರಕ್ಕೆ ಸೀಮಿತವಾಗಿದ್ದರೆ ಒಳ್ಳೆಯದು. ಮಾದೇಗೌಡ ಅವರ ಸೇರ್ಪಡೆಯು ಪಕ್ಷ ಸಂಘಟನೆಗೆ ಬದಲಾಗಿ ಪಕ್ಷದಲ್ಲಿ ಆಂತರಿಕವಾಗಿ ಗೊಂದಲ ಸೃಷ್ಟಿಸಲಿದೆ. ಈ ಬಗ್ಗೆ ವರಿಷ್ಠರಾದ ಹೆಚ್.ಡಿ.ಕುಮಾರ ಸ್ವಾಮಿ ಅವರಿಗೆ ದೂರು ಸಲ್ಲಿಸುತ್ತೇವೆ.
>
> –ಗೆಜ್ಜಗಳ್ಳಿ ಲೋಕೇಶ್, ಜಿಪಂ ಮಾಜಿ ಸದಸ್ಯ

ಪಾಕ್‌ನಿಂದ ಅಫ್ಘಾನ್ ನಿರಾಶ್ರಿತರನ್ನು ಹೊತ್ತೊಯ್ಯುತ್ತಿದ್ದ ಟ್ರಕ್ ಪಲ್ಟಿ: 22 ಮಂದಿ ಸಾವು, 36 ಮಂದಿಗೆ ಗಾಯ



ಕಾಬೂಲ್: ಪಾಕಿಸ್ತಾನದಿಂದ ಅಫ್ಘಾನಿಸ್ತಾನ ನಿರಾಶ್ರಿತರನ್ನು ಹೊತ್ತೊಯ್ಯುತ್ತಿದ್ದ ಟ್ರಕ್‌ವೊಂದು ಪೂರ್ವ ಅಫ್ಘಾನಿಸ್ತಾನದ ಹೆದ್ದಾರಿಯಲ್ಲಿ ಪಲ್ಟಿಯಾದ ಪರಿಣಾಮ ಟ್ರಕ್‌ನಲ್ಲಿದ್ದ ಕನಿಷ್ಠ 22 ಮಂದಿ ಸಾವನ್ನಪ್ಪಿದ್ದು, 36 ಮಂದಿ ಗಾಯಗೊಂಡಿದ್ದಾರೆ.

ಪಾಕಿಸ್ತಾನದಲ್ಲಿ ನೆಲೆಸಿದ್ದ ಅಫ್ಘಾನ್ ನಿರಾಶ್ರಿತರನ್ನು ಹೊತ್ತೊಯ್ಯುತ್ತಿದ್ದ ಟ್ರಕ್ ಜಲಾಲಾಬಾದ್ ಮತ್ತು ಕಾಬೂಲ್ ನಡುವಿನ ಹೆದ್ದಾರಿ ರಸ್ತೆಯಲ್ಲಿ ಪಲ್ಟಿಯಾಗಿದೆ. ಚಾಲಕ ನಿದ್ರೆಗೆ ಜಾರಿದ ಪರಿಣಾಮ ಟ್ರಕ್ ಹೆದ್ದಾರಿಯಲ್ಲಿ ಉರುಳಿ ಬಿದ್ದಿದೆ. ಈ ಭೀಕರ ಘಟನೆಯಲ್ಲಿ 10 ಮಂದಿ ಮಕ್ಕಳು, 36 ಮಂದಿ ಪುರುಷರು ಹಾಗೂ 5 ಮಂದಿ ಮಹಿಳೆಯರು ಸೇರಿ 22 ಮಂದಿ ಗಾಯಗೊಂಡಿದ್ದಾರೆ. ಘಟನೆಯಲ್ಲಿ 36ಕ್ಕೂ ಹೆಚ್ಚು ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಲಗ್ಮನ್ ಪ್ರಾಂತ್ಯದ ರಾಜ್ಯಪಾಲರ ವಕ್ತಾರ ಅಬ್ದುಲ್ ಮಲಿಕ್ ನಿಯಾಜಿಯ್ ತಿಳಿಸಿದ್ದಾರೆ.

ಇತ್ತೀಚೆಗೆ ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನ ನಡುವಿನ ಸಂಬಂಧಗಳು ಹದಗೆಡುತ್ತಿದ್ದು, ಈ ಬೆನ್ನಲ್ಲೇ ಪಾಕಿಸ್ತಾನ ತನ್ನ ದೇಶದಲ್ಲಿನ ಅಫ್ಘಾನ್ ವಲಸಿಗರು ಮತ್ತು ನಿರಾಶ್ರಿತರ ಬಗ್ಗೆ ತಮ್ಮ ನಿಲುವನ್ನು ಕಠಿಣಗೊಳಿಸಿದ್ದಾರೆ. ಈ ಹಿನ್ನೆಲೆ ನಿರಾಶ್ರಿತ ಜನರು ಅಫ್ಘಾನಿಸ್ತಾನಕ್ಕೆ ಮರಳುತ್ತಿದ್ದಾರೆ.

ಪತಿಯೊಂದಿಗೆ 'ತಾಜ್ ಮಹಲ್' ಸೌಂದರ್ಯ ಕಣ್ತುಂಬಿಕೊಂಡ ಡೊನಾಲ್ಡ್ ಟ್ರಂಪ್ ಪುತ್ರಿ!

ಆಗ್ರಾ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪುತ್ರಿ ಟಿಫಾನಿ ಶನಿವಾರ ತಮ್ಮ ಪತಿ ಮೈಕೆಲ್ ಬೌಲೋಸ್ ಅವರೊಂದಿಗೆ ಐತಿಹಾಸಿಕ ತಾಜ್ ಮಹಲ್‌ಗೆ ಭೇಟಿ ನೀಡಿದ್ದು, ಸುಮಾರು ಒಂದು ಗಂಟೆ ಸ್ಮಾರಕವನ್ನು ವೀಕ್ಷಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಳಿಗ್ಗೆ 11 ಗಂಟೆ ಸುಮಾರಿಗೆ ಟಿಫಾನಿ, ತನ್ನ ಪತಿ ಬೌಲೋಸ್ ಮತ್ತಿತರ ಕೆಲವು ಆಪ್ತರೊಂದಿಗೆ ತಾಜ್ ಮಹಲ್‌ಗೆ ಆಗಮಿಸಿದ್ದು, ಪ್ರೇಮ ಸೌಧದ ಸುತ್ತ ಸುತ್ತಾಡಿದ್ದು, ವಿವಿಧ ಸ್ಥಳಗಳಲ್ಲಿ ಚಿತ್ರಗಳನ್ನು ಕ್ಲಿಕ್ಕಿಸಿದ್ದಾರೆ. ಸ್ಮಾರಕದ ಇತಿಹಾಸ ಮತ್ತು ವಾಸ್ತುಶಿಲ್ಪದ ಬಗ್ಗೆ ತೀವ್ರ ಆಸಕ್ತಿ ತೋರಿಸಿದರು.

ಅಲ್ಲದೇ ನಿರ್ಮಾಣದ ಬಗ್ಗೆ ಹಲವು ಪ್ರಶ್ನೆಗಳು ಕೇಳಿದರು ಎಂದು ಪ್ರವಾಸಿ ಮಾರ್ಗದರ್ಶಿ ರಮೇಶ್ ದಿವಾನ್ ತಿಳಿಸಿದ್ದಾರೆ. ಭೇಟಿ ಮುಗಿದ ನಂತರ ಸ್ಮಾರಕದ ಸೌಂದರ್ಯವನ್ನು ಟಿಫಾನಿ



ಟ್ರಂಪ್ ಹೊಗಳಿದ್ದಾರೆ ಎಂದು ಪ್ರವಾಸದ ಸಮಯದಲ್ಲಿ ಹಾಜರಿದ್ದ ಜನರು ತಿಳಿಸಿದ್ದಾರೆ.

ದಲಿತರಿಗೆ ಸಿಎಂ ಸ್ಥಾನ ನೀಡುವ ಮೂಲಕ ಸಮುದಾಯದ ಋಣ ತೀರಿಸಿ

ಕಾಂಗ್ರೆಸ್‌ಗೆ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಆಗ್ರಹ



ಜಲದರ್ಶಿನಿ ಅತಿಥಿ ಗೃಹದಲ್ಲಿ ದಲಿತ ಸಂಘರ್ಷ ಸಮಿತಿಯಿಂದ ಸುದ್ದಿಗೋಷ್ಠಿ ನಡೆಯಿತು

ಮೈಸೂರು, ಮೇ 30(ಪಿಎಂ)– ದಲಿತ ಸಮುದಾಯದವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವ ಮೂಲಕ ಸಮುದಾಯದ ಋಣ ತೀರಿಸಬೇಕೆಂದು ಕಾಂಗ್ರೆಸ್ ಹೈಕಮಾಂಡ್ ಅನ್ನು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಆಗ್ರಹಿಸಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್, ಕಾಂಗ್ರೆಸ್‌ಗೆ ಆರಂಭದಿಂದಲೂ ಬಡವರು, ಶೋಷಿತರು, ದಲಿತರೇ ಬೆನ್ನೆಲುಬು. ಉಳಿದವರು ಆ ಪಕ್ಷವನ್ನು ಬಾಡಿಗೆ ಮನೆ ರೀತಿ ಬಳಸಿ ಅಧಿಕಾರ–ಅಂತಸ್ತು ಗಿಟ್ಟಿಸಿಕೊಂಡು ಬಿಟ್ಟು ಹೋಗಿದ್ದಾರೆ. ಆದರೆ ಕಾಂಗ್ರೆಸ್ ಉಳಿವಿಗಾಗಿ ಸದಾ ಮಿಡಿಯುತ್ತಿರುವ ಮತ್ತು ಓಟ್ ಬ್ಯಾಂಕ್ ಎಂದೇ ಕರೆಸಿಕೊಳ್ಳುವ ದಲಿತರಿಗೆ ಮಾತ್ರ ಕರ್ನಾಟಕದಲ್ಲಿ ಮುಖ್ಯಮಂತ್ರಿಯಂತಹ ಉನ್ನತ ಸ್ಥಾನ ಸಿಗದಿರುವುದು ದೊಡ್ಡ ಅವಮಾನ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯದ ಜನಸಂಖ್ಯೆಯಲ್ಲಿ ಅಗ್ರಸ್ಥಾನದಲ್ಲಿರುವ ದಲಿತ ಸಮುದಾಯವನ್ನು ಕಾಂಗ್ರೆಸ್ ಪಕ್ಷ ಕಡೆಗಣಿಸಿದೆ. ಹಲವು ಅಲ್ಪಸಂಖ್ಯಾತ ಸಮಾಜದವರು (ಸಣ್ಣ ಸಮುದಾಯಗಳು) ಮುಖ್ಯಮಂತ್ರಿ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ಅವರಿಗೆ ಹೈಕಮಾಂಡ್ ಕೂಡ ಮುತುವರ್ಜಿವಹಿಸಿ ನಿಂತಿದೆ. ಆದರೆ ದಲಿತ ಸಿಎಂ ವಿಚಾರದಲ್ಲಿ ಆಸಕ್ತಿ ತೋರುತ್ತಿಲ್ಲ. ದಲಿತರು ಅಧಿಕಾರ ಅನುಭವಿಸಬಾರದು ಎಂಬ ಆರ್‌ಎಸ್‌ಎಸ್, ಬಿಜೆಪಿಯ ಸಿದ್ಧಾಂತಕ್ಕೇನಾದರೂ ಕಟ್ಟುಬಿದ್ದು ಕಾಂಗ್ರೆಸ್ ಹೀಗೆ ಮಾಡುತ್ತಿದೆಯೇ ಎಂಬ ಅನುಮಾನ ಮೂಡುತ್ತಿದೆ.

ದೇಶದಲ್ಲಿನ ಕೋಮು ಶಕ್ತಿಗಳ ವಿರುದ್ಧ ಪ್ರಬಲ ಹೋರಾಟ ನಡೆಸುತ್ತಿರುವುದು ಬಾಬಾ ಸಾಹೇಬರ ಅನುಯಾಯಿಗಳು ಮಾತ್ರ ಅನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ತುಂಬಿರುವುದೇ ದಲಿತ ಸಮುದಾಯ ಅನ್ನುವುದನ್ನು ಪಕ್ಷ ಮನಗಾಣಬೇಕು. ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡುವ ಸಿದ್ದರಾಮಯ್ಯನವರಿಗೂ ಬೆನ್ನೆಲುಬಾಗಿ ನಿಂತಿದ್ದೆ ದಲಿತ ಸಮುದಾಯ. ಅವರ ನಂತರ ದಲಿತ ಸಮುದಾಯವನ್ನು ಅವರೇ ಸಿಎಂ ಆಗಿ ಘೋಷಣೆ ಮಾಡಬೇಕಿತ್ತು. ಆದರೆ ಮಾಡಲಿಲ್ಲ.

ಕಾಂಗ್ರೆಸ್ ಹೈಕಮಾಂಡ್, ಸಿದ್ದರಾಮಯ್ಯನವರು ಉಳಿದಿರುವ 2 ವರ್ಷಗಳ ಅವಧಿಗಾದರೂ ದಲಿತ ಸಿಎಂ ಮಾಡಲು ಕ್ರಮ ವಹಿಸಬೇಕು. ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ್, ಡಾ.ಹೆಚ್.ಸಿ. ಮಹದೇವಪ್ಪ, ಕೆ.ಹೆಚ್.ಮುನಿಯಪ್ಪ ಇವರಲ್ಲಿ ಯಾರನ್ನಾದರೂ ಸಿಎಂ ಮಾಡಬೇಕೆಂದು ದಸಂಸ ಆಗ್ರಹಿಸುತ್ತದೆ.

ಅದರಲ್ಲೂ ಡಾ.ಹೆಚ್.ಸಿ.ಮಹದೇವಪ್ಪನವರು ಸಿದ್ದರಾಮಯ್ಯನವರ ಪ್ರತಿಯೊಂದು ರಾಜಕೀಯ ಬೆಳವಣಿಗೆಯ ಪ್ರತಿ ಹೆಜ್ಜೆಯಲ್ಲಿಯೂ ಜೊತೆಯಾಗಿ ನಿಂತಿದ್ದಾರೆ. ರಾಜ್ಯದಲ್ಲಿ ದಲಿತ ಸಮುದಾಯಗಳಿಗೆ ಸಿದ್ದರಾಮಯ್ಯನವರ ಮೂಲಕ ಹಲವು ಜನಪ್ರಿಯ ಯೋಜನೆಗಳನ್ನು ತಂದುಕೊಟ್ಟಿದ್ದಾರೆ. ಅವರನ್ನು ಸಿಎಂ ಮಾಡಿದರೆ ಸಿದ್ದರಾಮಯ್ಯನವರ ಸಾಮಾಜಿಕ ನ್ಯಾಯದ ಕಾರ್ಯಗಳು ಮುಂದುವರೆಯಲು ಅವಕಾಶವಾಗಲಿದೆ. ಒಂದು ವೇಳೆ ಈ ಅವಧಿಯಲ್ಲಿ ದಲಿತ ಸಿಎಂ ಮಾಡದಿದ್ದರೆ ಇಡೀ ದಲಿತ ಸಮುದಾಯ ಕಾಂಗ್ರೆಸ್ಸನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತದಲ್ಲದೆ, ಪರ್ಯಾಯ ರಾಜಕೀಯ ಆಲೋಚನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಈ ವೇಳೆ ಸಮಿತಿಯ ಮುಖಂಡರು ಉಪಸ್ಥಿತರಿದ್ದರು

ವಿಶ್ವ ಪರಿಸರ ದಿನದ ಅಂಗವಾಗಿ ಮೈಗ್ರಾಪದಿಂದ 'ಕಾಡು ಹಬ್ಬ' ಆರಂಭ



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರು ಗ್ರಾಹಕರ ಪರಿಷತ್ ಹಾಗೂ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಂಡಿರುವ 'ಕಾಡು ಹಬ್ಬ'ಕ್ಕೆ ಶನಿವಾರ ಚಾಲನೆ ದೊರಕಿತು.

ಮೈಸೂರು, ಮೇ 30– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರು ಗ್ರಾಹಕರ ಪರಿಷತ್ ಹಾಗೂ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಸುಮಾರು ಎರಡು ತಿಂಗಳುಗಳ ಕಾಲ ಹಮ್ಮಿಕೊಂಡಿರುವ 'ಕಾಡು ಹಬ್ಬ'ಕ್ಕೆ ಶನಿವಾರ ಚಾಲನೆ ದೊರಕಿತು.

> 'ವಿಶ್ವ ಪರಿಸರ ದಿನ' ಜೂನ್ 5ಕ್ಕೆ ಸೀಮಿತವಾಗಬಾರದು. ಅಂದು ಒಂದು ಗಿಡ ನೆಟ್ಟು ಆಚರಿಸುವುದಕ್ಕಿಂತ ಡಾ.ಕೆ.ಎಂ.ಮುನ್ಷಿ ಅವರು ಆರಂಭಿಸಿದ 'ವನ ಮಹೋತ್ಸವ' ಮಾದರಿಯಲ್ಲೇ 'ಕಾಡು ಹಬ್ಬ' ಕಾರ್ಯಕ್ರಮದ ಮೂಲಕ ಸಾರ್ವಜನಿಕರಲ್ಲಿ ಅದರಲ್ಲೂ ವಿಶೇಷವಾಗಿ ಮಕ್ಕಳಲ್ಲಿ ಪರಿಸರ ಜಾಗೃತಿ ಮೂಡಿಸಲು ಅರಣ್ಯ ಇಲಾಖೆ ಸಹಕಾರದೊಂದಿಗೆ ಮೈಗ್ರಾಪ ಹೊಸ ಪ್ರಯತ್ನಕ್ಕೆ ಮುಂದಾಗಿದೆ. ಈ ಕಾರ್ಯಕ್ರಮವು ಜುಲೈ 30ರವರೆಗೆ ನಡೆಯಲಿದೆ.
>
> -ಡಿ.ವಿ.ದಯಾನಂದ್, ಸಂಚಾಲಕರು, ಮೈಸೂರು ಗ್ರಾಹಕರ ಪರಿಷತ್

ಡಾ.ಕೆ.ಎಂ.ಮುನ್ಷಿ ಅವರು ಕೇಂದ್ರ ಕೃಷಿ ಸಚಿವರಾಗಿದ್ದ ಸಂದರ್ಭದಲ್ಲಿ 1950ರಲ್ಲಿ ಅನುಷ್ಠಾನಗೊಳಿಸಿದ್ದ 'ವನ ಮಹೋತ್ಸವ' ಮಾದರಿಯಲ್ಲಿ ಆಯೋಜಿಸಿರುವ ಈ ಅರ್ಥಪೂರ್ಣ ಕಾರ್ಯಕ್ರಮಕ್ಕೆ ವೆಸ್ಟ್ ಲಯನ್ಸ್ ಸೇವಾನಿಕೇತನ ಶಾಲೆಯ ಸಭಾಂಗಣದಲ್ಲಿ ಮೈಸೂರು ಡಿಸಿಎಫ್ ಪರಮೇಶ್ ಚಾಲನೆ ನೀಡಿದರು.

ಬಳಿಕ ಅವರು ಕಾಡು ಹಬ್ಬದ ವಿಶೇಷತೆಗಳನ್ನು ಮಕ್ಕಳಿಗೆ ಮನದಟ್ಟು ಮಾಡಿದರು. ಮೈಗ್ರಾಪ ಸಂಸ್ಥಾಪಕ ಭಾಮಿ ವಿ.ಶೆಣೈ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಟ್ರೀ ಕಮಿಟಿ ಸದಸ್ಯೆ ಭಾನು ಮೋಹನ್, ಮನೆಯ ಸುತ್ತಮುತ್ತ ಸಸಿಗಳನ್ನು ನೆಟ್ಟು ಸಂರಕ್ಷಿಸಿ, ಅನವಶ್ಯಕವಾಗಿ ಮರಗಳನ್ನು ಕಡಿದರೆ ನಮಗೆ ಮಾಹಿತಿ ನೀಡುವ ಮೂಲಕ ಪರಿಸರ ಸಂರಕ್ಷಣೆಗೆ ಕೈಜೋಡಿಸಿ ಎಂದು ಮನವಿ ಮಾಡಿದರು.

ಸಂಶೋಧಕರಾದ ಶಂಕರ್ ಭಟ್, ಮೈಸೂರು ನಗರದಲ್ಲಿ ಮರಗಿಡಗಳು ನಶಿಸಿ ಹೋಗಲು ಮೂಲ ಕಾರಣ ಹಾಗೂ ರೆಂಬೆ ಕಡಿಯುವಿಕೆಯ ವೈಜ್ಞಾನಿಕ ಕ್ರಮದ ಬಗ್ಗೆ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಜಾಗೃತಿ ಮೂಡಿಸಿದರು. ಡಾ.ಶ್ವೇತಾ ಮಂಡಪ್ಪಾಡಿ, ಪೂರ್ಣಚಂದ್ರ ತೇಜಸ್ವಿಯವರು ತಿಳಿಸಿರುವ ಕಾಡಿನ ಮೌಲ್ಯಗಳನ್ನು ಹಾಡಿನ ಮುಖಾಂತರ ಮನದಟ್ಟು ಮಾಡಿಕೊಟ್ಟರು. ಈ ವೇಳೆ ಮೈಗ್ರಾಪ ಸಂಚಾಲಕ ಡಿ.ವಿ.ದಯಾನಂದ್ ಸಾಗರ್, ಶಾಲೆಯ ಪ್ರಿನ್ಸಿಪಾಲ್ ಶ್ರೀಮತಿ ರೂಪಾ ಕರಂಬಯ್ಯ ಸೇರಿದಂತೆ ಹಲವು ಗಣ್ಯರು, ಶಿಕ್ಷಕರು, ನೂರಾರು ಮಕ್ಕಳು ಉಪಸ್ಥಿತರಿದ್ದರು.

ಇಂದು ರಕ್ತಹೀನತೆ, ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮೇ 30– ಮೈಸೂರು ವಲಯ ಅಖಿಲ ಭಾರತ ಮಹಿಳಾ ಸಮ್ಮೇಳನದ ವತಿಯಿಂದ ಶತಮಾನೋತ್ಸವದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮೈಸೂರಿನ ಶಿವಪುರ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಾಳೆ (ಮೇ 31) ಬೆಳಗ್ಗೆ 10.30 ಗಂಟೆಗೆ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಸುಬ್ರಹ್ಮಣ್ಯನಗರದ ವೈದ್ಯಾಧಿಕಾರಿ ಡಾ.ಮನೋಹರ್ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಜಯನಗರ ನಮ್ಮ ಕ್ಲಿನಿಕ್ ವೈದ್ಯಾಧಿಕಾರಿ ಡಾ.ಸ್ಪರ್ಶ ಅರುಣ್ ಭಾಗವಹಿಸಲಿದ್ದು, ಅಧ್ಯಕ್ಷತೆಯನ್ನು ಅಖಿಲ ಭಾರತ ಮಹಿಳಾ ಸಮ್ಮೇಳನದ ಮೈಸೂರು ಶಾಖೆಯ ಉಪಾಧ್ಯಕ್ಷರಾದ ಶ್ರೀಮತಿ ಕಮಲಮ್ಮ ವಹಿಸಲಿದ್ದಾರೆ. ಕೇರಳ ಮತ್ತು ಕರ್ನಾಟಕ ಅಖಿಲ ಭಾರತ ಮಹಿಳಾ ಸಮ್ಮೇಳನದ ಪ್ರಧಾನ ಕಾರ್ಯದರ್ಶಿಗಳು ಮತ್ತು ರಾಜ್ಯ ಸಂಯೋಜಕರಾದ ಪ್ರೊ.ಮಹಾದೇವಿ ಕಾರ್ಯಕ್ರಮದ ಸಂಯೋಜಕರಾಗಿದ್ದಾರೆ. ಎಂಎಂಕೆ ಎಸ್‌ಡಿಎಂ ಕಾಲೇಜಿನ ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ದೇವಕಿ ಕೆ.ಕೆ ಉಪಸ್ಥಿತರಿರುತ್ತಾರೆ.

ಲೋಕಕ್ಕೆ ಬೆಳಕಾದ ದಾಸ ಸಾಹಿತ್ಯದ ಬಗ್ಗೆ ಮತ್ತಷ್ಟು ಸಂಶೋಧನೆಯಾಗಲಿ

ಉತ್ತರಾದಿ ಮಠದ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಆಶಯ



ಸೌರಭ ದಾಸ ಸಾಹಿತ್ಯ ವಿದ್ಯಾಲಯದ 9ನೇ ಸಮ್ಮೇಳನ ಹಾಗೂ 2 ದಿನಗಳ ವಿಶ್ವ ಸಮಾವೇಶಕ್ಕೆ ಉತ್ತರಾದಿ ಮಠದ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಶನಿವಾರ ಚಾಲನೆ ನೀಡಿದರು.

ಮೈಸೂರು, ಮೇ 30– ಲೋಕಕ್ಕೆ ಬೆಳಕಾಗಿರುವ ದಾಸ ಸಾಹಿತ್ಯ ಕುರಿತು ಇನ್ನೂ ಹೆಚ್ಚಿನ ಸಂಶೋಧನೆಗಳಾಗಲಿ ಎಂದು ಉತ್ತರಾದಿ ಮಠದ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಆಶಿಸಿದರು.

ವಿಶ್ವಮಧ್ವ ಮಹಾಪರಿಷತ್ತಿನ ಅಂಗಸಂಸ್ಥೆಯಾದ ಸೌರಭ ದಾಸ ಸಾಹಿತ್ಯ ವಿದ್ಯಾಲಯದ 9ನೇ ಸಮ್ಮೇಳನ, 2 ದಿನಗಳ ವಿಶ್ವ ಸಮಾವೇಶ ಮತ್ತು ವಿಚಾರಗೋಷ್ಠಿಯನ್ನು ಅಗ್ರಹಾರದ ದಿವಾನ್ ಪೂರ್ಣಯ್ಯ ಛತ್ರದಲ್ಲಿ ಶನಿವಾರ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಜ್ಞಾನಿಗಳು, ಯತಿವರೇಣ್ಯರು, ಆಚಾರ್ಯ ಮಧ್ವರು, ಹರಿದಾಸರ ಸಂದೇಶ ಮತ್ತು ತತ್ವ–ಚಿಂತನೆಗಳು ಸಮುದಾಯದ ಎಲ್ಲೆಯನ್ನು ಮೀರಿ ವಿಶ್ವದ ಜನರ ಸಾಧನೆಗಳಿಗೆ ಪ್ರೇರಕವಾಗಿದೆ. ಬದುಕಿನ ಎಲ್ಲ ಸ್ತರಗಳನ್ನೂ ದಾಸ ಸಾಹಿತ್ಯ ಮುಟ್ಟಿದೆ. ದಾಸ ಸಾಹಿತ್ಯದ ಒಳಗಿನ ಹೂರಣವನ್ನು ಇನ್ನಷ್ಟು ಸವಿದು ಜೀವನ ಸಾರ್ಥಕ ಮಾಡಿಕೊಳ್ಳಬೇಕು. ಇದಕ್ಕಾಗಿ ಸತ್ಯ ಸಂಕಲ್ಪ ಈ ಕ್ಷಣದಿಂದಲೇ ಆರಂಭವಾಗಬೇಕು. ಆಗ ಭಗವಂತ ಸಂತುಷ್ಟನಾಗುತ್ತಾನೆ ಎಂದರು.

ದೇವರು ಎಲ್ಲರ ಒಳಗೆ ನಿಂತು ಸಾತ್ವಿಕ ಶಕ್ತಿಗಳನ್ನು ತುಂಬಿ ಸಾಧನೆ ಮಾಡಿಸುತ್ತಾನೆ. ಅದಕ್ಕೆ ನಮ್ಮ ಮನವನ್ನು ಅಣಿಗೊಳಿಸಿಕೊಳ್ಳಬೇಕು. ದಾಸರ ಒಂದೊಂದು ಪದಗಳೂ ಇದಕ್ಕೆ ಚೈತನ್ಯ ತುಂಬುವಂತೆ ಮಾಡಲು ವಿಶ್ವಮಧ್ವ ಮಹಾಪರಿಷತ್ತಿನ ಅಂಗಸಂಸ್ಥೆಯಾದ ಸೌರಭ ದಾಸ ಸಾಹಿತ್ಯ ವಿದ್ಯಾಲಯದವು ಕಳೆದ 9 ವರ್ಷಗಳಿಂದ ಅಹರ್ನಿಷಿ ಸೇವೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ದಾಸ ಸಾಹಿತ್ಯದ ದೀಕ್ಷೆ: ಸೌರಭ ದಾಸ ಸಾಹಿತ್ಯ ವಿದ್ಯಾಲಯದ ಅಧ್ಯಕ್ಷ, ಹಿರಿಯ ವಿದ್ವಾಂಸ ಕೊಪ್ಪಳ ಪ್ರಮೋದಾಚಾರ್ಯ ಪೂಜಾರ ಮಾತನಾಡಿ, ಸಾವಿರಾರು ಮಾತೆಯರಿಗೆ ದಾಸ ಸಾಹಿತ್ಯದ ದೀಕ್ಷೆಯನ್ನು ನೀಡುವ ಮೂಲಕ ಅಧ್ಯಯನ ಶೀಲತೆಯನ್ನು ಪ್ರೇರೇಪಿಸುವಲ್ಲಿ ಸಂಸ್ಥೆ ಸಾಕಷ್ಟು ಶ್ರಮಿಸುತ್ತಿದೆ. ಸಾಗರದ ಆಚೆಗಿನ ಮಾತೆಯರೂ ಆನ್‌ಲೈನ್ ಪಾಠಗಳ ಮೂಲಕ ದಾಸ ಸಾಹಿತ್ಯದ ಪಠ್ಯಕ್ರಮಗಳ ಅಭ್ಯಾಸ ಮತ್ತು ಪರೀಕ್ಷೆಗಳನ್ನು ತೆಗೆದುಕೊಂಡು ಜ್ಞಾನ ವಿಸ್ತಾರಗೊಳಿಸಿಕೊಳ್ಳುತ್ತಿದ್ದಾರೆ. ಇಂದು ಇಲ್ಲಿ ಸಮಾವೇಶಗೊಂಡಿರುವ ಸಾವಿರಕ್ಕೂ ಹೆಚ್ಚು ಮಹಿಳೆಯರೇ ಇದಕ್ಕೆ ಸಾಕ್ಷಿ ಎಂದರು.

ವಿದ್ಯಾಲಯ ಕಳೆದ 9 ವರ್ಷಗಳಲ್ಲಿ 20 ಸಾವಿರಕ್ಕೂ ಹೆಚ್ಚು ಸಾಹಿತ್ಯ, ಸಂಸ್ಕೃತಿ ಆಸಕ್ತರನ್ನು ತನ್ನ ವ್ಯಾಪ್ತಿಯಲ್ಲಿ ಒಗ್ಗೂಡಿಸಿದ್ದು, 5 ಹಂತದ ಪರೀಕ್ಷೆ ನಡೆಸುವ ಮೂಲಕ ದಾಸ ಪರಂಪರೆಯನ್ನು ಪುನರುಜ್ಜೀವನ ಗೊಳಿಸುವ ಸೇವೆಯಲ್ಲಿ ತೊಡಗಿಸಿಕೊಂಡಿದೆ. ಯಾವುದೇ ವಯೋಮಾನದ ಮಿತಿ ಇರಿಸಿಕೊಳ್ಳದೇ ದೊಡ್ಡ ಪ್ರಮಾಣದಲ್ಲಿ ದಾಸ ಸಾಹಿತ್ಯ ಪ್ರಚಾರ, ಪ್ರಸಾರ ಆಂದೋಲನ ನಡೆಸಲು ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮ ತೀರ್ಥರೇ ಮುಖ್ಯ ಪ್ರೇರಕರಾಗಿದ್ದಾರೆಂದು ನುಡಿದರು.

ಈ ಸಂದರ್ಭದಲ್ಲಿ ಹಿರಿಯ ವಿದ್ವಾಂಸರಾದ ಅನಂತಪುರ ರಾಧಾಕೃಷ್ಣಾಚಾರ್ಯ, ಧಾರವಾಡ ಕೇಶವಾಚಾರ್ಯ, ದಿವಾನ ಶಶಿ ಆಚಾರ್ಯ, ಅನಿರುದ್ಧಾಚಾರ್ಯ ಪಾಂಡುರಂಗಿ, ಪ್ರದ್ಯುಮ್ನಾಚಾರ್ಯ ವಿಜಯಪುರ, ಪ್ರಹ್ಲಾದಾಚಾರ್ಯ ಹನುಮಸಾಗರ ಮತ್ತಿತರರು ಹಾಜರಿದ್ದರು.

ಕೇಂದ್ರ ಪ್ರಾಚೀನ ಸ್ಮಾರಕ ಪಟ್ಟಿಗೆ ಮಡಿಕೇರಿ ಅರಮನೆ



ಮಡಿಕೇರಿ, ಮೇ 30–ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಮಡಿಕೇರಿ ಅರಮನೆಯನ್ನು, ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ತಾಣಗಳು ಹಾಗೂ ಅವಶೇಷಗಳ ಕಾಯ್ದೆ 1958ರ ಅಡಿಯಲ್ಲಿ ಸಂರಕ್ಷಿತ ಸ್ಮಾರಕ ಎಂದು ಘೋಷಿಸಲಾಗಿದೆ ಎಂದು ಅಧಿಕೃತವಾಗಿ ತಿಳಿಸಿದ್ದಾರೆ.

ಕೊಡಗಿನ ಶ್ರೀಮಂತ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆ ಸಂರಕ್ಷಿಸುವ ನಿಟ್ಟಿನಲ್ಲಿ ಸಂಸದ ಯದುವೀರ್ ಅವರ ನಿರಂತರ ಪ್ರಯತ್ನಗಳಿಗೆ ಫಲ ದೊರೆತಿದೆ. ಮಾತ್ರವಲ್ಲದೇ ಐತಿಹಾಸಿಕ ಮಡಿಕೇರಿ ಅರಮನೆಯ ಸಂರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಬೆಂಬಲ ದೊರೆತಿದೆ.

ತಮ್ಮ ಪತ್ರದಲ್ಲಿ ಸಚಿವರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮಡಿಕೇರಿ ಅರಮನೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ ಎಂದು ತಿಳಿಸಿದ್ದಾರೆ. ಇದರ ಭಾಗವಾಗಿ ಪ್ರವಾಸಿಗರ ಅನುಭವವನ್ನು ಉತ್ತಮಗೊಳಿಸುವ ಹಾಗೂ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಡಿಜಿಟಲ್ ಪ್ರದರ್ಶನಗಳನ್ನೊಳಗೊಂಡ ಆಧುನಿಕ ತಾಣ ವಸ್ತು ಸಂಗ್ರಹಾಲಯ ಸ್ಥಾಪಿಸುವ ಪ್ರಸ್ತಾವನೆಯೂ ಪರಿಶೀಲನೆಯಲ್ಲಿದೆ. ಇದು ಕೊಡಗಿನ ಸಮೃದ್ಧ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪರಿಣಾಮಕಾರಿಯಾಗಿ ಪರಿಚಯಿಸುವ ಮಹತ್ವದ ಹೆಜ್ಜೆಯಾಗಲಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಸಂಸ್ಕೃತಿ ಸಚಿವಾಲಯಕ್ಕೆ ಸಂಸದ ಯದುವೀರ್ ಒಡೆಯರ್ ಅವರು 2025ರ ಮಾರ್ಚ್ 18 ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದ ವಿವರವಾದ ಮನವಿ ಸಲ್ಲಿಸಿ ಮಡಿಕೇರಿ ಅರಮನೆಗೆ ಸಂರಕ್ಷಿತ ಸ್ಮಾರಕ ಸ್ಥಾನಮಾನ ನೀಡುವುದು ಹಾಗೂ ಅಲ್ಲಿ ವಸ್ತು ಸಂಗ್ರಹಾಲಯ ಸ್ಥಾಪಿಸುವಂತೆ ಆಗ್ರಹಿಸಿದ್ದರು.

ಅರಮನೆಯ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಬಹುಕಾಲದ ಬೇಡಿಕೆ ಇದೀಗ ಸಾಕಾರಗೊಳ್ಳುವ ಹಂತ ತಲುಪಿರುವುದಕ್ಕೆ ಯದುವೀರ್ ಸಂತೋಷ ವ್ಯಕ್ತಪಡಿಸಿದರು. ಕೊಡಗಿನ ವೈಭವಯುತ ಇತಿಹಾಸವನ್ನು ಪ್ರತಿಬಿಂಬಿಸುವ ಪ್ರಮುಖ ಪರಂಪರೆ ಮತ್ತು ಪ್ರವಾಸೋದ್ಯಮ ತಾಣವಾಗಿ ಅರಮನೆಯನ್ನು ಅಭಿವೃದ್ಧಿಪಡಿಸುವುದರ ಜೊತೆಗೆ, ಭವಿಷ್ಯದ ಪೀಳಿಗೆಗಳಿಗೆ ಶೈಕ್ಷಣಿಕ ಮತ್ತು ಪ್ರವಾಸೋದ್ಯಮ ಅವಕಾಶಗಳನ್ನು ಸೃಷ್ಟಿಸಲು ತಮ್ಮ ಬದ್ಧತೆ ವ್ಯಕ್ತಪಡಿಸಿದರು.

ಕೊಡಗಿನಲ್ಲಿ ವಿಶ್ರಾಂತಿ ಪಡೆದ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಕುಟುಂಬ



ಮಡಿಕೇರಿ, ಮೇ 30–ತಮಿಳುನಾಡು ಚುನಾವಣೆಯಲ್ಲಿ ಅಧಿಕಾರ ಕಳೆದುಕೊಂಡು ಟಿವಿಕೆ ಪಕ್ಷದ ನಾಯಕ ವಿಜಯ್ ನೇತೃತ್ವದ ಹೊಸ ಸರಕಾರ ರಚನೆಯಾದ ಹಿನ್ನೆಲೆಯಲ್ಲಿ ವಿಶ್ರಾಂತಿಗೆಂದು ಅಲ್ಲಿನ ಮಾಜಿ ಮುಖ್ಯಮಂತ್ರಿ ಸ್ಟಾಲಿನ್ ತಮ್ಮ ಪುತ್ರ ಉದಯ್ ನಿಧಿ ಸ್ಟಾಲಿನ್‌ಯೊಂದಿಗೆ ಕೊಡಗು ಪ್ರವಾಸ ಹಮ್ಮಿಕೊಂಡಿದ್ದಾರೆ.

ಮೇ.28ರಂದು ತಮಿಳುನಾಡಿನಿಂದ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಿ ಅಲ್ಲಿಂದ ರಸ್ತೆ ಮುಖಾಂತರ ಸ್ಟಾಲಿನ್, ಪತ್ನಿ ದುರ್ಗಾ, ಮತ್ತವರ ಪುತ್ರ ಉದಯ್ ನಿಧಿ ಸ್ಟಾಲಿನ್ ಮತ್ತಿತರ ಕುಟುಂಬ ಸದಸ್ಯರೊಂದಿಗೆ ನಗರದ ಹೊರ ವಲಯದ ಲೀಲಾ ಪ್ಯಾಲೇಸ್ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದರು.

ಕೊಡಗಿನ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡದೆ ಸಂಪೂರ್ಣವಾಗಿ ತಾವು ಉಳಿದಿದ್ದ ರೆಸಾರ್ಟ್‌ನಲ್ಲೇ ಕಾಲ ಕಳೆದರು. ಪೂರ್ವ ನಿಗದಿತ ಕಾರ್ಯಕ್ರಮದಂತೆ ಇಂದು ಮಧ್ಯಾಹ್ನದ ನಂತರ ರೆಸಾರ್ಟ್ ವಾಸ್ತವ್ಯ ಪೂರ್ಣಗೊಳಿಸಿ ರಸ್ತೆ ಮಾರ್ಗವಾಗಿ ಮೈಸೂರು ಕಡೆಗೆ ತೆರಳಬೇಕಾಗಿತ್ತು. ಆದರೆ ಇದ್ದಕ್ಕಿದ್ದಂತೆ ಮನಸ್ಸನ್ನು ಬದಲಾಯಿಸಿದ ಮಾಜಿ ಮುಖ್ಯಮಂತ್ರಿ ಸ್ಟಾಲಿನ್ ನಾಳೆ ಬೆಳಿಗ್ಗೆ 11 ಗಂಟೆಗೆ ಹೊರಟು ಮೈಸೂರಿಗೆ ತೆರಳಿ, ಅಲ್ಲಿಂದ ವಿಶೇಷ ವಿಮಾನದಲ್ಲಿ ತಮಿಳುನಾಡಿಗೆ ಪ್ರಯಾಣ ಬೆಳೆಸಲಿದ್ದಾರೆ. ರಾಜ್ಯ ಗುಪ್ತದಳದ ಸೂಚನೆಯಂತೆ ಮಾಜಿ ಮುಖ್ಯಮಂತ್ರಿ ಸ್ಟಾಲಿನ್ ಅವರಿಗೆ ಝೆಡ್ ಪ್ಲಸ್ ಭದ್ರತೆ ಒದಗಿಸಲಾಗಿತ್ತು. ಕೊಡಗು ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ತಂಡ ಭದ್ರತೆ ನೀಡಿದೆ

ಬಾವಿಯಲ್ಲಿ ವೃದ್ಧೆಯ ಶವ ಪತ್ತೆ

ಮಡಿಕೇರಿ: ಚೆಟ್ಟಳ್ಳಿ ಸಮೀಪದ ಚೇರಳ ಶ್ರೀಮಂಗಲ ಗ್ರಾಮದಲ್ಲಿ ವಿಜಯಲಕ್ಷ್ಮಿ(86) ಎಂಬ ವೃದ್ಧೆಯ ಮೃತದೇಹ ಕಿರಿದಾದ ಬಾವಿಯಲ್ಲಿ ಪತ್ತೆಗಿದೆ. ಮಡಿಕೇರಿ ಗ್ರಾಮಾಂತರ ಪೊಲೀಸರು ಹಾಗೂ ಅಗ್ನಿ ಶಾಮಕ ದಳ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಬಾವಿಯಿಂದ ಮೃತದೇಹವನ್ನು ಮೇಲೆತ್ತಿದ್ದಾರೆ. ಮಹಿಳೆ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಮೃತದೇಹದ ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುರೇಶ್ ಚಂಗಪ್ಪ ನಿಧನ

ಮಡಿಕೇರಿ, ಮೇ.30–ಮಡಿಕೇರಿ ನಗರ ನಿವಾಸಿ



ಉದ್ಯಮಿ ಮಾತಂಡ ಸುರೇಶ್ ಚಂಗಪ್ಪ(73) ನಿಧನರಾಗಿದ್ದಾರೆ. ಮೃತರು ಪತ್ನಿ ದಮಯಂತಿ ಹಾಗೂ ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ

ಸುರೇಶ್ ಚಂಗಪ್ಪ ಮಡಿಕೇರಿಯಲ್ಲಿ 3 ದಶಕಕ್ಕೂ ಹೆಚ್ಚು ಕಾಲ ಬೇಕರಿ ಉತ್ಪನ್ನಗಳ ವಹಿವಾಟು ನಡೆಸುತಿದ್ದರು. ರೋಟರಿ ಸೇವಾ ಸಂಸ್ಥೆಯ ಜಿಲ್ಲಾ ಗವರ್ನರ್ ಆಗಿಯೂ ಉತ್ತಮ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆ ಸುರೇಶ್ ಚಂಗಪ್ಪ ಅವರದ್ದಾಗಿತ್ತು.

ಕೊಡವ ಸಮಾಜದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಸಮಾಜದ ಶತಮಾನೋತ್ಸವಕ್ಕೆ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂರನ್ನು ಕರೆಸುವಲ್ಲಿ ಯಶಸ್ವಿಯಾಗಿದ್ದರು. ಮೃತರ ಅಂತ್ಯಕ್ರಿಯೆ ಭಾನುವಾರ ಮಡಿಕೇರಿ ಕೊಡವ ಸಮಾಜದ ರುದ್ರಭೂಮಿಯಲ್ಲಿ ನಡೆಯಲಿದೆ.

ವಿರಾಜಪೇಟೆಯಲ್ಲಿ ಅಣಬೆ ಕೃಷಿ ತರಬೇತಿ ಕಾರ್ಯಾಗಾರ

ವಿರಾಜಪೇಟೆ, ಮೇ 30– ಅರಣ್ಯ ಇಲಾಖೆ ವಲಯ ವಿಭಾಗವು ಮಹಿಳಾ ಸಮಾಜದ ಸಹಕಾರದೊಂದಿಗೆ ಅಣಬೆ ಕೃಷಿ ತರಬೇತಿ ಕಾರ್ಯಾಗಾರ ನಡೆಸಿತು.

ವಿರಾಜಪೇಟೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ ಕಾರ್ಯಾಗಾರವನ್ನು ಉದ್ಘಾಟಿಸಿ, ರೈತರಿಗೆ, ಮಹಿಳೆಯರಿಗೆ ಸ್ವಂಯಂ ಉದ್ಯೋಗಕ್ಕಾಗಿ ಅಣಬೆ ಬೇಸಾಯ ಕುರಿತು ತರಬೇತಿ ಕಾರ್ಯಾಗಾರವನ್ನು ಅರಣ್ಯ ಇಲಾಖೆಯಿಂದ ನಡೆಸುತ್ತಿದ್ದೇವೆ. ಅಣಬೆ ಕೃಷಿಯ ಪ್ರಾಮುಖ್ಯ ಮತ್ತು ಅಣಬೆಯ ವಿವಿಧ ಮೌಲ್ಯವರ್ಧಿತ ಪದಾರ್ಥಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಅಣಬೆಯಲ್ಲಿರುವ ಅವಶ್ಯಕ ಪೋಷಕಾಂಶಗಳು, ವಾಣಿಜ್ಯ ಉದ್ದೇಶದಿಂದ ಅಣಬೆ ಬೇಸಾಯ ಮಾಡುವುದರಿಂದ ಆರ್ಥಿಕ ಆದಾಯಗಳ ಬಗ್ಗೆ ತಿಳಿಸಲಾಗುತ್ತದೆ. ಪ್ರತಿಯೊಬ್ಬರೂ ಆರ್ಥಿಕವಾಗಿ ಸದೃಢರಾಗಬೇಕು. ಎಂದರು.

ಮಹಿಳಾ ಸಮಾಜದ ಅಧ್ಯಕ್ಷೆ ಪಟ್ರಪಂಡ ಗೀತಾ ಬೆಳ್ಯಪ್ಪ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ತಹಸೀನಾ, ಸಂಪನ್ಮೂಲ ವ್ಯಕ್ತಿ ಹರಿಣಿ ಪ್ರಭಾಕರ್ ಗೋವಿಂದರಾಜು ಮಾತನಾಡಿದರು. ಅರಣ್ಯ ಇಲಾಖೆ ಅಧಿಕಾರಿ ಶಿವರಾಂ ಕೆ.ವಿ. ಇಲಾಖೆಯ ಸಿಬ್ಬಂದಿಗಳು ಮಹಿಳೆಯರು ಇದ್ದರು.

ಎಸ್‌ಐಆರ್, ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ಮಂಡ್ಯ, ಮೇ 30–ಎಸ್‌ಐಆರ್ ವಿರುದ್ಧ ಹಾಗೂ ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಶನಿವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಸರ್.ಎಂ.ವಿ.ಪ್ರತಿಮೆ ಎದುರು ಜಮಾವಣೆಗೊಂಡು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರ ಹಾಕಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಮಾತನಾಡಿ, ಕೇಂದ್ರ ಸರ್ಕಾರ ನಿತ್ಯ ಪೆಟ್ರೋಲ್, ಡೀಸೆಲ್, ಸಿಎನ್‌ಜಿ, ಅಡುಗೆ ಅನಿಲ, ರಸಗೊಬ್ಬರ ದರ ಏರಿಕೆ ಮಾಡುವ ಮೂಲಕ ದೇಶದ ಮಧ್ಯಮ ವರ್ಗ ಮತ್ತು ಬಡವರ ಹೊಟ್ಟೆ ಮೇಲೆ ಹೊಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಂದಿನ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷ ವಿರೋಧ ಪಕ್ಷದ ಸ್ಥಾನದಲ್ಲಿ ಕೂರುವುದನ್ನು ಖಂಡಿತವಾಗಿ ತಪ್ಪಿಸಲು ಆಗಲ್ಲ. ಈಗಾಗಲೇ ರಾಹುಲ್ ಗಾಂಧಿಯವರು ಮುಂದಿನ ವರ್ಷದಲ್ಲಿ ಕೇಂದ್ರ ಸರ್ಕಾರ ಪತನ ಆಗುತ್ತದೆ ಎಂದು ಭವಿಷ್ಯ ನುಡಿದಿದ್ದಾರೆ. ಆಂಧ್ರ ಪ್ರದೇಶದ ಚಂದ್ರಬಾಬು ನಾಯ್ಡು ಕೇಂದ್ರ ಸರ್ಕಾರದ ದುರಾಡಳಿತಕ್ಕೆ ಬೇಸತ್ತು ಬೆಂಬಲ ವಾಪಸ್ ತೆಗೆದುಕೊಳ್ಳುವ ಮನಸ್ಥಿತಿಯಲ್ಲಿದ್ದಾರೆ. ಮುಂದಿನ ದಿನಗಳಲ್ಲಿ ಕೇಂದ್ರ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯುವುದೇ ನಮ್ಮ ಪಕ್ಷದ ಗುರಿ ಅದಕ್ಕೆ ನಾವೆಲ್ಲರೂ ಹೋರಾಟ ಮಾಡುತ್ತಿದ್ದೇವೆ ಎಂದು ಹೇಳಿದರು.

ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶುಭದಾಯಿನಿ, ಮುಖಂಡರಾದ ಸಿ.ಎಂ.ದ್ಯಾವಪ್ಪ ರಾಮಕೃಷ್ಣ ಮೋಹನ್ ಕುಮಾರ್, ಕೃಷ್ಣ, ರಮೇಶ್, ರಾಮಕೃಷ್ಣ, ಶ್ರೀಧರ್, ಜ್ಯೋತಿ, ಸೇರಿದಂತೆ ಇತರರು ಭಾಗವಹಿಸಿದ್ದರು

ಅಂಬರೀಶ್ ಹುಟ್ಟುಹಬ್ಬ ಆಚರಣೆ

ಶ್ರೀರಂಗಪಟ್ಟಣ, ಮೇ 30– ನಟ ಅಂಬರೀಶ್ 74ನೇ ವರ್ಷದ ಹುಟ್ಟು ಹಬ್ಬವನ್ನು ಅಭಿಮಾನಿಗಳ ಸಂಘ ಸಂಭ್ರಮದಿಂದ ಆಚರಿಸಿತು.

ರಾಜ್ಯ ಅಂಬರೀಷ್ ಅಭಿಮಾನಿ ಸಂಘದ ಗೌರವಾಧ್ಯಕ್ಷ ಎಸ್.ಎಲ್.ಲಿಂಗರಾಜು ನೇತೃತ್ವದಲ್ಲಿ ಪಟ್ಟಣದ ಕುವೆಂಪು ವೃತ್ತದಲ್ಲಿ ಅಭಿಮಾನಿಗಳು ಜಮಾಯಿಸಿ ಅಂಬರೀಶ್ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡಿ ಹಣ್ಣು ಕಾಯಿ ಹೊಡೆದು ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು. ಅಭಿಮಾನಿಗಳ ಆರಾಧ್ಯ ದೈವ ನಟ ರೆಬಲ್ ಸ್ಟಾರ್ ಅಂಬರೀಶ್ ಅವರ ಗುಣಗಳು ಇತ್ತೀಚಿನ ನಟರಿಗೆ ಮಾರ್ಗದರ್ಶನವಾಗಬೇಕು ನಟನಾಗಿ, ಸಂಸದ ಸಚಿವರಾಗಿ, ರಾಜ್ಯದ ಗಮನ ಸೆಳೆದ ನಟ ಇವರು. ಪ್ರತಿಯೊಬ್ಬರನ್ನು ಪ್ರೀತಿಸಿ ಮಾತನಾಡಿಸುತ್ತಿದ್ದ ರೀತಿಯಿಂದಲೇ ರಾಜ್ಯವಲ್ಲದೆ ದೇಶದಲ್ಲಿ ಅಭಿಮಾನಿಗಳು ಹೆಚ್ಚಾಗಿದ್ದಾರೆ ಎಂದರು.

ಸಂಘದ ಅಧ್ಯಕ್ಷ ಮಹೇಶ್, ಮುಖಂಡರಾದ ಶಾಮಿಯಾನ ಪುಟ್ಟರಾಜು, ಮಹದೇವಸ್ವಾಮಿ, ಈ.ಕುಮಾರ್, ಸುನೀಲ್, ರಘು, ಬಿ.ಶಂಕರ್ ಬಾಬು, ಕಾರ್ಯದರ್ಶಿ ಜಗದೀಶ್, ಕುಬೇರಪ್ಪ, ಗಂಗಾಧರ್, ಮಂಜು, ಮೋಹನ್, ದೇವರಾಜಣ್ಣ, ಹರೀಶ, ಯಶವಂತ್, ಗೌಡಹಳ್ಳಿ ದೇವರಾಜು, ಶಂಕರ್, ಭರತ್‌ಕುಮಾರ್, ಕುಮಾರ್, ರಾಜೇಶ್, ಚಿಂದಗಿರಿಕೊಪ್ಪಲು ತಮ್ಮೇಗೌಡ, ಚನ್ನಪ್ಪ, ಶೆಟ್ಟಹಳ್ಳಿ ಪುರುಷೋತ್ತಮ್, ನಾಗರಾಜು, ಕೃಷ್ಣ ಸೇರಿದಂತೆ ಅಭಿಮಾನಿಗಳು ಭಾಗವಹಿಸಿದ್ದರು.



ಅಂಬರೀಶ್ ಅಭಿಮಾನಿ ಸಂಘದವರು ರೋಗಿಗಳಿಗೆ ಹಣ್ಣುಗಳನ್ನು ವಿತರಿಸಿದರು

ಸುಂಕಾತೊಣ್ಣೂರು ಡೇರಿಗೆ ಲೋಕೇಶ್ ಅಧ್ಯಕ್ಷ



ಅಧ್ಯಕ್ಷ ಲೋಕೇಶ್ ಅವರನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅಭಿನಂದಿಸಿದರು.

ಪಾಂಡವಪುರ: ತಾಲೂಕಿನ ಸುಂಕಾತೊಣ್ಣೂರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಲೋಕೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಹಿಂದಿನ ಅಧ್ಯಕ್ಷ ಎಸ್.ಜಿ.ಮಹೇಶ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಲೋಕೇಶ್ ಹೊರತುಪಡಿಸಿ ಉಳಿದ ಯಾವೊಬ್ಬ ನಿರ್ದೇಶಕರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಲೋಕೇಶ್ ಅವರನ್ನು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಮಾಡಲಾಗಿದೆ ಎಂದು ಚುನಾವಣಾಧಿಕಾರಿಯೂ ಆದ ಕಾರ್ಯದರ್ಶಿ ಎಸ್.ಕೆ. ರವಿ ಘೋಷಿಸಿದರು.

ಲೋಕೇಶ್ ಅವರು ಡೇರಿ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಮನ್‌ಮುಲ್ ನಿರ್ದೇಶಕ ಸಿ. ಶಿವಕುಮಾರ್ ನೂತನ ಅಧ್ಯಕ್ಷರನ್ನು ಅಭಿನಂದಿಸಿದರು. ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾಗಿ ನೂತನವಾಗಿ ಆಯ್ಕೆಯಾದ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರಿಗೂ ಸಹ ಡೇರಿ ವತಿಯಿಂದ ಅಭಿನಂದನೆ ಸಲ್ಲಿಸಿದರು.

ಸುಂಕಾತೊಣ್ಣೂರು ಡೇರಿಗೆ ಒಕ್ಕೂಟದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡುವ ಪ್ರಾಮಾಣಿಕ ಕೆಲಸ ಮಾಡಿಕೊಡಲಾಗುವುದು, ಇಲ್ಲಿನ ಡೇರಿಯ ಮೇಲಂತಸ್ತಿನ ಕಟ್ಟಡ ನಿರ್ಮಾಣಕ್ಕೂ ಸಹಕಾರ ನೀಡಲಾಗುವುದು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಭರವಸೆ ನೀಡಿದರು.

ಅಧ್ಯಕ್ಷ ಲೋಕೇಶ್ ಮಾತನಾಡಿ, ಎಲ್ಲರ ಸಹಕಾರದಿಂದ ಡೇರಿ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೇನೆ, ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರ ಪಡೆದು ಸಂಘದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು.

ಉಪಾಧ್ಯಕ್ಷ ಹೇಮಂತ್ ಕುಮಾರ್, ಮಾಜಿ ಅಧ್ಯಕ್ಷ ಎಸ್.ಜಿ.ಮಹೇಶ್, ನಿರ್ದೇಶಕರಾಗಿ ಜೆ. ದೇವೇಗೌಡ, ಆರ್.ಸವೀನ, ಎಸ್.ಟಿ. ಅಪ್ಪುಗೌಡ, ಸತೀಶ, ಲೋಕೇಶ್, ಯಶೋಧಮ್ಮ, ರಾಮಚಂದ್ರು, ಕಾಳೇಗೌಡ(ಮೊಗ್ಗಣ), ಗ್ರಾಮದ ಮುಖಂಡರಾದ ಜಾವಪ್ಪರ ಕುಮಾರ, ಹಳೇಗದ್ದೆ ಮಹೇಶ್, ಚಿಕ್ಕ ಕಾಳಪ್ಪರ ಸೋಮಶೇಖರ್, ಧರ್ಮ, ಪಾರ್ಥಸಾರಥಿ, ಮಮತ ತಿಮ್ಮೇಗೌಡ, ಶಾಮಿಯಾನ ಶಿವಣ್ಣ, ಮೂರ್ತಿ, ವಿಜಿ, ಪೆಪ್ಸಿರವಿ, ಕ್ಯಾಂಡೆಟ್ ರವಿ, ಡೇರಿ ಮಾಜಿ ನಿರ್ದೇಶಕ ಮಹದೇವು, ಡುಮ್ಮ ರವಿ, ಗುಲಾಬಿಮೋಹನ, ರಾಮು ಇದ್ದರು.

ಎಸ್‌ಐಆರ್‌ನ ನ್ಯೂನತೆ ಖಂಡಿಸಿ ಎಸ್‌ಐಆರ್ ವಿರೋಧಿ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ



ಜಾತ್ಯಾತೀತ ಪಕ್ಷಗಳ, ಜನಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ: ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಯಲ್ಲಿ ನ್ಯೂನ್ಯತೆಗಳಿದ್ದು ಇದನ್ನು ಖಂಡಿಸಿ ನಗರದಲ್ಲಿ ಎಸ್‌ಐಆರ್ ವಿರೋಧಿ ಜಾತ್ಯಾತೀತ ಪಕ್ಷಗಳ, ಜನಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಯನ್ನು ಖಂಡಿಸಿ ಧಿಕ್ಕಾರದ ಘೋಷಣೆಗಳನ್ನು ಕೂಗುತ್ತಾ ಕೆಲಕಾಲ ಪ್ರತಿಭಟನೆ ನಡೆಸಿ ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು, ಈ ಪರಿಷ್ಕರಣೆಯಲ್ಲಿ ಎಲ್ಲಾ ದಸ್ತಾವೇಜುಗಳಿದ್ದರೂ ಲಾಜಿಕಲ್ ಡಿಸ್ಕ್ರಿಪೆನ್ಸಿ ಹೆಸರಿನಲ್ಲಿ ಹೆಸರಿನ, ದಿನಾಂಕಗಳ, ವಿಳಾಸದ ಸಣ್ಣಪುಟ್ಟ ವ್ಯತ್ಯಾಸ ಇದ್ದರೂ ಸಾಕು ಅನುಮಾನಾಸ್ಪದ ಮತದಾರರು ಎಂದು ಮತದಾನದ ಹಕ್ಕನ್ನು ನಿರಾಕರಿಸಲಾಗುತ್ತದೆ ಎಂದು ಆರೋಪಿಸಿದರು.

ಇದು ಬಡವರು, ಅಲ್ಪಸಂಖ್ಯಾತರು, ಅನಕ್ಷರಸ್ಥರಿಗೆ ತೊಂದರೆಯಾಗುತ್ತದೆ, ಇದನ್ನು ಖಂಡಿಸಿ ಪ್ರತಿಭಟನೆ ನಡೆಸಿ ಜನಜಾಗೃತಿ ಮೂಡಿಸಲಾಗುತ್ತದೆ ಎಂದರು,

ಇದುವರೆಗೆ 13 ರಾಜ್ಯಗಳಲ್ಲಿ ನಡೆದ ಎಸ್‌ಐಆರ್‌ನಲ್ಲಿ 6.5 ಕೋಟಿ ಮತದಾರರನ್ನು ಹೊರ ಹಾಕಲಾಗಿದ್ದು, ಇದರಲ್ಲಿ 5 ಕೋಟಿ ಅರ್ಹ ಮತದಾರರು ಇದ್ದಾರೆ, ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಗೆ ನಮ್ಮ ವಿರೋಧವಿಲ್ಲ, ಆದರೆ ಅದು ರಾಜಕೀಯದಿಂದ ಕೂಡಿರದೆ ನ್ಯಾಯಯುತವಾಗಿರಬೇಕು ಎಂದು ಆಗ್ರಹಿಸಿದರು,

ಇದುವರೆಗೆ ಅತಿಹೆಚ್ಚು ಡಿಲೀಟ್ ಆಗಿರುವವರು ವಿವಾಹಿತ ಮಹಿಳೆಯರು, ಅಲೆಮಾರಿ ದಲಿತ ಸಮುದಾಯಗಳು, ಗ್ರಾಮೀಣ ಬಡವರು ಹಾಗೂ ಅಲ್ಪಸಂಖ್ಯಾತರು ಎಂದರು.

ಕರಡು ಪಟ್ಟಿ ತಯಾರಾದ ಮೇಲೆ ಕಡ್ಡಾಯವಾಗಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳನ್ನು ಕರೆದು ಅದರಲ್ಲಿ ಅದು ಸಾರ್ವಜನಿಕ ಪರಿಶೀಲನೆಗೆ ಒಳಪಡಬೇಕು. ಮುಕ್ತವಾಗಿ ತಿದ್ದುಪಡಿಗಳನ್ನು ಸಂಗ್ರಹಿಸಿದ ನಂತರವೇ ಅಂತಿಮಗೊಳಿಸಬೇಕು. ಜನ ದುಡಿಯಲು ದೂರು ದೂರ ಹೋಗಿರುವುದರಿಂದ, ಕೂಡಲೇ ದಾಖಲೆಗಳನ್ನು ಪಡೆಯುವುದು ಸುಲಭ ಇಲ್ಲದಿರುವುದರಿಂದ ಅಪೀಲ್ ಮತ್ತು ಪರಿಶೀಲನೆಗೆ ಕನಿಷ್ಟ 6 ತಿಂಗಳ ಸಮಯಾವಕಾಶ ಇರಬೇಕು ಎಂದರು,

ಪ್ರತಿಭಟನೆಯಲ್ಲಿ ಸಂಚಾಲಕ ಕೆ. ವೆಂಕಟರಾಜು ಎಸ್‌ಡಿಪಿಐ ಸಂಘಟನೆಯ ಅಬ್ರಾರ್ ಅಹಮ್ಮದ್, ಖಲೀಲ್ ವುಲ್ಲಾ, ಮಹೇಶ್, ಸೈಯದ್ ಆರೀಫ್, ಜಬೀನೂರ್, ಸೈಯದ್, ಮಹಮ್ಮದ್ ಅಮೀಕ್, ಬಂಗಾರಸ್ವಾಮಿ, ಸಂಘಸೇನಾ, ಕಾಂಗ್ರೆಸ್ ಪಕ್ಷದ ಮಹಮ್ಮದ್ ಅಸ್ಗರ್, ಬಿ.ಕೆ.ರವಿಕುಮಾರ್, ನಸ್ರುಲ್ಲಾ, ಮಹದೇವ್, ನಾಗರಾಜು, ಸ್ವಾಮಿ, ರವಿಗೌಡ, ನಾಗರತ್ನ, ಚಿನ್ನಮ್ಮ, ಕಲಾವತಿ, ಶಕುಂತಲಾ, ಗುರುಸ್ವಾಮಿ, ಪುಣಜನೂರು ದೊರೆಸ್ವಾಮಿ, ಅಬ್ರಾಹಂ ಡಿ.ಸಿಲ್ವಾ ಸೇರಿದಂತೆ ಇತರರು ಭಾಗವಹಿಸಿದ್ದರು.

ನಿಗೂಢವಾಗಿ ನಾಪತ್ತೆಯಾಗಿದ್ದ ಮಹಿಳೆಯ ಶವ ಪತ್ತೆ

ಚಿನ್ನಾಭರಣಕ್ಕಾಗಿ ಗುಂಡಿಗೆ ತಳ್ಳಿ ಕೊಲೆ ಮಾಡಿದ್ದ ಆರೋಪಿ ಬಂಧನ

ನಂಜನಗೂಡು/ಮಲ್ಲುಂಡಿ: ನಿಗೂಢವಾಗಿ ನಾಪತ್ತೆಯಾಗಿದ್ದ ತಾಲೂಕಿನ ಕಸುವಿನಹಳ್ಳಿ ಗ್ರಾಮದ ವೃದ್ಧೆ ಶವವಾಗಿ ಪತ್ತೆಯಾಗಿದ್ದು ಗ್ರಾಮದ ಜಮೀನೊಂದರ ಇಂಗು ಗುಂಡಿಯಲ್ಲಿ ಮೃತ ದೇಹ ಸಿಕ್ಕಿದ್ದು ಚಿನ್ನಾಭರಣಕ್ಕಾಗಿ ಸ್ಥಳೀಯ ನೋರ್ವ ಕೊಲೆ ಮಾಡಿದ್ದು ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಓರ್ವ ಆರೋಪಿಯನ್ನು ಬಂಧಿಸಿದ್ದಾರೆ.

ಕಸುವಿನಹಳ್ಳಿ ಗ್ರಾಮದ ಶಿವರುದ್ರಮ್ಮ (63) ನಾಲ್ಕು ದಿನಗಳ ಹಿಂದೆ ಮನೆಯಿಂದ ತೆರಳಿದ್ದವರು ಬಳಿಕ ನಿಗೂಢವಾಗಿ ನಾಪತ್ತೆಯಾಗಿದ್ದರು. ಈ ಬಗ್ಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ದಾಖಲಾಗಿತ್ತು. ಅನುಮಾನಾಸ್ಪದವಾಗಿದ್ದ ಪ್ರಕರಣವನ್ನ ಗಂಭೀರವಾಗಿ ಪರಿಗಣಿಸಿದ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಶಿವರುದ್ರಮ್ಮರನ್ನು ಪತ್ತೆ ಹಚ್ಚುವ ಕಾರ್ಯಾಚರಣೆ ಆರಂಭಿಸಿದಾಗ ಕಸುವಿನಹಳ್ಳಿ ಗ್ರಾಮದ ಜಮೀನೊಂದರ ಇಂಗು ಗುಂಡಿಯೊಂದರಲ್ಲಿ ಮಹಿಳೆಯ ಮೃತದೇಹವನ್ನ ಹಾಕಿ ಕಲ್ಲು ಮಣ್ಣಿನಿಂದ ಅರೆಬರೆ ಮುಚ್ಚಿರುವ ದೃಶ್ಯ ಪೊಲೀಸರಿಗೆ ಕಂಡು ಬಂದಿದೆ. ಕೂಡಲೇ ಕಾರ್ಯೋನ್ಮುಖರಾದ ಪೊಲೀಸರು ತನಿಖೆ ಆರಂಭಿಸಿದಾಗ ನಿಗೂಢ ಕೊಲೆ ರಹಸ್ಯ ಬಯಲಾಗಿದ್ದು ಗ್ರಾಮದ



ನಿವಾಸಿ ಮಹದೇವಪ್ಪ ಎಂಬಾತನ್ನ ಬಂಧಿಸಿದ್ದಾರೆ.

ಮೃತ ಶಿವರುದ್ರಮ್ಮ ಮೈ ಮೇಲೆ ಸುಮಾರು 70 ಗ್ರಾಂ ಚಿನ್ನಾಭರಣ ಧರಿಸಿದ್ದರು ಎನ್ನಲಾಗಿದ್ದು ಅವರು ಮಹಾಲಿಂಗೇಶ್ವರ ಸ್ವಾಮಿ ದೇವಾಲಯಕ್ಕೆ ಪೂಜೆ ಸಲ್ಲಿಸುವ ಉದ್ದೇಶದಿಂದ ಬಿಲ್ವಪತ್ರೆ ಕೀಳಲೆಂದು ಹೊರವಲಯದಲ್ಲಿರುವ ದೇವಾಲಯದ ಸಮೀಪಕ್ಕೆ ಆಗಮಿಸಿದ್ದರು. ಈ ಸಂದರ್ಭ ಸಮೀಪದ ಜಮೀನಿನಲ್ಲಿದ್ದ ಮಹದೇವಪ್ಪ ನನ್ನು ನೋಡಿ ಬಿಲ್ವಪತ್ರೆ ಕಿತ್ತು ಕೊಡಲು ಮನವಿ ಮಾಡಿಕೊಂಡಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಮಹದೇವಪ್ಪ ಬಿಲ್ವಪತ್ರೆ ಕಿತ್ತುಕೊಡುವ ವೇಳೆ ವೃದ್ಧ ಮಹಿಳೆಯ ಮೈಮೇಲಿನ ಚಿನ್ನಾಭರಣಗಳನ್ನು ಲಪಟಾಯಿಸಲು ಆಲೋಚಿಸಿ ತಾನು ಕೆಲಸ ಮಾಡುತ್ತಿರುವ ತೋಟದಲ್ಲಿ ಗಂಧದ ಮರದ ಪತ್ರೆಗಳಿದ್ದು ಅವುಗಳನ್ನೂ ಸಹ ಪೂಜೆಗೆ ಕಿತ್ತುಕೊಡುವುದಾಗಿ ಅವರನ್ನು ಮನವೊಲಿಸಿ ಸಮೀಪದಲ್ಲೇ ತಾನು ಕೆಲಸ ನಿರ್ವಹಿಸುತ್ತಿದ್ದ ಜಮೀನಿಗೆ ಕರೆದೊಯ್ದು ಗಂಧದ ಮರದ ಬಳಿ ಇದ್ದ ಇಂಗು ಗುಂಡಿಗೆ ತಳ್ಳಿ ಕೆಳಕ್ಕೆ ಬೀಳಿಸಿ ಬಳಿಕ ಭೀಕರವಾಗಿ ಹಲ್ಲೆ ಮಾಡಿ ಕೊಲೆ ಮಾಡಿದ್ದಾನೆ.

ನಂತರ ಮಹಿಳೆಯ ಮೈಮೇಲಿನ ಚಿನ್ನಾಭರಣಗಳನ್ನು ಕಿತ್ತುಕೊಂಡು ಮೃತ ದೇಹದ ಮೇಲೆ ಮಣ್ಣು ಮುಚ್ಚಿದ್ದಾನೆ. ಬಳಿಕ ಮಹಿಳೆಯ ಚಪ್ಪಲಿ ಹಾಗೂ ಅವರ ಕೈಲಿದ್ದ ಬ್ಯಾಗ್ ತೆಗೆದುಕೊಂಡು ಹೋಗಿ ಮೃತ ಶಿವರುದ್ರಮ್ಮನವರ ಜಮೀನಿನಲ್ಲಿ ಎಸೆದು ಚಿರತೆ ಹೆಜ್ಜೆ ಗುರುತನ್ನು ಕೃತಕವಾಗಿ ಮೂಡಿಸಿದ್ದಾನೆ. ಇನ್ನು ಮೃತ ಮಹಿಳೆಯ ಪತಿ ಗುರುಸ್ವಾಮಪ್ಪ ತನ್ನ ಪತ್ನಿ ಕಾಣೆಯಾಗಿರುವ ಬಗ್ಗೆ ಪೊಲೀಸರಿಗೆ ದೂರು ನೀಡಿ ಬಳಿಕ ಗ್ರಾಮದಲ್ಲಿ ಹುಡುಕಾಟ ನಡೆಸುತ್ತಿದ್ದ ವೇಳೆ ಸಹಾ ಈತ ಗ್ರಾಮಸ್ಥರ ಜೊತೆಯಲ್ಲಿಯೇ ಇದ್ದು ಊರಿನಲ್ಲಿ ಚಿರತೆ ಕಾಟವಿದ್ದು ವನ್ಯಮೃಗದ ದಾಳಿಯಾಗಿರಬಹುದು ಎಂದು ಹುಡುಕಾಟ ನಡೆಸುತ್ತಿದ್ದವರಿಗೆ ತಿಳಿಸುವ ಮೂಲಕ ಕೊಲೆ ಪ್ರಕರಣ ಮುಚ್ಚಿಹಾಕಲು ಮುಂದಾಗಿದ್ದಾನೆ. ಆದರೆ ಪೊಲೀಸರು ಸಂಶಯಗೊಂಡು ಮಹದೇವಪ್ಪನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಆತ ಕೊಲೆ ಮಾಡಿರುವ ಕೃತ್ಯವನ್ನು ಒಪ್ಪಿಕೊಂಡು ಮೃತದೇಹವನ್ನು ಹೂಳಿದ್ದ ಸ್ಥಳವನ್ನು ತೋರಿಸಿಕೊಟ್ಟಿದ್ದಾನೆ ಇನ್ನು ಕೈಸಾಲ ಹೆಚ್ಚಾಗಿದ್ದರಿಂದ ಚಿನ್ನಾಭರಣವನ್ನು ದೋಚಿ ಸಾಲ ತೀರಿಸುವ ಉದ್ದೇಶದಿಂದ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಶ್ವ ತಂಬಾಕು ವಿರೋಧಿ ದಿನಾಚರಣೆ: ಚಾ.ನಗರದಲ್ಲಿ ವಾಕಥಾನ್



ವಿಶ್ವ ತಂಬಾಕು ವಿರೋಧಿ ದಿನಾಚರಣೆ ಅಂಗವಾಗಿ ವಾಕಥಾನ್ ನಡೆಸಲಾಯಿತು.

ಚಾಮರಾಜನಗರ: ಮೈಸೂರಿನ ಕ್ಲಿಯರ್‌ಮೆಡಿ ರೇಡಿಯಂಟ್ ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ವಿಶ್ವ ತಂಬಾಕು ವಿರೋಧಿ ದಿನಾ ಚರಣೆ ಅಂಗವಾಗಿ ನಗರದಲ್ಲಿ ವಾಕಥಾನ್ ಬಹಳ ಯಶಸ್ವಿಯಾಗಿ ನಡೆಯಿತು.

ಕ್ಲಿಯರ್‌ಮೆಡಿ ರೇಡಿಯಂಟ್ ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆ ಮೈಸೂರು, ರೆಡ್ ಕ್ರಾಸ್, ರೋಟರಿ ಕ್ಲಬ್ ಅಸೋಸಿಯೇಷನ್ ಹಾಗೂ ಬಸವರಾಜೇಂದ್ರ ಆಸ್ಪತ್ರೆ, ಚಾಮರಾಜನಗರ ಇವರ ಸಹಯೋಗದಲ್ಲಿ ವಾಕಥಾನ್ ನಗರದ ಚಾಮರಾಜೇಶ್ವರ ದೇವಸ್ಥಾನದಿಂದ ಜಿಲ್ಲಾಡಳಿತ ಭವನದವರೆಗೆ ನಡೆಯಿತು.

ಜಿ.ಪಂ.ಸಿಇಓ ಮೋನಾರೋತ್ ವಾಕಥಾನ್‌ಗೆ ಚಾಲನೆ ನೀಡಿ, ಆರೋಗ್ಯಕ್ಕೆ ಮಾರಕವಾಗಿರುವ ತಂಬಾಕು ಸೇವನೆಯಿಂದ ದೂರವಿರ ಬೇಕು. ಧೂಮಪಾನ ಮತ್ತು ತಂಬಾಕಿನ ಉತ್ಪನ್ನ ಗಳನ್ನು ತ್ಯಜಿಸಿ ಆರೋಗ್ಯ ಕಾಪಾಡಿಕೊಳ್ಳಿ, ತಂಬಾಕು ಮುಕ್ತ ಸ್ವಸ್ಥ ಸಮಾಜ ಹಾಗೂ ಆರೋಗ್ಯವಂತ ಭಾರತವನ್ನು ರೂಪಿಸುವಲ್ಲಿ ಕೈಜೋಡಿಸಬೇಕು ಎಂದು ಸಾರ್ವಜನಿಕರು, ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಗಂಗಾಧರ್ ಮಾತನಾಡಿ, ತಂಬಾಕು ಸೇವನೆಯಿಂದ ಜಗತ್ತಿನಲ್ಲಿ ಕೋಟ್ಯಾಂತರ ಸಾವು ಆಗುತ್ತಿದೆ. ಶಾಲಾ–ಕಾಲೇಜು ಹಂತದಲ್ಲಿ ಇದು ಹೆಚ್ಚಾಗುತ್ತಿದೆ. ಹೆಣ್ಣು ಮಕ್ಕಳು ಒಳಾಗಿರುವುದನ್ನು ಕಾಣುತ್ತಿದ್ದೇವೆ. ಇದು ವಿಷಾದಕರ ಸಂಗತಿಯಾಗಿದೆ. ತಂಬಾಕನ್ನು ಒಬ್ಬರು ಸೇವನೆ ಮಾಡಿದರೆ ಅಕ್ಕಪಕ್ಕದವರಿಗೆ ತೊಂದರೆ ಉಂಟು ಮಾಡುತ್ತದೆ ಎಂದರು.

ಡಿಹೆಚ್‌ಓ ಡಾ.ಚಿದಂಬರಂ ಮಾತನಾಡಿ, ತಂಬಾಕು ಸೇವನೆಯಿಂದ ಕ್ಯಾನ್ಸರ್ ರೋಗ ಹೆಚ್ಚಾಗಿದೆ. ಫ್ಯಾಷನ್‌ಗಾಗಿ ಧೂಮಪಾನ ಚಟಕ್ಕೆ ಯುವ ಜನಾಂಗ ಬಲಿಯಾಗುತ್ತಿರುವುದು ಕಂಡು ಬರುತ್ತಿದೆ. ಆದ್ದರಿಂದ ಅಂತಹ ಮಾರಕ ತಂಬಾಕಿನ ಉತ್ಪನ್ನ ಗಳಿಂದ ದೂರವಿರಬೇಕು ಎಂದರು.

ಬಸವರಾಜೇಂದ್ರ ಆಸ್ಪತ್ರೆಯ ಡಾ.ಬಸವರಾಜೇಂದ್ರ ಮಾತನಾಡಿ, ಕೇರಳ ರಾಜ್ಯ ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ ತಂಬಾಕು ನಿಷೇಧಿಸಲಾಗಿದೆ. ಅದೇ ರೀತಿ ರಾಜ್ಯದಲ್ಲೂ ನಿಷೇಧ ಮಾಡಲು ಸರ್ಕಾರ ಒಂದು ದೃಢ ನಿರ್ಧಾರ ಮಾಡಬೇಕು ಎಂದರು.

ಡಾ.ರವಿ ಮಾತನಾಡಿ ತಂಬಾಕು ಮತ್ತು ನಿಕೋಟಿನ್ ಉತ್ಪನ್ನಗಳ ಬಗ್ಗೆ ಉದ್ಯಮಗಳ ಮೋಸಕಾರಿ ತಂತ್ರಗಳನ್ನು ಬಯಲಿಗೆಳೆಯುವುದು, ತಂಬಾಕು ಸೇವನೆಯ ಹಾನಿಕಾರಕ ಪರಿಣಾಮಗಳು ಹಾಗೂ ಕ್ಯಾನ್ಸರ್ ತಡೆಗಟ್ಟುವಿಕೆಯ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ವಾಕಥಾನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ವಾಕಥಾನ್‌ನಲ್ಲಿ ಡಾ.ಶ್ವೇತ, ಡಾ.ರಕ್ಷಿತ್ ಶೃಂಗೇರಿ, ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು, ಮಾಜಿ ಅಧ್ಯಕ್ಷ ಶ್ರೀನಿವಾಸನ್, ಸಿಮ್ಸ್ ಪ್ರಾಂಶುಪಾಲ ಡಾ.ಅಜಯ್, ಐಟಿಐ ಕಾಲೇಜು ಪ್ರಾಂಶುಪಾಲ ಡಾ.ರಂಗಸ್ವಾಮಿ,ಕ್ಲಿಯರ್‌ಮೆಡಿ ರೇಡಿಯಂಟ್ ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆ ವಿಭಾಗೀಯ ಮುಖ್ಯಸ್ಥ ರವಿಕುಮಾರ್, ವ್ಯವಹಾರ ಮುಖ್ಯಸ್ಥ ಚಲಂ, ಮಾರ್ಕೆಟಿಂಗ್ ಮ್ಯಾನೇಜರ್ ಸುನೀಲ್ ಕುಮಾರ್, ಮೋಹನ್ ಕುಮಾರ್, ನಿತಿನ್, ವಿಮಲ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಡಿಕೆಶಿ ಸಂಪುಟದಲ್ಲಿ ಮಹದೇವಪ್ಪರಿಗೆ ಸಚಿವ ಸ್ಥಾನ ನೀಡಲು ಮುಖಂಡರ ಒತ್ತಾಯ



ಮುಖಂಡರ ಸಭೆಯಲ್ಲಿ ತಾ.ಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿದರು

ತಿ.ನರಸೀಪುರ, ಮೇ 30– ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ನಾಡಿನ ಪ್ರಭಾವಿ ನಾಯಕರೂ ಆದ ನರಸೀಪುರ ಶಾಸಕ ಡಾ. ಎಚ್.ಸಿ. ಮಹದೇವಪ್ಪ ಅವರನ್ನು ಕಡೆಗಣಿಸದೆ ಸಚಿವ ಸ್ಥಾನ ನೀಡಬೇಕು ಎಂದು ಹಿರಿಯ ಮುಖಂಡ ಹಾಗೂ ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಸ್ವಾಮಿ ಕಾಂಗ್ರೆಸ್ ವರಿಷ್ಠರನ್ನು ಆಗ್ರಹಿಸಿದ್ದಾರೆ.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ವಿಧಾನಸಭಾ ಕ್ಷೇತ್ರದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯನ್ನು ನಡೆಸಿ, ಮಾತನಾಡಿದ ಅವರು ಸಚಿವ ಸಂಪುಟದಲ್ಲಿ ವಿವಿಧ ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿ, ಹಲವು ಸಮಸ್ಯೆಗಳನ್ನು ನಿಭಾಯಿಸಿರುವ ಮಹದೇವಪ್ಪ ಅವರನ್ನು ಕೈಬಿಡಬೇಡಿ, ಕಡೆಗಣಿಸಬೇಡಿ. ಜಿಲ್ಲೆಯ ಪೂರ್ಣ ಪ್ರಮಾಣದ ಅಭಿವೃದ್ಧಿಗೆ ಅವರು ಸಚಿವರಾಗಲೇಬೇಕು ಎಂದು ಒತ್ತಾಯಿಸಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಡಾ. ಹೆಚ್.ಸಿ.ಮಹದೇವಪ್ಪ ಅವರು ತಮ್ಮ ಪ್ರಭಾವದಿಂದ ಎರಡು ಲಕ್ಷಗಳಿಗೂ ಅಧಿಕ ಮತಗಳನ್ನು ಪಡೆದು ಸುನೀಲ್ ಬೋಸ್ ಅವರನ್ನು ಸಂಸದರಾಗಿ ಗೆಲ್ಲಿಸಿಕೊಂಡು ಬಂದಿದ್ದಾರೆ. ರಾಜ್ಯದಾದ್ಯಂತ ಎಲ್ಲಾ ಜನ ಸಮುದಾಯಗಳಲ್ಲಿಯೂ ಲಕ್ಷಾಂತರ ಅಭಿಮಾನಿಗಳನ್ನ ಹೊಂದಿದ್ದಾರೆ. ಮುಖ್ಯಮಂತ್ರಿ ಇಲ್ಲವೇ ಉಪಮುಖ್ಯಮಂತ್ರಿ ಆಗುವ ಅರ್ಹತೆಯನ್ನು ಉಳ್ಳವರಾಗಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಲೋಕೋಪಯೋಗಿ ಸಚಿವರಾಗಿಯೂ ಕಾರ್ಯ ನಿರ್ವಹಿಸಿ ಅಭಿವೃದ್ಧಿ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆ. ಅವರ ಸೇವಾ ಹಿರಿತನ ಮತ್ತು ಅಭಿವೃದ್ಧಿ ಕಾಳಜಿಯನ್ನು ಪರಿಗಣಿಸಬೇಕು ಎಂದರು.

ಅಹಿಂದ ವರ್ಗದ ಜನರು ಪ್ರಾಬಲ್ಯವಿರುವ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷದ ಹಿತದೃಷ್ಟಿಯಿಂದ ಮಹದೇವಪ್ಪ ಅವರ ಜೊತೆಗೆ ಎಂಎಲ್ಸಿ ಡಾ.ಯತೀಂದ್ರ ಸಿದ್ಧರಾಮಯ್ಯ ಅವರಿಬ್ಬರೂ ಸಚಿವ ಸಂಪುಟಕ್ಕೆ ಸೇರ್ಪಡೆಗೊಳ್ಳಬೇಕು. ಇಲ್ಲದಿದ್ದಲ್ಲಿ ಮುಂಬರುವ 2028ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆಯಾಗಲಿದೆ. ಅವರ ಅಭಿಮಾನಿಗಳ ಮುನಿಸಿನಿಂದ ಪಕ್ಷದೊಳಗೆ ಆಂತರಿಕ ಭಿನ್ನಮತ ಸೃಷ್ಟಿಯಾಗಲಿದೆ ಎಂದು ಎಚ್ಚರಿಸಿದ ಅವರು ಸಂಘಟನೆ ದುರ್ಬಲಗೊಳ್ಳುವುದಕ್ಕೆ ರಾಜ್ಯ ಹಾಗೂ ಕೇಂದ್ರ ನಾಯಕರು ಅವಕಾಶ ಕಲ್ಪಿಸಬಾರದು ಎಂದರು.

ಭೂ ನ್ಯಾಯ ಮಂಡಳಿ ಸದಸ್ಯ ಹಾಗೂ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಕುಕ್ಕೂರು ಗಣೇಶ್, ತಾ.ಪಂ ಮಾಜಿ ಅಧ್ಯಕ್ಷ ಎಚ್.ಎನ್.ಉಮೇಶ್ ಸೇರಿದಂತೆ ತಾಲೂಕು ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಕೋತ್ತೆಗಾಲ ಬಸವರಾಜು ಹಾಗೂ ಕೆಡಿಪಿ ಸದಸ್ಯ ಚಂದ್ರಧರ ಮಾತನಾಡಿದರು.

ಸಭೆಯಲ್ಲಿ ತಾ.ಪಂ ಮಾಜಿ ಸದಸ್ಯ ರಾಮಲಿಂಗಯ್ಯ, ಪಪಂ ಮಾಜಿ ಅಧ್ಯಕ್ಷ ಎನ್.ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಅಕ್ಕೂರು ಗುರುಮೂರ್ತಿ, ನಾಗರಾಜು ಚೀಕ, ರವಿಪ್ರಸಾದ್, ಮಹದೇವಸ್ವಾಮಿ, ಚಿಕ್ಕಣ್ಣ, ಮಲಿಯೂರು ದೋಳ್ಳಯ, ಮಾಜಿ ಸದಸ್ಯರಾದ ಕನ್ನಳ್ಳಿ ಲಕ್ಷ್ಮಣ, ಶಿವಣ್ಣ ಮಹದೇವ, ಗಂಗೇಶ, ಚಿಕ್ಕಮಾದ ನಾಯಕ, ಪ್ರದೀಪ್, ಸಿದ್ದಶೆಟ್ಟಿ ದೇವರಾಜ್, ಶಂಕರ, ರಂಗಸ್ವಾಮಿ ಕಾವಾಲಿ, ಮಣಿ, ಶಂಕರೇಗೌಡ, ಸಿದ್ದ, ಶಿವಣ್ಣ, ಕೋಣಗಳ್ಳಿ ನಾಗರಾಜು ಇದ್ದರು.



ಚುಟುಕು ಕ್ರಿಕೆಟ್ ರೋಚಕತೆ

–ವಾಸು ವಿ.ಹೊಂಗನೂರು

ಗುಜರಾತ್‌ನ ಅಹಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ(ಮೇ 31) ಚುಟುಕು ಕ್ರಿಕೆಟ್‌ನ ವೈಭವದ ವಾರ್ಷಿಕ ಹಬ್ಬ. ಟಿ–20 ಐಪಿಎಲ್ ಪಂದ್ಯಾವಳಿಯ 19ನೇ ಆವೃತ್ತಿಯ ಫೈನಲ್ ಪಂದ್ಯದಲ್ಲಿ 'ರಾಯಲ್ ಚಾಲೆಂಜರ್ಸ್ ಬೆಂಗಳೂರು' ಹಾಗೂ 'ಗುಜರಾತ್ ಟೈಟಾನ್ಸ್' ಕಪ್‌ಗಾಗಿ ಸೆಣಸಾಡಲಿವೆ. ರಾತ್ರಿ 7.30ಕ್ಕೆ ಆರಂಭವಾಗುವ ಪಂದ್ಯದ ಪ್ರತೀ ಕ್ಷಣವನ್ನು ಕಣ್ತುಂಬಿಕೊಳ್ಳಲು ಕ್ರಿಕೆಟ್ ಪ್ರೇಮಿಗಳು ಕಾತುರದಿಂದ ಕಾದಿದ್ದಾರೆ. ಈ ಸಂಭ್ರಮದ ಸಂದರ್ಭದಲ್ಲಿ ಐಪಿಎಲ್ ಪಯಣವನ್ನು ಹಿಂದಿರುಗಿ ನೋಡಿದರೆ ನಿಜಕ್ಕೂ ರೋಮಾಂಚನವಾಗುತ್ತದೆ.

2007ರಲ್ಲಿ ಖಾಸಗಿ ಸಂಸ್ಥೆಯಿಂದ ಇಂಡಿಯನ್ ಕ್ರಿಕೆಟ್ ಲೀಗ್(ಐಸಿಎಲ್) ಆರಂಭವಾಗಿದ್ದು, ಭಾರತೀಯ ಕ್ರಿಕೆಟ್‌ಗೆ ದೊಡ್ಡ ಸವಾಲನ್ನು ಎದುರಾಗಿಸಿತು. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಗೆ ತನ್ನ ಆಟಗಾರರನ್ನು ಮಾರುಕಟ್ಟೆಯಲ್ಲಿ ಕಳೆದುಕೊಳ್ಳುವ ಆತಂಕ ಉಂಟಾಯಿತು. ಅದೇ ಸಂದರ್ಭದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ಮೊದಲ ಟಿ–20 ವಿಶ್ವಕಪ್ ಅನ್ನು ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ಭಾರತ ತಂಡ ಗೆದ್ದು ಬೀಗಿತು. ನಂತರದಲ್ಲಿ ಚುಟುಕು ಕ್ರಿಕೆಟ್ ಜನಪ್ರಿಯತೆ ಹೆಚ್ಚಿದ್ದನ್ನು ಗಮನಿಸಿದ ಬಿಸಿಸಿಐ ಹೊಸ ಕ್ರಿಕೆಟ್ ವ್ಯವಹಾರ ಮಾದರಿ ರೂಪಿಸಲು ನಿರ್ಧರಿಸಿತು.

ಅಮೆರಿಕದ ಕ್ರೀಡಾ ಲೀಗ್‌ಗಳಾದ ಎನ್‌ಬಿಎ ಮತ್ತು ಎನ್‌ಎಫ್‌ಎಲ್ ಮಾದರಿಯನ್ನು ಅಧ್ಯಯನ ಮಾಡಿದ ಅವರು, ನಗರ ಆಧಾರಿತ ಫ್ರಾಂಚೈಸಿಗಳು, ಆಟಗಾರರ ಹರಾಜು, ಚಿಯರ್ ಲೀಡರ್ಸ್, ಮನರಂಜನೆ ಒಳಗೊಂಡ ಕ್ರಿಕೆಟ್ ಹಬ್ಬ ಆಚರಿಸುವ ಕಲ್ಪನೆಯ ಪ್ರತಿಫಲವಾಗಿ ಐಪಿಎಲ್ ಜನ್ಮ ತಳೆಯಿತು.

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯು 2007ರಲ್ಲಿ ಫ್ರಾಂಚೈಸಿ ಆಧಾರಿತ ಚುಟುಕು ಮಾದರಿ(ಟಿ20) ಕ್ರಿಕೆಟ್ ಲೀಗ್ ಅನ್ನು ಸ್ಥಾಪಿಸಿತು. 2008ರ ಏಪ್ರಿಲ್ 18ರಂದು ನಡೆದ ಚೊಚ್ಚಲ ಆವೃತಿಯ ಮೊದಲ ಪಂದ್ಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳು ನಡುವೆ ನಡೆಯಿತು. ಅಂದು ದೇಶದ 8 ರಾಜ್ಯಗಳನ್ನು ಪ್ರತಿನಿಧಿಸುವ ಫ್ರಾಂಚೈಸಿಗಳ ತಂಡ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು. ಉದಯೋನ್ಮುಖ ಭಾರತೀಯ ಪ್ರತಿಭೆಗಳೊಂದಿಗೆ ಅಂತರರಾಷ್ಟ್ರೀಯ ಆಟಗಾರರನ್ನೂ ತಂಡಗಳಲ್ಲಿ ಆಡಿಸಲಾಯಿತು. ಇದು ದೇಶೀಯ ಆಟಗಾರರಿಗೆ ದೊಡ್ಡ ವೇದಿಕೆ ಜೊತೆಗೆ ಆರ್ಥಿಕ ಭದ್ರತೆಗೂ ನೆರವಾಯಿತು.

ನಂತರದಲ್ಲಿ ಐಪಿಎಲ್ ಟಿ–20 ಇತಿಹಾಸವನ್ನೇ ಸೃಷ್ಟಿಸಿದೆ. ಆಟಗಾರರ ಹರಾಜು ಪ್ರಕ್ರಿಯೆ ಸೇರಿದಂತೆ ಕೆಲ ವಿಚಾರಗಳ ಬಗ್ಗೆ ಅಪಸ್ವರವಿದ್ದರೂ ಕೋಟ್ಯಾಂತರ ಕ್ರಿಕೆಟ್ ಅಭಿಮಾನಿಗಳು ಐಪಿಎಲ್ ಅನ್ನು ಯಶಸ್ವಿಯಾಗಿ ಹೊತ್ತು ತಂದಿದ್ದಾರೆ. 19 ವರ್ಷಗಳ ಸುದೀರ್ಘ ಪಯಣದಲ್ಲಿ ಐಪಿಎಲ್ ಜಾಗತಿಕ ಮಟ್ಟದಲ್ಲಿ ಸಂಚಲನ ಸೃಷ್ಟಿಸಿದೆ. ವಿಶ್ವಶ್ರೇಷ್ಠ ಲೀಗ್‌ಗಳಲ್ಲಿ ಶಾಶ್ವತ ಸ್ಥಾನ ಪಡೆದಿರುವ ಐಪಿಎಲ್, ಅತೀ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ಫುಟ್ಬಾಲ್ ಹವಾದ ನಡುವೆಯೂ ಕ್ರೀಡಾ ಜಗತ್ತಿನಲ್ಲಿ ತನ್ನದೇ ಆದ ಮೈಲಿಗಲ್ಲು ಸೃಷ್ಟಿಸಿದೆ.

2008ರಲ್ಲಿ 1 ಸಾವಿರ ಕೋಟಿ ಮೌಲ್ಯದೊಂದಿಗೆ ಆರಂಭವಾದ ಚುಟುಕು ಕ್ರಿಕೆಟ್ ಬಹುಬೇಗ ಜನಮನ್ನಣೆ ಪಡೆಯಿತು. ವರ್ಷದಿಂದ ವರ್ಷಕ್ಕೆ ತನ್ನ ಮೌಲ್ಯ ಹೆಚ್ಚಿಸಿಕೊಂಡು ಪ್ರಸಾರದ ಹಕ್ಕುಗಳು, ಜಾಗತಿಕ ಮಟ್ಟದಲ್ಲಿ ಜನಪ್ರಿಯತೆ, ಪ್ರಾಯೋಜಕತ್ವ, ಜಾಹೀರಾತು ಸೇರಿದಂತೆ ವಿವಿಧ ಮೂಲಗಳಿಂದ ಅತೀಹೆಚ್ಚು ಲಾಭ ಗಳಿಸುತ್ತಿದೆ. ಪ್ರಸಕ್ತ ಸಾಲಿನಲ್ಲಿ 12 ಬಿಲಿಯನ್ (1 ಲಕ್ಷ ಕೋಟಿ ರೂ.) ಬ್ರ್ಯಾಂಡ್ ಮೌಲ್ಯ ತಲುಪುವ ಮೂಲಕ ಬಹುದೊಡ್ಡ ಉದ್ಯಮವಾಗಿಯೂ ಗಮನ ಸೆಳೆದಿದೆ.

ಕಳೆದ ಮಾರ್ಚ್ 28ರಿಂದ ಕ್ರಿಕೆಟ್ ಪ್ರೇಮಿಗಳಿಗೆ ರಸದೌತಣ ನೀಡುತ್ತಿರುವ 19ನೇ ಆವೃತ್ತಿಯ ಐಪಿಎಲ್‌ಗೆ ಕೆಲವೇ ಗಂಟೆಗಳಲ್ಲಿ ತೆರೆ ಬೀಳಲಿದೆ. ಈ ಬಾರಿಯ ಪಂದ್ಯಾವಳಿಯಲ್ಲಿ ಆಡಿದ 10 ತಂಡಗಳ ಆಟಗಾರರು ಸಾಂಘಿಕ ಹಾಗೂ ವೈಯಕ್ತಿಕ ದಾಖಲೆ ಮೆರೆದಿದ್ದಾರೆ. ಸೋಲು–ಗೆಲುವಿನ ಪಯಣದಲ್ಲಿ ಕ್ರೀಡಾಸ್ಫೂರ್ತಿ ಮೆರೆದಿದ್ದಾರೆ. ಅಬ್ಬರದ ಆಟವಾಡಿದ ಅತ್ಯಂತ ಕಿರಿಯ ಆಟಗಾರ ರಾಜಸ್ತಾನ್ ರಾಯಲ್ಸ್ ತಂಡದ ವೈಭವ್ ಸೂರ್ಯವಂಶಿ ಸೇರಿದಂತೆ ಹಲವು ಆಟಗಾರರು ಗಣನೀಯ ಸಾಧನೆ ಮಾಡಿದ್ದಾರೆ.



2008ರಲ್ಲಿ ನಡೆದ ಚೊಚ್ಚಲ ಐಪಿಎಲ್ ವಿಜೇತ ತಂಡ ರಾಜಸ್ಥಾನ್ ರಾಯಲ್ಸ್


ಐಪಿಎಲ್ ಪಯಣದ ಮಹತ್ವದ ಹೆಜ್ಜೆಗಳು


- ಚೆನ್ನೈ ಸೂಪರ್ ಕಿಂಗ್ಸ್ ತಂಡವು 10 ಬಾರಿ ಫೈನಲ್‌ಗೆ ತಲುಪಿದ್ದು ಐದು ಬಾರಿ ಚಾಂಪಿಯನ್ ಆಗಿದೆ
- ಮುಂಬೈ ಇಂಡಿಯನ್ಸ್ ತಂಡವು ಒಟ್ಟು 6 ಬಾರಿ ಫೈನಲ್ ತಲುಪಿ, ಐದು ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.
- ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಪ್ರಸಕ್ತ ಪಂದ್ಯಾವಳಿ ಸೇರಿ ಐದು ಬಾರಿ ಫೈನಲ್ ಪ್ರವೇಶಿಸಿದ್ದು, ಕಳೆದ 18ನೇ ಆವೃತ್ತಿಯಲ್ಲಿ ಮೊದಲ ಬಾರಿಗೆ ಕಪ್‌ಗೆ ಮುತ್ತಿಟ್ಟಿದೆ. ಇದೀಗ ಸತತ ಎರಡನೇ ಬಾರಿ ಚಾಂಪಿಯನ್ ಆಗಲು ತವಕಿಸುತ್ತಿದೆ.
- ಕೊಲ್ಕತ್ತಾ ನೈಟ್ ರೈಡರ್ಸ್ ತಂಡವು 4 ಬಾರಿ ಫೈನಲ್ ಪಂದ್ಯಗಳನ್ನಾಡಿದ್ದು, ಮೂರು ಬಾರಿ ಚಾಂಪಿಯನ್ ಆಗುವ ಮೂಲಕ ಐಪಿಎಲ್ ಇತಿಹಾಸದ ಯಶಸ್ವಿ ತಂಡಗಳಲ್ಲಿ ಒಂದಾಗಿದೆ.
- ಸನ್ ರೈಸರ್ಸ್ ಹೈದರಾಬಾದ್ ತಂಡ 3 ಬಾರಿ ಫೈನಲ್ ಹಂತ ತಲುಪಿ ಒಮ್ಮೆ ಚಾಂಪಿಯನ್ ಪಟ್ಟಕ್ಕೇರಿದೆ


ದುಬಾರಿ ಆಟಗಾರರಿವರು


ರಿಷಭ್ ಪಂತ್
27.00 ಕೋಟಿ
(ಲಖನೌ ಸೂಪರ್ ಜೈಂಟ್ಸ್, 2025)


ಶ್ರೇಯಸ್ ಅಯ್ಯರ್
26.75 ಕೋಟಿ
(ಪಂಜಾಬ್ ಕಿಂಗ್ಸ್, 2025)


ಮಿಚೆಲ್ ಸ್ಟಾರ್ಕ್
24.75 ಕೋಟಿ
(ಕೋಲ್ಕತ್ತಾ ನೈಟ್ ರೈಡರ್ಸ್, 2024)


ವೆಂಕಟೇಶ್ ಅಯ್ಯರ್
23.75 ಕೋಟಿ
(ಕೋಲ್ಕತ್ತಾ ನೈಟ್ ರೈಡರ್ಸ್, 2025)


ಪ್ಯಾಟ್ ಕಮಿನ್ಸ್
20.50 ಕೋಟಿ
(ಸನ್‌ರೈಸರ್ಸ್ ಹೈದರಾಬಾದ್, 2024)

18 ಸೀಸನ್: ವಿಜೇತ ಮತ್ತು ರನ್ನರ್ ಅಪ್ ತಂಡಗಳ ಪಟ್ಟಿ

ವಿನ್ನರ್	ರನ್ನರ್
ರಾಜಸ್ಥಾನ್ ರಾಯಲ್ಸ್	ಚೆನ್ನೈ ಸೂಪರ್ ಕಿಂಗ್ಸ್
ಡೆಕ್ಕನ್ ಚಾರ್ಜರ್ಸ್ ಹೈದರಾಬಾದ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
ಚೆನ್ನೈಸೂಪರ್ ಕಿಂಗ್ಸ್	ಮುಂಬೈ ಇಂಡಿಯನ್ಸ್
ಚೆನ್ನೈಸೂಪರ್ ಕಿಂಗ್ಸ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
ಕೊಲ್ಕತ್ತಾ ನೈಟ್‌ರೈಡರ್ಸ್	ಚೆನ್ನೈಸೂಪರ್ ಕಿಂಗ್ಸ್
ಮುಂಬೈ ಇಂಡಿಯನ್ಸ್	ಚೆನ್ನೈಸೂಪರ್ ಕಿಂಗ್ಸ್
ಕೊಲ್ಕತ್ತಾ ನೈಟ್‌ರೈಡರ್ಸ್	ಪಂಜಾಬ್ ಕಿಂಗ್ಸ್
ಮುಂಬೈ ಇಂಡಿಯನ್ಸ್	ಚೆನ್ನೈಸೂಪರ್ ಕಿಂಗ್ಸ್
ಸನ್‌ರೈಸರ್ಸ್ ಹೈದರಾಬಾದ್	ರಾಯಲ್ ಚಾಲೆಂಜರ್ಸ್ ಬೆಂಗಳೂರು
ಮುಂಬೈ ಇಂಡಿಯನ್ಸ್	ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್
ಚೆನ್ನೈಸೂಪರ್ ಕಿಂಗ್ಸ್	ಸನ್‌ರೈಸರ್ಸ್ ಹೈದರಾಬಾದ್
ಮುಂಬೈ ಇಂಡಿಯನ್ಸ್	ಚೆನ್ನೈಸೂಪರ್ ಕಿಂಗ್ಸ್
ಮುಂಬೈ ಇಂಡಿಯನ್ಸ್	ಡೆಲ್ಲಿ ಕ್ಯಾಪಿಟಲ್ಸ್
ಚೆನ್ನೈಸೂಪರ್ ಕಿಂಗ್ಸ್	ಕೊಲ್ಕತ್ತಾ ನೈಟ್‌ರೈಡರ್ಸ್
ಗುಜರಾತ್ ಟೈಟನ್ಸ್	ರಾಜಸ್ಥಾನ್ ರಾಯಲ್ಸ್
ಚೆನ್ನೈಸೂಪರ್ ಕಿಂಗ್ಸ್	ಗುಜರಾತ್ ಟೈಟನ್ಸ್
ಕೊಲ್ಕತ್ತಾ ನೈಟ್‌ರೈಡರ್ಸ್	ಸನ್‌ರೈಸರ್ಸ್ ಹೈದರಾಬಾದ್
ರಾಯಲ್ ಚಾಲೆಂಜರ್ಸ್ ಬೆಂಗಳೂರು	ಪಂಜಾಬ್ ಕಿಂಗ್ಸ್







ವಿರಾಟ್ ಕೊಹ್ಲಿ ದಾಖಲೆ



ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ತಂಡದ ವಿರಾಟ್ ಕೊಹ್ಲಿ ಅವರು ಯಾರೂ ಮುರಿಯಲಾಗದ ಎರಡು ವಿಶೇಷ ದಾಖಲೆಗಳನ್ನು ಬರೆದಿದ್ದಾರೆ. ಒಂದೇ ಸೀಸನ್‌ನಲ್ಲಿ ಅತಿಹೆಚ್ಚು ರನ್ ಗಳಿಸಿದ ದಾಖಲೆ ಒಂದಾದರೇ, ಟೂರ್ನಿಯಲ್ಲಿ ಅತಿಹೆಚ್ಚು ರನ್ ಗಳಿಸಿದ ದಾಖಲೆಯೂ ಅವರದ್ದಾಗಿದೆ.

2016ರ ಐಪಿಎಲ್ ಸೀಸನ್‌ನಲ್ಲಿ ವಿರಾಟ್ ಕೊಹ್ಲಿ ಅವರು ಬರೋಬ್ಬರಿ 973 ರನ್ ಗಳಿಸಿದ್ದರು. ಒಂದೇ ಋತುವಿನಲ್ಲಿ ಆಟಗಾರನೊಬ್ಬ ದಾಖಲಿಸಿದ ಗರಿಷ್ಠ ಮೊತ್ತವಾಗಿದೆ. ಜೊತೆಗೆ ಈ ಸೀಸನ್‌ನಲ್ಲಿ ಬರೋಬ್ಬರಿ 4 ಶತಕಗಳನ್ನು ಸಿಡಿಸಿ ಎಲ್ಲರ ಹುಬ್ಬೇರುವಂತೆ ಮಾಡಿದ್ದರು. ಇತ್ತ ಗುಜರಾತ್ ಆಟಗಾರ ಶುಭ್‌ಮನ್ ಗಿಲ್ 890 ರನ್ ಕಲೆಹಾಕಿ ನಂತರದ ಸ್ಥಾನದಲ್ಲಿದ್ದಾರೆ.

ಉಳಿದ ದಾಖಲೆಗಳು: ವಿರಾಟ್ ಕೊಹ್ಲಿ ಇದರೊಂದಿಗೆ ಕೆಲವು ದಾಖಲೆಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಸತತ 4 ಸೀಸನ್‌ಗಳಲ್ಲಿ 600+ ರನ್ ಗಳಿಸಿದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದರೊಂದಿಗೆ ಐಪಿಎಲ್‌ನಲ್ಲಿ 9000 ರನ್ ಪೂರೈಸಿದ ಮೊದಲ ಬ್ಯಾಟರ್, 300 ಸಿಕ್ಸರ್ ಸಿಡಿಸಿದ ಆರ್‌ಸಿಬಿ ಬ್ಯಾಟರ್, ಒಂದೇ ಕ್ರೀಡಾಂಗಣದಲ್ಲಿ (ಚಿನ್ನಸ್ವಾಮಿ ಸ್ಟೇಡಿಯಂ) 4000+ ರನ್ ಸಿಡಿಸಿದ ಮೊದಲ ಬ್ಯಾಟರ್, ತಂಡವೊಂದರ ಪರವಾಗಿ ಅತಿಹೆಚ್ಚು ಸೀಸನ್(19 ಸೀಸನ್) ಆಡಿದ ಏಕೈಕ ಆಟಗಾರ ಎಂಬ ಹೆಗ್ಗಳಿಕೆಗೆ ವಿರಾಟ್ ಕೊಹ್ಲಿ ಪಾತ್ರರಾಗಿದ್ದಾರೆ.



18ನೇ ಐಪಿಎಲ್ ಸೀಸನ್‌ನ ವಿಜೇತ ಆರ್‌ಸಿಬಿ ತಂಡದ ಆಟಗಾರರು

ಐಪಿಎಲ್ ಇತಿಹಾಸದ ಅತಿ ದೊಡ್ಡ ರನ್ ಚೇಸ್

262/2– ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ (2024)

247/2– ಸನ್‌ರೈಸರ್ಸ್ ಹೈದರಾಬಾದ್ ಮತ್ತು ಪಂಜಾಬ್ ಕಿಂಗ್ಸ್ (2025)

226/6– ರಾಜಸ್ಥಾನ್ ರಾಯಲ್ಸ್ ಮತ್ತು ಪಂಜಾಬ್ ಕಿಂಗ್ಸ್ (2020)

ಅತೀಕಡಿಮೆ ರನ್ ಡಿಫೆಂಡ್

ಪಂಜಾಬ್ ಕಿಂಗ್ಸ್ 111/10 – ಕೆಕೆಆರ್ 95/10 (2025)

ಚೆನ್ನೈಸೂಪರ್ ಕಿಂಗ್ಸ್ 116/9 – ಪಂಜಾಬ್ 92/8 (2009)

ಸನ್‌ರೈಸರ್ಸ್ ಹೈದರಾಬಾದ್ 118/10 – ಮುಂಬೈ ಇಂಡಿಯನ್ಸ್ 87/10 (2018)

ಐಪಿಎಲ್‌ನಿಂದ ಕಣ್ಮರೆಯಾದ ತಂಡಗಳು

1. ಡೆಕ್ಕನ್ ಚಾರ್ಜರ್ಸ್ (2008–2012)



ಹೈದರಾಬಾದ್ ಮೂಲದ ತಂಡ. 2009ರಲ್ಲಿ ಐಪಿಎಲ್ ಚಾಂಪಿಯನ್ ಆಗಿತ್ತು. ನಂತರ ಈ ತಂಡದ ಸ್ಥಾನವನ್ನು ಸನ್‌ರೈಸರ್ಸ್ ಹೈದರಾಬಾದ್ ಪಡೆದುಕೊಂಡಿತು.

2. ಕೊಚ್ಚಿ ಟಸ್ಕರ್ಸ್ ಕೇರಳ (2011)



ಕೇವಲ ಒಂದು ಋತುವಿನಲ್ಲಿ ಮಾತ್ರ ಆಡಿತು. ಮಾಲೀಕತ್ವ ಮತ್ತು ಹಣಕಾಸು ಸಂಬಂಧಿತ ಸಮಸ್ಯೆಗಳಿಂದ ತಂಡವನ್ನು ಐಪಿಎಲ್‌ನಿಂದ ತೆಗೆದುಹಾಕಲಾಯಿತು.

3. ಪುಣೆ ವಾರಿಯರ್ಸ್ ಇಂಡಿಯಾ (2011–2013)



ಸಹಾರಾ ಇಂಡಿಯಾ ಒಡೆತನದ ತಂಡ. ಸೌರವ್ ಗಂಗೂಲಿ ಮತ್ತು ಯುವ ರಾಜ್ ಸಿಂಗ್ ಮುಂತಾದ ಆಟಗಾರರು ತಂಡದಲ್ಲಿದ್ದರು. ಬಿಸಿಸಿಐ ಜೊತೆಗಿನ ಹಣಕಾಸು ವಿವಾದಗಳಿಂದ ತಂಡ ಮುಚ್ಚಲ್ಪಟ್ಟಿತು.

4. ಗುಜರಾತ್ ಲಯನ್ಸ್ (2016–2017)



ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಜಸ್ಥಾನ್ ರಾಯಲ್ಸ್ ಅಮಾನತು ಗೊಂಡಿದ್ದ ವೇಳೆ ತಾತ್ಕಾಲಿಕ ತಂಡವಾಗಿ ಸೇರಿಸಲಾಯಿತು. ಸುರೇಶ್ ರೈನಾ ನಾಯಕತ್ವದಲ್ಲಿ ಆಡಿತು. 2018ರಲ್ಲಿ ಸಿಎಸ್‌ಕೆ ಮತ್ತು ಆರ್‌ಆರ್ ಮರಳಿದ ನಂತರ ತಂಡ ವಿಸರ್ಜನೆಯಾಯಿತು.

5. ರೈಸಿಂಗ್ ಪುಣೆ ಸೂಪರ್‌ಜೈಂಟ್ (2016–2017)



ತಾತ್ಕಾಲಿಕವಾಗಿ ಸೇರಿಸಲಾದ ಮತ್ತೊಂದು ತಂಡ. 2017ರಲ್ಲಿ ಫೈನಲ್ ತಲುಪಿತ್ತು. ಮುಂಬೈ ಇಂಡಿಯನ್ಸ್ ವಿರುದ್ಧ ಕೇವಲ 1 ರನ್ ಅಂತರದಿಂದ ಫೈನಲ್ ಸೋತಿತ್ತು. 2018ರಲ್ಲಿ ತಂಡವನ್ನು ವಿಸರ್ಜಿಸಲಾಯಿತು.



ವಾರಭವಿಷ್ಯ

31.05.2026 ರಿಂದ 6.06.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ–ವೃಷಭ, ಚಂದ್ರ– ವೃಶ್ಚಿಕ, ಧನುಸ್ಸು, ಮಕರ, ಕುಜ–ಮೇಷ, ಬುಧ, ಮಿಥುನ, ಗುರು–ಕಟಕ, ಶುಕ್ರ–ಮಿಥುನ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ


ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ಸಪ್ತಾಹದ ಆದಿಗೆ ಮನಸ್ಸಿಗೆ ಮುಜುಗರ ಆಗುವಂತಹ ಪ್ರಸಂಗಗಳು ಘಟಿಸಬಹುದು. ಯಾವುದೇ ವಿಚಾರದಲ್ಲಿ ಸತ್ಯವನ್ನು ಅರಿತು ವ್ಯವಹರಿಸಿ, ಅನ್ಯಥಾ ತೊಂದರೆಗೆ ಗುರಿಯಾಗುವಿರಿ. ವ್ಯಯಸ್ಥಾನ ಸ್ಥಿತ ಶನಿದೇವನಿಂದ ಮನಸ್ಸಿಗೆ ಉಂಟಾಗುವ ದುಗುಡತೆ ನಿವಾರಣೆಗೆ ಅನುಭವಿಗಳ ಮಾರ್ಗದರ್ಶನ ಪಡೆಯಿರಿ. ವಾರಾಂತ್ಯಕ್ಕೆ ನಿರೀಕ್ಷಿಸಿದ್ದ ಹಣ ಕೈ ಸೇರುವುದು. ಮನೆ ಮಂದಿಯ ಜೊತೆ ಲಘು ಪ್ರವಾಸಗಳು.

ಶ್ರೀ ಸುಬ್ರಮಣ್ಯ ದರ್ಶನ. ಶುಭ ಸಂಖ್ಯೆ–2

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಶುಭ ಸಮಾಚಾರ ಬರುವುದರೊಂದಿಗೆ ವಾರಕ್ಕೆ ಸ್ವಾಗತ. ಅಪೇಕ್ಷೆ ಪಟ್ಟ ವಿಲಾಸಿ ವಸ್ತುಗಳನ್ನು ಪಡೆದುಕೊಳ್ಳುವಿರಿ. ಹಲವು ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ವಿಷಯಗಳಿಗೆ ಮರು ಚಾಲನೆ ದೊರೆಯುತ್ತದೆ. ವಾಹನ ಮಾರಾಟ ಹಾಗೂ ಹೊಸ ವಾಹನ ಮನೆಗೆ ತರಲು ಗ್ರಹಾನುಕೂಲವಿದೆ. ವಾರ ಮಧ್ಯೆ ಅನಿರೀಕ್ಷಿತ ಖರ್ಚುಗಳು ಎದುರಾಗಬಹುದು. ಸರ್ಕಾರಿ ನೌಕರರಿಗೆ ಲೋಕಾಯುಕ್ತ ಕಚೇರಿಯ ಬಿಸಿ ತಟ್ಟುವುದು.

ಶ್ರೀ ಮಹಾಲಕ್ಷ್ಮಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–8

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

'ಚಿತ್ರದಲ್ಲಿರುವ ಕುಂಬಳಕಾಯಿ ಪಲ್ಯಕ್ಕೆ ಬಾರದು' ಷಷ್ಠದಲ್ಲಿ ಸಂಚರಿಸುವ ಚಂದ್ರ ಮನಸ್ಸಿಗೆ ಕೊಂಚ ಮುದ ನೀಡಬಹುದು. ದೇಹಕ್ಕೆ ಲವಲವಿಕೆಯನ್ನು ನೀಡಬಹುದು. ಆದರೆ ದೈನಂದಿನ ಕೆಲಸಗಳು ನಿಮ್ಮ ಮನಸ್ಸಿಗೆ ವಿರುದ್ಧವಾಗಿ ನಡೆದು ಬೇಸರ. ಬೇಡದ ಖರ್ಚುಗಳು ನಿಮ್ಮ ಮನಃಶಾಂತಿ ಕದಡುವುದು. ಮಕ್ಕಳು ನಿಮ್ಮ ಮಾತನ್ನು ಮೀರಿ ನಡೆಯುವುದರಿಂದ ಮನೆಯಲ್ಲಿ ಅಶಾಂತಿಯ ವಾತಾವರಣ.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–3

ಕಟಕ (ಹೊ,ಹು,ಹೆ,ಡ,ಡಿ,ಡು)

ವಾರದಾರಂಭಕ್ಕೆ ಸಾಮಾಜಿಕ ಗೌರವಕ್ಕೆ ಪಾತ್ರರಾಗುವಿರಿ. ಪತ್ರ ಬರಹಗಾರರಿಗೆ ಬೇಡಿಕೆ ಹೆಚ್ಚಾಗಿ, ಸಂಪಾದನೆ ಹೆಚ್ಚಾಗುವುದು. ಹೊಸ ಯೋಜನೆಗಳನ್ನು ಸ್ವಲ್ಪ ಸಮಯ ಮುಂದೂಡಿ. ನಿಮ್ಮ ರಾಶಿಗೆ ಬಂದ ಶ್ರೀ ಗುರುವಿನಿಂದ ಕೆಲವು ಬೇಡದ ಪ್ರಸಂಗಗಳೂ ಸಣ್ಣ–ಪುಟ್ಟ ಅನಾರೋಗ್ಯಗಳು ಉಂಟಾಗಲಿವೆ. ಮಾತೃಶ್ರೀಯವರ ಆರೋಗ್ಯದಲ್ಲೂ ವ್ಯತ್ಯಯವಾಗಬಹುದು. ಸ್ವಂತ ಸ್ಥಳ ಬಿಡಬೇಕಾದೀತು.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–8

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಶ್ರೀ ಬೃಹಸ್ಪತಿಯು ವ್ಯಯಸ್ಥಾನಕ್ಕೆ ಪಲ್ಲಟವಾಗಿರುವ ಕಾರಣ ದೈನಂದಿನ ಜೀವನದ ಕೆಲವು ಏರಿಳಿತಗಳನ್ನು ಅನುಭವಿಸುವಿರಿ. ಸಾಮಾಜಿಕ ಸ್ಥರಗಳಲ್ಲಿ ತಾಳ್ಮೆಯಿಂದಿರಲು ಪ್ರಯತ್ನಿಸಿ. ಉದ್ಯಮಪತಿಗಳಿಗೆ ನೌಕರ ವರ್ಗದವರ ಅಸಹಕಾರದಿಂದ ನಷ್ಟ ಉಂಟಾಗುವುದು. ಹಿರಿಯರೊಬ್ಬರ ಆಸರೆಯಿಂದ ಸಂಸಾರದ ಸಮಸ್ಯೆಗೆ ಪರಿಹಾರ ದೊರಕುವುದು.

ಶ್ರೀ ಸೂರ್ಯನಾರಾಯಣ ಸ್ತುತಿ. ಶುಭ ಸಂಖ್ಯೆ–5

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ಪರಿಶ್ರಮ ಹಾಗೂ ಏಕಾಗ್ರತೆಯಿಂದ ಜೀವನ ಪಥದಲ್ಲಿ ಯಶಸ್ಸನ್ನು ಗಳಿಸುವಿರಿ. ಕೊಟ್ಟ ಮಾತನ್ನು ಉಳಿಸಿಕೊಳ್ಳುವುದರಿಂದ ಮೆಚ್ಚುಗೆ ಗಳಿಸುವಿರಿ. ಚಂದ್ರ ಸಂಚಾರ ಶುಭವಿದ್ದು ದ್ರವ್ಯಲಾಭ, ನೂತನ ವಸ್ತ್ರಾಭರಣ ಖರೀದಿ, ಹೆಂಗಳೆಯರ ಸ್ನೇಹ ಉಂಟಾಗುವುದು. ತಂಪು ಪಾನೀಯ ಮಾರಾಟಗಾರರಿಗೆ ಹೆಚ್ಚಿನ ಧನ ಲಾಭವಾಗುವುದು. ವಾರದ ಕಡೆಗೆ ಕುಟುಂಬ ಸಮೇತ ಹಿಲ್ ಸ್ಟೇಷನ್ ಕಡೆಗೆ ಭೇಟಿ.

ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ–7

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

'ಶ್ರದ್ಧಾವಾನ್ ಲಭತೇ ಫಲಂ' ಎಂಬ ಆರ್ಯೋಕ್ತಿಯಂತೆ ನೀವು ಮಾಡುವ ಕೆಲಸದಲ್ಲಿ ತನ್ಮಯತೆ ಇರಲಿ, ಶುಭ ಫಲ ನಿಮ್ಮದಾಗಲಿದೆ. ಗುರುಕೃಪೆಯಿಂದ ಮನೆಯಲ್ಲಿ ಸಂತಸದ ವಾತಾವರಣ, ಆಪ್ತ ಬಂಧುಗಳ ಮಿಲನ. ಉತ್ತಮರ ಸಂಗದಿಂದ 'ಹೂವಿನ ಜೊತೆ ನಾರು ದೇವರಿಗೆ ಸೇರಿತು' ಎಂಬಂತೆ ನಡೆಯುವುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಖರ್ಚು–ವೆಚ್ಚಗಳಲ್ಲಿ ಧಾರಾಳಿಗಳೆನಿಸಿ ಪರ್ಸ್ ಖಾಲಿ.

ಶ್ರೀ ಪದ್ಮಾವತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–4

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

'ಮಂಥನ ಮಾಡದೆ ಅಮೃತ ಸಿಗದು', ಬೃಹಸ್ಪತಿಯು ಶುಭ ಸ್ಥಾನಕ್ಕೆ ಪಲ್ಲಟವಾಗಿದೆ. ಮನೆಯಲ್ಲಿ ಮಂಗಳ ಕಾರ್ಯಕ್ಕೆ ನಾಂದಿ ಆಗುವುದು. ಬಹು ನಿರೀಕ್ಷಿತ ಕೆಲಸಗಳನ್ನು ಸಫಲವಾಗಿ ಪೂರ್ಣಗೊಳಿಸಿಕೊಳ್ಳುವಿರಿ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಆಗುವ ಸಾಧ್ಯತೆ ಇರುತದೆ. ಗುರುಜನರ ಭೇಟಿಯಿಂದ ನಿಮ್ಮ ಆತ್ಮವಿಶ್ವಾಸ ವೃದ್ಧಿಯಾಗಲಿದೆ. ಪಂಚಮ ಶನಿಯಿಂದ ಮಾನಸಿಕ ದುಗುಡತೆ, ಆತಂಕ ಬೇಡ.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–6

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ನಿಮ್ಮ ರಾಶ್ಯಾಧಿಪತಿ ಗುರು ಅಷ್ಟಮ ಭಾವಕ್ಕೆ ಪಲ್ಲಟವಾಗಿದೆ. ಯಾವುದೇ ಕೆಲಸವನ್ನು ತೀವ್ರ ವಿಚಾರ ಮಾಡದೆ ಕೈ ಹಾಕದಿರಿ. ಬರೀ ಕಷ್ಟ ಪಡುವುದರಿಂದಲೇ ಜಯವನ್ನು ಸಾಧಿಸಲಾಗುವುದಿಲ್ಲ. ಅದಕ್ಕೆ ದೈವ ಸಹಾಯವೂ ಬೇಕಾಗುತ್ತದೆ. ಹಿರಿಯರ ಮಾತಿಗೆ ಮನ್ನಣೆ ನೀಡಿದರೆ ಕಾರ್ಯಜಯ, ನೆರೆಹೊರೆಯವರ ಸಹಾಯವೂ ದೊರಕುವುದು. ಹೃದಯ ಸಂಬಂಧಿ ತೊಂದರೆ ಉಂಟಾದೀತು.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–1

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ಈ ವಾರ ನಿಮ್ಮ ವಿವೇಚನಾಶಕ್ತಿ ಉತ್ತಮ ಮಟ್ಟದ್ದಾಗಿರುತ್ತದೆ. ನಿಮ್ಮ ಕಾರ್ಯತತ್ಪರತೆ ಉತ್ಕೃಷ್ಟ ಫಲವನ್ನು ನೀಡುವುದು. ಚಂದ್ರ ಸಂಚಾರ ಶುಭವಿದ್ದು ಅಂದುಕೊಂಡ ಕೆಲಸಗಳು ಅಂದುಕೊಂಡಂತೆ ಸಾಗುವುದು. ನೂತನ ವಸ್ತ್ರಾಭರಣ, ಗೃಹ ವಸ್ತುಗಳ ಖರೀದಿಯಿಂದ ಶ್ರೀಮತಿಗೆ ಸಂತೋಷ. ರಾಹು–ಕೇತುಗಳು ಮಾರಕ ಸ್ಥಾನದಲ್ಲಿರುವುದರಿಂದ ಹೊಸ ಶತ್ರುಗಳು ಹುಟ್ಟಿಕೊಳ್ಳುವರು.

ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–9

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಈ ವಾರ ಗುರುವಿನ ಸ್ಥಾನ ಪಲ್ಲಟದಿಂದ ನಿಮ್ಮ ಕೆಲಸ ಕಾರ್ಯಗಳು ಕೊಂಚ ಹಳಿ ತಪ್ಪಬಹುದು. ಹಿರಿಯರ ಹಿತೋಕ್ತಿಯನ್ನು ಕಡೆಗಣಿಸದಿರಿ. ದೈನಂದಿನ ವ್ಯವಹಾರಗಳು ಯಥಾರೀತಿ ನಡೆಯುವುದು. ಚಿಂತೆ ಬೇಡ. ಮನೆಯಲ್ಲಿ ಪ್ರೀತಿ ವಾತ್ಸಲ್ಯದ ವಾತಾವರಣ ಇರುವುದು. ರಾಹು–ಕೇತು ಬಾಧಕ ಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ಕಾರಣ ನಿಮ್ಮ ಆಕ್ರಮಣಕಾರಿ ಬುದ್ಧಿಯಿಂದ ಅನರ್ಥಗಳು ಸಂಭವಿಸುವುದು.

ಶ್ರೀ ಮಾರುತಿ ಉಪಾಸನೆ. ಶುಭ ಸಂಖ್ಯೆ–7

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ನಿಮ್ಮ ರಾಶ್ಯಾಧಿಪತಿ ಗುರುಗ್ರಹದ ವೀಕ್ಷಣೆ ನಿಮ್ಮ ರಾಶಿಯ ಮೇಲೆ ಬಂದಾಗಿದೆ. ಇದೇ ಸಮಯಕ್ಕೆ ಗುರುದರ್ಶನದಿಂದ ಗುರಿ ಕಾಣುತ್ತದೆ. ಸಾಡೇಸಾತಿ ಶನಿಯ ಪ್ರಭಾವ ಕಡಿಮೆಯಾಗಲಿದೆ. ಕಷ್ಟ ಕಾರ್ಪಣ್ಯಗಳು ಕ್ರಮೇಣ ಕಡಿಮೆ ಆಗಲಿವೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆದೀತು. ಮನಸ್ಸು ಪ್ರಸನ್ನವಾಗಿರುವುದು. ವಾಹನ ತಾಳ್ಮೆಯಿಂದ ನಡೆಸಿ, ನೀವೂ ಕ್ಷೇಮವಾಗಿರಿ, ಇತರರೂ ಕ್ಷೇಮವಾಗಿರಲಿ.

ಶ್ರೀ ಮಂತ್ರಾಲಯ ಪ್ರಭುಗಳ ದರ್ಶನ. ಶುಭ ಸಂಖ್ಯೆ–3

ಮೈಸೂರು ಮಿತ್ರ

ಎಐ ಮೂಲಕ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಗೊಂಡ 'ನನ್ನ ಹೆಸರು ಗೌಹರ್ ಜಾನ್' ಪುಸ್ತಕ ಬಿಡುಗಡೆ

ಎಐನಿಂದ ಉದ್ಯೋಗ ಕಡಿತದ ಬದಲು ವಿಭಿನ್ನ ಉದ್ಯೋಗ ಸೃಷ್ಟಿ: ಸಂಸದ ಯದುವೀರ್ ಅಭಿಪ್ರಾಯ

- ಎಐ ಯಾರ ಕೆಲಸವನ್ನು ಕಸಿಯಲ್ಲ
- ಈ ತಂತ್ರಜ್ಞಾನ ಬಳಕೆಯಿಂದ ಸಮಾಜಕ್ಕೆ ಲಾಭ
- ಏಳೆಂಟು ತಿಂಗಳ ಅನುವಾದಕ್ಕೆ ಕೆಲವೇ ದಿನಗಳು ಸಾಕು
- ಮೈಸೂರಿನಲ್ಲಿ 'ಗೌಹರ್ ಜಾನ್' ಪುಸ್ತಕ ಬಿಡುಗಡೆ ಅರ್ಥಪೂರ್ಣ



ಮೈಸೂರಿನ ವಿಜಯನಗರದ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ ಸಭಾಂಗಣದಲ್ಲಿ ಶನಿವಾರ ಎಐ ಮೂಲಕ ಇಂಗ್ಲಿಷ್ ನಿಂದ ಕನ್ನಡಕ್ಕೆ ಅನುವಾದಗೊಂಡ .ವಿಕ್ರಂ ಸಂಪತ್ ಅವರ 'ನನ್ನ ಹೆಸರು ಗೌಹರ್ ಜಾನ್' ಪುಸ್ತಕವನ್ನು ಸಂಸದ ಯದುವೀರ್ ಅವರು ಬಿಡುಗಡೆ ಮಾಡಿದರು.

ಮೈಸೂರು, ಮೇ30(ಬಿಎಲ್‌ಯು)– ಕೃತಕ ಬುದ್ಧಿಮತ್ತೆ ಅಥವಾ ಎಐನಿಂದ ಉದ್ಯೋಗ ಕಡಿತವಾಗುವ ಬದಲು ವಿಭಿನ್ನವಾದ ವಿವಿಧ ರೀತಿಯ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ ಸಭಾಂಗಣದಲ್ಲಿ ಇಂದು ಎಐ ಮೂಲಕ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಗೊಂಡ ವಿಕ್ರಂ ಸಂಪತ್ ಅವರ 'ನನ್ನ ಹೆಸರು ಗೌಹರ್ ಜಾನ್' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಎಐನಿಂದ ಉದ್ಯೋಗ ಕಡಿತವಾಗುತ್ತದೆ ಎಂಬ ಆತಂಕ ಯಾರಿಗೂ ಬೇಡ ಎಂದು ಸಲಹೆ ನೀಡಿದರು.

'ನನ್ನ ಹೆಸರು ಗೌಹರ್ ಜಾನ್' ಪುಸ್ತಕವನ್ನು ಇಂಗ್ಲಿಷ್ ನಿಂದ ಕನ್ನಡಕ್ಕೆ ಎಐನಿಂದ ಅನುವಾದ ಮಾಡಲಾಗಿದೆ. ಎಐ ತಂತ್ರಜ್ಞಾನ ಪರಿಚಯಗೊಂಡಾಗ ಸಹಜವಾಗಿಯೇ ಉದ್ಯೋಗ ಕಡಿತವಾಗುತ್ತದೆ ಎಂದು ಬಹಳಷ್ಟು ಜನರು ಆತಂಕಗೊಂಡಿದ್ದರು. ಅನುವಾದಕರ ಕೆಲಸವನ್ನು ಎಐ ಕಸಿದುಕೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಎಐನಿಂದ ಅನುವಾದ ಮಾಡಲು ಅನುವಾದಕರಿಗೆ ಸಹಾಯವಾಗುತ್ತದೆ. ಇದರಿಂದ ತಮ್ಮ ಕೆಲಸಕ್ಕೆ ಕುತ್ತು ಬರುತ್ತದೆ ಎಂಬ ಭಯ ಅನುವಾದಕರಿಗೆ ಬೇಡ ಎಂದು ಯದುವೀರ್ ಧೈರ್ಯ ತುಂಬಿದರು.

ಎಐ ತಂತ್ರಜ್ಞಾನದಿಂದ ಯಾವುದೇ ರೀತಿಯ ಉದ್ಯೋಗ ಕಡಿತವಾಗುವುದಿಲ್ಲ. ಬದಲಿಗೆ ವಿಭಿನ್ನ ರೀತಿಯ ವಿವಿಧ ಉದ್ಯೋಗಗಳು ಸೃಷ್ಟಿಯಾಗುತ್ತವೆ. ತಂತ್ರಜ್ಞಾನದಲ್ಲಿ ಬೆಳವಣಿಗೆ ಆದಂತೆ ಅದರ ನೀತಿ ನಿಯಮಗಳು ಕೂಡ ಬದಲಾವಣೆಯಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಸಮಾಜಕ್ಕೆ ಸಾಕಷ್ಟು ಲಾಭ: ಆಧುನಿಕ ತಂತ್ರಜ್ಞಾನದಿಂದ ಸಮಾಜಕ್ಕೆ ಲಾಭವಾಗಲಿದ್ದು, ಎಐ ತಂತ್ರಜ್ಞಾನವನ್ನು ಜನ ಸಾಮಾನ್ಯರು ಬಳಸಿಕೊಳ್ಳಬೇಕು. ಎಐನಿಂದ ಉದ್ಯೋಗ ಕಡಿತವಾಗುತ್ತದೆ ಎಂಬ ಆತಂಕ ಬಿಟ್ಟು ಅದರ ಅಳವಡಿಕೆಗೆ ಪ್ರೇರಣೆಗೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಅನುವಾದಗೊಳ್ಳದ ಬಹಳಷ್ಟು ಪುಸ್ತಕಗಳಿವೆ. ಹಳೆಯದಾದ ಆ ಪುಸ್ತಕಗಳು ಯಾವುದೇ ಕಾರಣಕ್ಕೂ ಹಾಳಾಗಬಾರದು. ಈ ಹಿನ್ನೆಲೆಯಲ್ಲಿ ಅಲ್ಲಿನ ಪುಸ್ತಕಗಳನ್ನು ಎಐ ಮೂಲಕ ಅನುವಾದ ಮಾಡಬೇಕು ಎಂದು ಯದುವೀರ್ ಸಲಹೆ ನೀಡಿದರು.

ಸೃಜನಾತ್ಮಕ ಸಂಗೀತ ಕಲೆಯ ಪ್ರವೀಣೆಯಾದ ಗೌಹರ್ ಜಾನ್ ಅವರಿಗೆ ಮೈಸೂರು ರಾಜ ಸಂಸ್ಥಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಆಶ್ರಯ ನೀಡಿದ್ದರು. ಇದರಿಂದ ಮೈಸೂರಿನಲ್ಲಿ ಗೌಹರ್ ಜಾನ್ ಅವರ ಪುಸ್ತಕದ ಬಿಡುಗಡೆ ಆಗಿರುವುದು ಅರ್ಥಪೂರ್ಣ ಎನ್ನಬಹುದು ಎಂದು ಹೇಳಿದರು.

ಗೌಹರ್ ಜಾನ್ ಅವರು ಚಿಕ್ಕ ವಯಸ್ಸಿನಿಂದ ಬಹಳಷ್ಟು ಸಂಕಷ್ಟ ಎದುರಿಸಿದ್ದರು. ಆದರೂ ಎದುರಾದ ಸಂಕಷ್ಟಗಳನ್ನು ಸಮರ್ಥವಾಗಿ ಎದುರಿಸಿ ಕಲೆಯಲ್ಲಿ ಸಾಧನೆ ಮಾಡಿದರು. ಈ ಮೂಲಕ ಕಲೆಗಾಗಿ ತಮ್ಮ ಜೀವನವನ್ನೆ ಅರ್ಪಣೆ ಮಾಡಿಕೊಂಡಿದ್ದರು. ಇಂತಹ ಅಪ್ರತಿಮ ಕಲಾ ಪ್ರೌಢಿಮೆ ಹೊಂದಿದ್ದ ಗೌಹರ್ ಜಾನ್ ಅವರ ಕುರಿತ ಪುಸ್ತಕ ಬಿಡುಗಡೆ ಸಂತಸದ ವಿಚಾರ ಎಂದು ಹೇಳಿದರು.

ವಿಜಯನಗರದ ಸಾಮ್ರಾಜ್ಯ ಸೇರಿದಂತೆ ಹಲವು ರಾಜಮನೆತನಗಳ ಬಗ್ಗೆ ಬ್ರಿಟಿಷ್ ಲೇಖಕರು ಪುಸ್ತಕ ಬರೆದಿದ್ದಾರೆ. ಇದರಿಂದ ಭಾರತದ ಇತಿಹಾಸದ ಬಗ್ಗೆ ಸ್ಪಷ್ಟತೆ ಇರುತ್ತಿರಲಿಲ್ಲ. ಸ್ವಾತಂತ್ರ್ಯ ನಂತರವೂ ಕೂಡ ಬೇರೆಯವರು ಭಾರತದ ಇತಿಹಾಸ ಬರೆಯುತ್ತಿದ್ದಾರೆ. ಇದರಿಂದ ಭಾರತಕ್ಕೆ ಆಡಳಿತಾತ್ಮಕವಾಗಿ ಸ್ವಾತಂತ್ರ್ಯ ದೊರೆತಿರಬಹುದೇ ಹೊರತು ಆಲೋಚನೆ ಹಾಗೂ ಚಿಂತನೆಯಲ್ಲಿ ಅಲ್ಲ. ಇಂತಹ ಸಂದರ್ಭದಲ್ಲಿ ಭಾರತೀಯ ಇತಿಹಾಸದ ಬಗ್ಗೆ ಭಾರತೀಯರೇ ಪುಸ್ತಕ ಬರೆಯುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಭಾರತದ ಇತಿಹಾಸದ ಬಗ್ಗೆ ಭಾರತೀಯರೇ ಪುಸ್ತಕ ಬರೆದರೆ ಅದರಲ್ಲಿ ಪೂರ್ವಗ್ರಹ ಪೀಡಿತ ವಿಚಾರಗಳಿರುವುದಿಲ್ಲ. ಆದ ಕಾರಣ ಭಾರತದ ಇತಿಹಾಸದ ವಿಚಾರಗಳ ಬಗ್ಗೆ ಭಾರತೀಯರೇ ಬೆಳಕು ಚೆಲ್ಲಬೇಕು ಎಂದು ಯದುವೀರ್ ಸಲಹೆ ನೀಡಿದರು.

ಗೌಹರ್ ಜಾನ್ ಪುಸ್ತಕದ ಅನುವಾದಕಿ ಗೌರಿ ಎಸ್. ಜೋಶಿ ಅವರು ಮಾತನಾಡಿ, ಈ ಮೊದಲು ಪುಸ್ತಕಗಳ ಅನುವಾದಕ್ಕೆ ಏಳೆಂಟು ತಿಂಗಳ ಅವಧಿ ಬೇಕಿತ್ತು. ಆದರೆ ಇಂದು ಎಐ ಮೂಲಕ ಕೆಲವೇ ದಿನಗಳಲ್ಲಿ ಅನುವಾದ ಮಾಡಲಾಗಿದೆ. ಅನುವಾದ ಮಾಡುವ ವೇಳೆ ಪದ ಪ್ರಯೋಗ ಸೇರಿದಂತೆ ಬಹಳಷ್ಟು ಸೂಕ್ಷ್ಮ ವಿಚಾರಗಳನ್ನು ಗಮನಿಸಲಾಗಿದೆ. ಈ ಮೂಲಕ ಪುಸ್ತಕದ ಮೂಲ ಅಂಶಗಳಿಗೆ ಯಾವುದೇ ರೀತಿಯಲ್ಲೂ ಧಕ್ಕೆ ಆಗಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪುಸ್ತಕದ ಮೂಲ ಬರಹಗಾರ ಡಾ.ವಿಕ್ರಂ ಸಂಪತ್, ಸಿಐಐಎಲ್ ಸಂಶೋಧಕ ಡಾ.ನಾರಾಯಣ ಕುಮಾರ್ ಚೌದರಿ, ನಿವೃತ್ತ ಪ್ರಾಧ್ಯಾಪಕ ಡಾ.ಜಿ.ಎಲ್.ಶೇಖರ್ ಹಾಗೂ ಸುಬ್ರಹ್ಮಣ್ಯ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕೆಡಿ (ಕ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಬೆಲ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕಾಟಾಳನ್ (ಕ)	4 ಪ್ರದರ್ಶನಗಳು
ಲಿಡೋ	
ಆತುಡು(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ಬಿಜೆಪಿ ಮೈಸೂರು ನಗರ ಸಹ ವಕ್ತಾರರಾಗಿ ಎಂ.ಜೆ.ಕಿರಣ್ ಗೌಡ ನೇಮಕ



ಮೈಸೂರು, ಮೇ 30– ಬಿಜೆಪಿ ಮೈಸೂರು ನಗರ ಸಹ ವಕ್ತಾರರಾಗಿ ಎಂ.ಜೆ.ಕಿರಣ್‌ಗೌಡ ನೇಮಕಗೊಂಡಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ಈ ಹಿಂದೆ ಬಿಜೆಪಿ ಯುವಮೋರ್ಚಾ ಅಧ್ಯಕ್ಷರಾಗಿ, ಚಾಮರಾಜ ಬಿಜೆಪಿ ಅಧ್ಯಕ್ಷರಾಗಿ, ಬಿಜೆಪಿ ನಗರ ಕಾರ್ಯದರ್ಶಿಯಾಗಿ, ವಾರ್ಡ್ ಹಾಗೂ ಬೂತ್ ಮಟ್ಟದಲ್ಲಿ ಸಕ್ರಿಯವಾಗಿ ಪಕ್ಷ ಸಂಘಟನೆಗೆ ಶ್ರಮಿಸಿರುವ ಕಿರಣ್ ಗೌಡ ಅವರನ್ನು ನಗರ ಸಹ ವಕ್ತಾರರನ್ನಾಗಿ ನೇಮಿಸಿ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಆದೇಶಿಸಿದ್ದಾರೆ.



ನೂತನ ಶಾಲೆ ಉದ್ಘಾಟನೆ

ಮೈಸೂರಿನ ಆರ್‌ಟಿ ನಗರದಲ್ಲಿ ನೂತನವಾಗಿ ಪ್ರಾರಂಭವಾದ ಬಿರ್ಲಾ ಓಪನ್ ಮೈಂಡ್ಸ್ ಇಂಟರ್‌ನ್ಯಾಷನಲ್ ಶಾಲೆಯನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಈ ವೇಳೆ ನಟ–ನಿರ್ದೇಶಕ ರಮೇಶ್ ಅರವಿಂದ್, ಎಸ್ಪಿ ಮಲ್ಲಿಕಾರ್ಜುನ್ ಬಾಲದಂಡಿ, ಜೂನಿಯರ್ ಟೋಸ್ ಪ್ರಿಸ್ಕೂಲ್‌ನ ಮಾಲೀಕರಾದ ಶ್ರೀಮತಿ ಡಿ.ಅನ್ನಪೂರ್ಣ, ಬಿರ್ಲಾ ಓಪನ್ ಮೈಂಡ್ಸ್ ಇಂಟರ್‌ನ್ಯಾಷನಲ್ ಶಾಲೆಯ ಮುಖ್ಯಸ್ಥರಾದ ಶ್ರೀಮತಿ ಶಿಲ್ಪಾ ಉಪಸ್ಥಿತರಿದ್ದರು.

ಪ್ರಿಯಾಂಕ್ ಖರ್ಗೆಯವರಿಗೆ ಉಪ ಮುಖ್ಯಮಂತ್ರಿ ಸ್ಥಾನದೊಂದಿಗೆ ಪ್ರಮುಖ ಖಾತೆಗೆ ಆಗ್ರಹ



ಕೆಪಿಸಿಸಿ ಸಂಯೋಜಕ ವಿಜಯಕುಮಾರ್‌ಬಂಡಿಪಾಳ್ಯ ಸುದ್ದಿಗೋಷ್ಠಿ ನಡೆಸಿ ಮಾಜಿ ಸಚಿವ ಪ್ರಿಯಾಂಕ ಖರ್ಗೆ ಅವರನ್ನು ಡಿಸಿಎಂ ಮಾಡುವಂತೆ ಒತ್ತಾಯಿಸಿದರು.

ಮೈಸೂರು,ಮೇ 30(ಎಂಟಿವೈ)– ಮಾಜಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಉಪ ಮುಖ್ಯ ಮಂತ್ರಿ ಸ್ಥಾನದೊಂದಿಗೆ ಪ್ರಮುಖ ಖಾತೆ ನೀಡಬೇಕೆಂದು ಕೆಪಿಸಿಸಿ ಸಂಯೋಜಕ ವಿಜಯ ಕುಮಾರ್ ಬಂಡಿಪಾಳ್ಯ ಒತ್ತಾಯಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ರಾಜಕಾರಣದಲ್ಲಿ ಪ್ರಿಯಾಂಕ್ ಖರ್ಗೆ ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯದ ಪರವಾದ ಕಳಕಳಿ, ದಲಿತರು, ಶೋಷಿತರು, ಅಲ್ಪಸಂಖ್ಯಾತರು, ಮಹಿಳೆಯರು, ಮಕ್ಕಳ ಕಲ್ಯಾಣಕ್ಕೆ ಶ್ರಮಿಸಿದ್ದಾರೆ. ಸಮಾಜ ಕಲ್ಯಾಣ, ಪ್ರವಾಸೋದ್ಯಮ, ಐಟಿ–ಬಿಟಿ, ಗ್ರಾಮೀಣಾಭಿವೃದ್ಧಿ ಇಲಾಖೆಗಳ ಸಚಿವರಾಗಿ ದೇಶವೇ ಮೆಚ್ಚುವಂತೆ ಕೆಲಸ ಮಾಡಿದ್ದಾರೆ. ಇವರ ಜನಪರವಾದ ಸೇವೆಯನ್ನು ನೂತನ ಸರ್ಕಾರದಲ್ಲಿ ಮತ್ತಷ್ಟು ಜವಾಬ್ದಾರಿ ನೀಡುವುದರೊಂದಿಗೆ ಬಳಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಸಿದ್ದರಾಮಯ್ಯ ಅವರಂತೆಯೇ ಆರ್‌ಎಸ್‌ಎಸ್ ಮತ್ತು ಕೋಮುವಾದದ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಸುಳ್ಳು ಆರೋಪ ಮಾಡುವ ಬಿಜೆಪಿ, ಜೆಡಿಎಸ್ ನಾಯಕರಿಗೆ ದಾಖಲೆ ಸಹಿತ ಉತ್ತರಕೊಟ್ಟು ವಿರೋಧಿಗಳಿಗೆ ಸಿಂಹಸ್ವಪ್ನವಾಗಿದ್ದಾರೆ. ನೂತನ ಸರ್ಕಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಪ್ರಿಯಾಂಕ್ ಖರ್ಗೆ ಅವರ ಸೇವೆ, ಕಾರ್ಯಕ್ಷಮತೆಯನ್ನು ಪರಿಗಣಿಸಿ ಉತ್ತಮ ಅವಕಾಶ ಕೊಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಐಎನ್‌ಟಿಸಿಯು ರಾಜ್ಯ ಉಪಾಧ್ಯಕ್ಷ ನಾಗರಾಜು, ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಸುರೇಶ್ ಕೋಟೆ, ದಸಂಸ ಜಿಲ್ಲಾ ಸಂಚಾಲಕ ಸ್ವಾಮಿ ಬಿಳಿಕೆರೆ, ಕೆಪಿಸಿಸಿ ಸಂಯೋಜಕ ಸಂತೋಷ್ ಚಿಕ್ಕನಹಳ್ಳಿ, ಐಎನ್‌ಟಿಸಿಯು ಪ್ರಧಾನ ಕಾರ್ಯದರ್ಶಿ ಪುಟ್ಟರಾಜ್ ಯಾದವ್, ಜಿಲ್ಲಾಧ್ಯಕ್ಷ ಸಿಂಧುವಳ್ಳಿ ಮಧು, ಕ್ಷೇಮಾಭಿವೃದ್ಧಿ ಸಮಿತಿ ಅಧ್ಯಕ್ಷ ಚಲುವರಾಜು ಇಲವಾಲ, ಗ್ರಾಪಂ ಮಾಜಿ ಉಪಾಧ್ಯಕ್ಷ ಕುಮಾರ್ ಇದ್ದರು.

ತನ್ವೀರ್ ಸೇಠ್‌ಗೆ ಡಿಸಿಎಂ ಸ್ಥಾನ ದೊರಕಲಿ; ಅಭಿಮಾನಿಗಳಿಂದ ದರ್ಗಾದಲ್ಲಿ ಪ್ರಾರ್ಥನೆ



ನೂತನ ಸಂಪುಟದಲ್ಲಿ ಉಪಮುಖ್ಯಮಂತ್ರಿ ಸ್ಥಾನ ದೊರಕಲಿ ಎಂದು ತನ್ವೀರ್ ಸೇಠ್ ಅಭಿಮಾನಿಗಳು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಮೈಸೂರು, ಮೇ30(ಜಿಎ)–ಮಾಜಿ ಸಚಿವ, ಶಾಸಕರಾದ ತನ್ವೀರ್ ಸೇಠ್‌ಗೆ ನೂತನ ಸಂಪುಟದಲ್ಲಿ ಉಪಮುಖ್ಯಮಂತ್ರಿ ಸ್ಥಾನ ದೊರಕಲಿ ಎಂದು ತನ್ವೀರ್ ಸೇಠ್ ಅಭಿಮಾನಿಗಳು ದೇವರ ಮೊರೆ ಹೋಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದ್ದಾರೆ.

ಮೈಸೂರು ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಇಕ್ಬಾಲ್ ನೇತೃತ್ವದಲ್ಲಿ ಅನೇಕ ಅಭಿಮಾನಿಗಳು ಮೈಸೂರು–ಬೆಂಗಳೂರು ರಸ್ತೆಯ ಟಿಪ್ಪು ಸರ್ಕಲ್ ಬಳಿ ಇರುವ ಬಡಾಮಕ್ಕಾನ್ ದರ್ಗಾದಲ್ಲಿ ತನ್ವೀರ್ ಸೇಠ್‌ಗೆ ನೂತನ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಸ್ಥಾನ ದೊರೆಯಲಿ ಎಂದು ತನ್ವೀರ್ ಸೇಠ್ ಭಾವಚಿತ್ರ ಹಿಡಿದು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಈ ವೇಳೆ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್ ಮಾತನಾಡಿ, ತನ್ವೀರ್ ಸೇಠ್ ಅವರು ನರಸಿಂಹರಾಜ ಕ್ಷೇತ್ರದಿಂದ 6 ಬಾರಿ ಶಾಸಕರಾಗಿ ಗೆದ್ದು ಯಾವುದೇ ಕಪ್ಪು ಚುಕ್ಕೆ ಇಲ್ಲದೇ ಯಶಸ್ವಿಯಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಹಾಗೇ ಅವರಿಗೆ ಪಕ್ಷ ನೀಡಿರುವ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಿದ್ದಾರೆ. ಮೈಸೂರು ಭಾಗದಲ್ಲಿ ಅಲ್ಪಸಂಖ್ಯಾತರ ಪರವಾಗಿ ತನ್ವೀರ್ ಸೇಠ್ ಒಬ್ಬರೇ ಇರುವುದರಿಂದ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿದರೆ ಎಲ್ಲರಿಗೂ ಸಂತಸವಾಗಲಿದೆ ಎಂದರು.

ದಾವಣಗೆರೆಯಲ್ಲಿ ನಡೆದ ಉಪಚುನಾವಣೆಯಲ್ಲಿ ಪಕ್ಷದಿಂದ ಸಮುದಾಯದ ವ್ಯಕ್ತಿಗೆ ಟಿಕೆಟ್ ನೀಡಲಿಲ್ಲ. ಅದರ ಬಗ್ಗೆ ಅಲ್ಪಸಂಖ್ಯಾತ ಸಮುದಾಯಕ್ಕೆ ಬೇಸರವಿದೆ. ಈ ಹಿನ್ನೆಲೆಯಲ್ಲಿ ಈ ಬಾರಿಯ ನೂತನ ಸಂಪುಟ ವಿಸ್ತರಣೆಯಲ್ಲಿ ತನ್ವೀರ್ ಸೇಠ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿದರೆ, ಈ ಬೇಸರ ಶಮನವಾಗಲಿದೆ. ಅದು ಕಾಂಗ್ರೆಸ್ ಪಕ್ಷಕ್ಕೆ ವರದಾನವಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಮಿಕ ವಿಭಾಗದ ಅಧ್ಯಕ್ಷ ಮೊಹಮ್ಮದ್ ಶಿಫ್ಟನ್ ಅಹಮ್ಮದ್, ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಜಾಬೀದ್, ಡಿಸಿಸಿ ಪ್ರಧಾನ ಕಾರ್ಯದರ್ಶಿ ರೆಹಾನ್ ಬೇಗ್, ಕೆಪಿಸಿಸಿ ಸಂಚಾಲಕ ಶೌಕತ್ ಅಲಿಖಾನ್, ಉಪಾಧ್ಯಕ್ಷ ಶೈನ್‌ಶಾ ಅಹಮ್ಮದ್, ಅಫ್ರೋಜ್ ಖಾನ್, ಇಲಿಯಾಸ್ ಸೇರಿದಂತೆ ಕಾರ್ಯಕರ್ತರು, ಅಭಿಮಾನಿಗಳು ಪಾಲ್ಗೊಂಡಿದ್ದರು.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 30– ಮೈಸೂರಿನ ರಾಜೀವ್ ನಗರ 1ನೇ ಹಂತದಲ್ಲಿರುವ ಬಾಬು ಜಗ ಜೀವನರಾಮ್ ಬಾಲಕರ ಅನುದಾನಿತ ವಿದ್ಯಾರ್ಥಿ ನಿಲಯದಿಂದ 2026–27ನೇ ಸಾಲಿನ ಪ್ರವೇಶಾತಿಗೆ 5 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ದೂ: 0821–2451910, 8217366957, 8722691411 ಸಂಪರ್ಕಿಸಿ.

ಕೈದಿಗೆ ಸಿಮ್ ಕಾರ್ಡ್ ಕೊಡಲು ಯತ್ನಿಸಿದ ತಾಯಿ, ಸಂಬಂಧಿ ಜೈಲಿಗೆ

ಮೈಸೂರು, ಮೇ30(ಜಿಎ)–ಜೈಲಿನ ವಿಚಾರಣಾಧೀನ ಕೈದಿಗೆ ಬಟ್ಟೆಕೊಡುವ ನೆಪದಲ್ಲಿ ಸಿಮ್ ಕಾರ್ಡ್ ಕೊಡಲು ಮುಂದಾದ ಆತನ ತಾಯಿ ಹಾಗೂ ಸಂಬಂಧಿ ಜೈಲು ಸೇರಿದ್ದಾರೆ.

ನಸ್ರೀನ್ ತಾಜ್ ಮತ್ತು ಆಕೆಯ ಸಂಬಂಧಿ ಫಾರ್ಹಿನ್ ತಾಜ್ ಎಂಬುವರೇ ಜೈಲು ಸೇರಿದವರಾಗಿದ್ದಾರೆ.

ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಮೊಹಮ್ಮದ್ ರಿಹಾನ್ ಕೊಲೆ ಆರೋಪದಡಿ ವಿಚಾರಣಾಧೀನ ಕೈದಿಯಾಗಿದ್ದು, ಆತನ ಸಂದರ್ಶನಕ್ಕೆ ಮೇ 27ರಂದು ಸಂಜೆ 7.40ಕ್ಕೆ ಆತನ ತಾಯಿ ನಸ್ರೀನ್ ತಾಜ್ ಮತ್ತು ಆತನ ಸಂಬಂಧಿ ಫಾರ್ಹಿನ್ ತಾಜ್ ಬಟ್ಟೆ ಬ್ಯಾಗ್‌ಗಳನ್ನು ಹಿಡಿದು ಮಗನ ಭೇಟಿಗಾಗಿ ಕೇಂದ್ರ ಕಾರಾಗೃಹಕ್ಕೆ ಆಗಮಿಸಿದ್ದಾರೆ.

ಈ ವೇಳೆ ತಪಾಸಣಾ ಕೊಠಡಿಯಲ್ಲಿದ್ದ ಮಹಿಳಾ ಪೊಲೀಸ್ ಸಿಬ್ಬಂದಿಗಳಾದ ಜ್ಯೋತಿ ಮತ್ತು ರೂಪ, ಬ್ಯಾಗ್‌ಗಳನ್ನು ಸ್ಕ್ಯಾನರ್‌ನಲ್ಲಿ ತಪಾಸಣೆ ನಡಸಿದಾಗ ಅವರಿಗೆ ಬಟ್ಟೆಯಲ್ಲಿ ಸಿಮ್ ಕಾರ್ಡ್ ಮಾದರಿಯ ಅನುಮಾನಾಸ್ಪದ ವಸ್ತು ಕಂಡು ಬಂದಿದೆ. ತಕ್ಷಣ ಬಟ್ಟೆಗಳನ್ನು ತಪಾಸಣೆ ಮಾಡಲು ಹೆಡ್ ಕಾನ್‌ಸ್ಟೇಬಲ್ ಪ್ರತಾಪ್ ಅವರಿಗೆ ಸೂಚಿಸಿದ್ದಾರೆ.

ಪ್ರತಾಪ್ ಬಟ್ಟೆಗಳನ್ನು ಪರಿಶೀಲಿಸಿದಾಗ ತಿಳಿ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್‌ನ ಜೇಬಿನಲ್ಲಿ 2 ಏರ್‌ಟೆಲ್ ಸಿಮ್ ಕಾರ್ಡ್‌ಗಳು ಪತ್ತೆಯಾಗಿವೆ.

ಕಾರಾಗೃಹದ ತಿದ್ದುಪಡಿ ಅಧಿನಿಯಮದ ಪ್ರಕಾರ ಈ ವಸ್ತುಗಳು ಕಾರಾಗೃಹದಲ್ಲಿ ನಿಷೇಧಿತ ವಸ್ತುಗಳಾಗಿರುವುದರಿಂದ ವಿಚಾರಣಾಧೀನ ಕೈದಿ ಮೊಹಮ್ಮದ್ ರಿಹಾನ್, ತಾಯಿ ನಸ್ರೀನ್ ತಾಜ್, ಸಂಬಂಧಿ ಫಾರ್ಹಿನ್ ತಾಜ್ ವಿರುದ್ಧ ಮಂಡಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ದೂರು ಪಡೆದ ಮಂಡಿ ಪೊಲೀಸರು ತಾಯಿ ಹಾಗೂ ಅವರ ಸಂಬಂಧಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಈಗ ಇಬ್ಬರು ಜೈಲು ಸೇರಿದ್ದಾರೆ.

ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ; ಹಿರಿಯ ಪತ್ರಕರ್ತರಿಗೆ ಸನ್ಮಾನ

ಪರಿಶ್ರಮದಲ್ಲಿ ಉತ್ತಮ ಭವಿಷ್ಯ ಅಡಗಿದೆ: ಶಾಸಕ ಜಿ.ಡಿ.ಹರೀಶ್‌ಗೌಡ ಕಿವಿಮಾತು





ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪತ್ರಕರ್ತರ ಮಕ್ಕಳಿಗೆ ಪುರಸ್ಕಾರ ವಿತರಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪತ್ರಕರ್ತರ ಮಕ್ಕಳಿಗೆ ಪುರಸ್ಕಾರ ನೀಡಿರುವುದನ್ನು ಕಾಣಬಹುದು

ಮೈಸೂರು, ಮೇ 30(ಎಂಟಿವೈ)– ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವುದರೊಂದಿಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಮುಂದಾಗಬೇಕು ಎಂದು ಶಾಸಕ ಜಿ.ಡಿ. ಹರೀಶ್ ಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಹಿರಿಯ ಪತ್ರಕರ್ತರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪಠ್ಯಕ್ರಮದ ಅಭ್ಯಾಸದೊಂದಿಗೆ ಲೋಕಜ್ಞಾನ ಗಳಿಸಬೇಕು. ಸಾಮಾನ್ಯ ಜ್ಞಾನ ಸಂಪಾದಿಸದಿದ್ದರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳುವುದು ಕಷ್ಟ, ಈ ಹಿನ್ನೆಲೆಯಲ್ಲಿ ಶಿಕ್ಷಣ ಪಡೆಯುವುದರೊಂದಿಗೆ ಜ್ಞಾನ ಸಂಪಾದಿಸಿಕೊಳ್ಳಬೇಕು ಎಂದರು.

ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ವಿಶೇಷ. ಇಂತಹ ಸಂಪ್ರದಾಯ ಮುಂದುವರೆಯಬೇಕು. ಇಂದಿನ ಸಮಾಜ ಸ್ಪರ್ಧಾತ್ಮಕ ಸಮಾಜವಾಗಿದೆ. ವಿದ್ಯಾರ್ಥಿಗಳು ತಮ್ಮ ಮುಂದಿನ ಜೀವನ ರೂಪಿಸಿಕೊಳ್ಳಲು ಪರಿಶ್ರಮ ಪಡಬೇಕು. ಅದರಲ್ಲಿ ನಿಮ್ಮ ಭವಿಷ್ಯ ಅಡಗಿದೆ. ಪೋಷಕರು, ಶಿಕ್ಷಕರು ಮಾರ್ಗದರ್ಶನ ನೀಡಬಹುದು. ಆದರೆ, ನಿಮ್ಮ ಭವಿಷ್ಯವನ್ನು ನೀವೇ ಕಟ್ಟಿಕೊಳ್ಳಬೇಕು. ನಿಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಮುಂದುವರೆಯಿರಿ. ನೀವು ವಿದ್ಯಾವಂತರಾಗದಿದ್ದರೆ, ನಿಮ್ಮಲ್ಲಿ ಸಾಮಾನ್ಯ ಜ್ಞಾನ ಇಲ್ಲವಾದರೆ ಈ ಸಮಾಜದಲ್ಲಿ ಯಶಸ್ವಿಯಾಗಿ ಬದುಕಲು ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳು ಕಲಿಯಲು ಯಾವುದೇ ಕ್ಷೇತ್ರ ಅಥವಾ ರಂಗ ಆಯ್ಕೆ ಮಾಡಿಕೊಂಡರೂ ಅದರಲ್ಲಿ ಶ್ರದ್ಧೆ, ಪ್ರೀತಿ ಇರಲಿ. ಪತ್ರಕರ್ತರು ಸುದ್ದಿಮನೆಗೆ ಸೀಮಿತವಾಗದೇ ಮಕ್ಕಳ ಭವಿಷ್ಯದ ಕಡೆಗೂ ಗಮನ ನೀಡಬೇಕು. ಮಕ್ಕಳ ಓದು, ಹವ್ಯಾಸದ ಕಡೆ ಗಮನ ನೀಡಿ ಪ್ರೋತ್ಸಾಹ ನೀಡುವ ಮೂಲಕ ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಸಾನ್ನಿಧ್ಯವಹಿಸಿದ್ದ ಆದಿ ಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಮಾತನಾಡಿ, ಪತ್ರಕರ್ತರ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ. ಪ್ರತಿದಿನ ಬೆಳಗ್ಗೆಯಾದೊಡನೆ ಪತ್ರಕರ್ತರನ್ನು ನೆನೆಯುತ್ತೇವೆ. ಪತ್ರಿಕೆಗಳನ್ನು ಓದುವ ಮೂಲಕ ಪ್ರಚಲಿತ ವಿದ್ಯಮಾನಗಳನ್ನು ತಿಳಿದುಕೊಳ್ಳುತ್ತೇವೆ. ಪತ್ರಿಕೆಗಳು ಉತ್ತಮವಾಗಿ ಮೂಡಿ ಬರಲು ಪತ್ರಕರ್ತರು ಎಲ್ಲಾ ಕಡೆ ಹೋಗಿ ಸುದ್ದಿ ಸಂಗ್ರಹ ಮಾಡಲು ಶ್ರಮಿಸುತ್ತಾರೆ. ಸಮಾಜದ ಅಂಕು ಡೊಂಕು ತಿದ್ದುವ ಕೆಲಸವನ್ನು ಪತ್ರಕರ್ತರು ಮಾಡುತ್ತಾರೆ. ಕಾರ್ಯನಿಷ್ಠೆ, ಕಾರ್ಯ ತತ್ಪರತೆಯಿಂದಾಗಿ ತಮ್ಮ ಸೇವೆಯನ್ನು ಸಮಾಜ ಸೇವೆಗೆ ಮುಡುಪಾಗಿಟ್ಟಿದ್ದಾರೆ. ಮೈಸೂರು ರಾಜರು ಆಳಿದ ನಾಡಾಗಿದ್ದು, ಇಲ್ಲಿ ಸೌಜನ್ಯದಿಂದ ವರ್ತಿಸಬೇಕಾಗುತ್ತದೆ. ಪರಸ್ಪರ ಸಹಕಾರ ಜೀವನ ನಡೆಸುವುದು ಬಹುಮುಖ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಸನ್ಮಾನ: ಇದೇ ವೇಳೆ ಪತ್ರಿಕಾ ವೃತ್ತಿಯಿಂದ ನಿವೃತ್ತರಾದ ಹಾಗೂ ಮೈಸೂರಿಂದ ವರ್ಗಾವಣೆಗೊಂಡ ಹಿರಿಯ ಪತ್ರಕರ್ತರಾದ ಎ.ಸಿ.ಪ್ರಭಾಕರ್, ಆರ್.ಕೃಷ್ಣಕುಮಾರ್, ಕೆ ನರಸಿಂಹ ಮೂರ್ತಿ, ಕುಂದೂರು ಉಮೇಶ ಭಟ್ಟ, ಎಚ್.ಕೆ. ನಾಗೇಶ್, ಕೆ.ಟಿ. ಮಂಜುನಾಥ್, ಶಿವಕುಮಾರ್ ವಿ. ರಾವ್ ಹಾಗೂ ಮಡಿಕೇರಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಐತಿಚಂಡ ರಮೇಶ್ ಉತ್ತಪ್ಪ ಅವರನ್ನು ಅಭಿನಂದಿಸಲಾಯಿತು. ಬಳಿಕ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು, ಜೆಎಸ್‌ಎಸ್ ಸಮೂಹ ಸಂಸ್ಥೆಯ ಮುಖ್ಯಸ್ಥ ಶ್ರೀಹರಿ, ಸಂಘದ ಅಧ್ಯಕ್ಷ ಕೆ. ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಸ್ವಾಭಿಮಾನಿ ಒಕ್ಕೂಟದ ಕಚೇರಿ ಉದ್ಘಾಟನೆ; ಡಾ.ಅಂಬೇಡ್ಕರ್ ಜಯಂತಿ

ಮೈಸೂರು, ಮೇ 30– ಮೈಸೂರಿನ ಸರ್ದಾರ್ ವಲ್ಲಭಭಾಯ್ ಪಟೇಲ್ ನಗರ(ಪೊಲೀಸ್ ಬಡಾವಣೆ)ದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಸ್ವಾಭಿಮಾನಿ ಒಕ್ಕೂಟದ ಕಚೇರಿ ಉದ್ಘಾಟನೆ ಹಾಗೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮ ದಿನೋತ್ಸವ ಕಾರ್ಯಕ್ರಮವನ್ನು ಭಾನುವಾರ(ಮೇ 31) ಸಂಜೆ 5.30ಕ್ಕೆ ಆಯೋಜಿಸಲಾಗಿದೆ.

ಟಿ.ನರಸೀಪುರದ ನಳಂದಾ ಬುದ್ಧ ವಿಹಾರದ ಬೋಧಿರತ್ನ ಬಂತೇಜಿ ಅವರ ದಿವ್ಯ ಸಾನಿಧ್ಯದಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಕಚೇರಿ ಉದ್ಘಾಟಿಸಲಿದ್ದಾರೆ. ವೇದಿಕೆ ಕಾರ್ಯಕ್ರಮವನ್ನು ಮುಖಂಡ ಅಹಿಂದ ಜವರಪ್ಪ ಉದ್ಘಾಟಿಸಲಿದ್ದು, ಇದೇ ವೇಳೆ ಹಿರಿಯರನ್ನು ಅಭಿನಂದಿಸಲಾಗುವುದು.

ಕಾರ್ಯಕ್ರಮದಲ್ಲಿ ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಮಹೇಶ್, ರಾಮಚಂದ್ರ, ನಾಡನಹಳ್ಳಿ ಪ್ರಸಾದ್, ಆಲನಹಳ್ಳಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಕೆ.ವಿ.ಶ್ರೀಧರ್, ಒಕ್ಕೂಟದ ಅಧ್ಯಕ್ಷ ಶಿವಸ್ವಾಮಿ ಎಸ್.ಮೂಡ್ನಾಕೂಡು, ಉಪಾಧ್ಯಕ್ಷ, ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಆದ ಜೈ ಶಂಕರ್‌ರವರು, ಖಜಾಂಜಿಯಾದ ಪುಟ್ಟರಾಜುರವರು, ನಿರ್ದೇಶಕರಾದ ವಿನೋದ್‌ರವರು ತಿಳಿಸಿದ್ದು, ಕಾರ್ಯಕ್ರಮದ ನಿರ್ವಹಣೆಯನ್ನು ಒಕ್ಕೂಟದ ಸಂಘಟನಾ ಕಾರ್ಯದರ್ಶಿಯಾದ ಡಾ.ಬಿಪಿನ್ ನಾಗರಾಜ್ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಕೆರೆಗೆ ಈಜಲು ಹೋಗಿದ್ದ ಮೂವರು ಬಾಲಕರು ನೀರುಪಾಲು

ಧಾರವಾಡ: ಕೆರೆಗೆ ಈಜಲು ಹೋಗಿದ್ದ ಮೂವರು ಬಾಲಕರು ನೀರುಪಾಲಾಗಿರುವ ಘಟನೆ ಧಾರವಾಡ ತಾಲೂಕಿನ ಸಿಂಗನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಸುಭಾನಿ ಬಾಬೋಜಿಕೊಪ್ಪ (12), ಮೆಹಬೂಬ ಒಟ್ನಾಳ (16), ಅನ್ವರ್ ಒಟ್ನಾಳ (14) ಸಾವನ್ನಪ್ಪಿದ ಬಾಲಕರು. ಮಧ್ಯಾಹ್ನ ಗ್ರಾಮದ ಪಕ್ಕದಲ್ಲಿ ಇರುವ ಕೆರೆಗೆ ಮೂವರು ಬಾಲಕರು ಈಜಲು ಹೋಗಿದ್ದರು. ಈ ವೇಳೆ ಕೆರೆಯ ಮಧ್ಯಭಾಗದಲ್ಲಿ ಹೋಗಿದ್ದ ಬಾಲಕರು ಈಜಲು ಆಗದೇ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಸದ್ಯ ಮೂವರು ಬಾಲಕರ ಮೃತದೇಹಗಳನ್ನು ನೀರಿನಿಂದ ಹೊರತೆಗೆಯಲಾಗಿದೆ. ಘಟನಾ ಸ್ಥಳದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿದೆ. ಸ್ಥಳಕ್ಕೆ ಗರಗ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.


MAY
31
Happy Birthday
S. Basavaraju
Best Wishes from
Narendra Babu (B.G. Gowdru)

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ:ಮೈಅಪ್ರಾ/ವಿ.ತ–5ಬಿ/2026–27 ದಿನಾಂಕ: 25.05.2026

ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ ವತಿಯಿಂದ ಶ್ರೀ.ಕೆ.ಪುಟ್ಟಸ್ವಾಮಯ್ಯ ರವರಿಗೆ ದಿನಾಂಕ:04.02.1964 ರಂದು ನ್ಯೂ ಲೇಔಟ್, ನಾರ್ಥ್ ಈಸ್ಟ್ ಆಫ್ ಎನ್.ಆರ್.ಮೊಹಲ್ಲಾ ಬಡಾವಣೆಯ ನಿವೇಶನ ಸಂಖ್ಯೆ:133 ಮಂಜೂರಾಗಿದ್ದು, ಅಂದಿನ ಅಧ್ಯಕ್ಷರ ಆದೇಶದ ಮೇರೆಗೆ ರೂ.4800/–ಗಳನ್ನು ಪಾವತಿಸಿಕೊಂಡು ಶ್ರೀಮತಿ ಪ್ರಭಲಾಂಭ ರವರ ಹೆಸರಿಗೆ ವರ್ಗಾಯಿಸಿ, ದಿನಾಂಕ:03.04.1964ರಂದು ಸ್ವಾಧೀನ ಪತ್ರ ನೀಡಲಾಗಿದೆ.

ಶ್ರೀಮತಿ.ಪ್ರಭಲಾಂಭ ರವರು ಶ್ರೀ.ರಫೀಕ್ ಉಜ್ಞಾಮಾನ ರವರ ಪರ ಜಿ.ಪಿ.ಎ. ದಾರರಾದ ಶ್ರೀ.ಕಮುರುಜಿ ಜಮಾನ್ 1ನೇ ಪುಸ್ತಕದ 3701ನೇ ಸಂಪುಟದಲ್ಲಿ ಪುಟದಲ್ಲಿ 145–146ನೇ ಪುಟದಲ್ಲಿ 2961ನೇ ನಂಬರಾಗಿ ದಿನಾಂಕ:27.10.1986 ರಂದು ನೋಂದಾಯಿತ ಶುದ್ಧಕ್ರಯಕ್ಕೆ ನೋಂದಾಯಿಸಿ ಕೊಂಡಿರುತ್ತಾರೆ.

(ಶ್ರೀ.ರಫೀಕ್ ಉಜ್ಞಾಮಾನ ರವರು ಅವರ ಪರವಾಗಿ ಸದರಿ ನಿವೇಶನವನ್ನು ವಿಲೇವಿಸಲು 4ನೇ ಪುಸ್ತಕದ 96ನೇ ಸಂಪುಟದಲ್ಲಿ 44–45ನೇ ಪುಟದಲ್ಲಿ 99ನೇ ನಂಬರಾಗಿ ದಿ:10.04.1976ರಂದು ಶ್ರೀ.ಕಮುರುಜಿ ಜಮಾನ್ ನೊಂದಾಯಿತ ಜಿಪಿಎ ನೀಡಿರುತ್ತಾರೆ.

ಅದರಂತೆ ಶ್ರೀ.ಕಮುರುಜಿ ಜಮಾನ್ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ವರ್ಗಾವಣೆ ಹಾಗೂ ಕ್ರಯಪತ್ರ ನೀಡಬೇಕೆಂದು ಕೋರಿರುತ್ತಾರೆ. ಮೇಲ್ಕಂಡ ನಿವೇಶನಕ್ಕೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಛೇರಿ –5ಬಿ
ಮೈಸೂರು ಅಭಿವೃದ್ಧಿ ಪ್ರಾಧಿಕಾರ
ಮೈಸೂರು

HOUSE FOR SALE

NEWLY CONSTRUCTED
30x40 N/F house
G-Floor-3 BHK 1st and 2nd Floor -3 BHK Duplex house, Adjacent to ring road, Rajiv Nagara 2nd Stage, Mysuru.
Genine buyers contact
BROKERS EXCUSE
Mob: 9845366442

HOUSE FOR SALE

35x50 2BHK
House East Facing
J.P Nagar 2nd Stage
9632877788
Agents Please Excuse

HOUSE FOR SALE

20x30 3BHK E/F
Rishab Nagara, 4th Stage
95 Lack
Negotiable Owner
9845972834

40X60 OLD HOUSE FOR SALE

40x60 Old house for sale at Deepanagar (Gated community) Bogadi attached to Vijaynagar 4th stage
Contact: Mysore Estates Vishwanath Gowda
9590911111

Home Tuition Academy

for Classes From LKG to 5th STD
Certified Tutor
Quality Classes
Best Education
8880030528

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

6th YEAR REMEMBRANCE



Dr. N. KANNAN

10-01-1936 - 31-05-2020

God put His arms around him & whispered, "COME WITH ME."
With tearful eyes, we watched him slowly slip away.
Although we loved him dearly, We could not make him stay,
A Golden Heart stopped beating, Hard Working hands to rest.
God broke our hearts to prove to us, He only takes "THE BEST."

A PERFECT FATHER, AND LOVING HUSBAND, AN OUTSTANDING DOCTOR, A MAGNIFICENT HUMAN BEING , HIS LIFE WAS MARKED BY UTTER SIMPLICITY AND UNCOMPROMISING HONESTY, NEVER STRAYING FROM HIS IDEALS, PRINCIPLES AND ETHICS.

We miss you terribly and you will be in our hearts forever.

Deeply Mourned By

Wife : Romilla Kannan

Children :
Dr. K.Lakshman & Smt. Hemamalini Lakshman
Dr. Praveen Kumar and Smt. Bhavani Praveen Kumar
Smt. Shankari Janardhan & Sri M.N. Janardhan

Grand children : Amreetha, Namitha , Abhijith, Diviya, Deepthi and Lithin

ARKA MAHAVIDYALAYA

Affiliation No: 242389
Arkadhama Gadige Main Road, Madahalli, Mysore
Education for Knowledge, Character & Success

ADMISSION OPEN FOR 2026-27

From KG to 10th Standard
(English Medium)

- Experienced & Qualified Teachers
- Transportation Facilities Available
- Individual attention for Every Student
- Free Lunch, Uniform & Books are Provided for Students
- Free Uniform, Reading and Writing Books
- Yoga for Student's well-being
- Safe & Secure Environment

6362854861
9606954534
9606954535



WANTED MICROBIOLOGISTS

Agri Industry in Mysore require **Microbiologist** having Degree in Microbiology or Bio-technology with 5 years experience and age 30 years minimum and with good computer knowledge. Attractive Salary and Perks. Post your bio-data to Mail : **ganeshcrc78@gmail.com** or WhatsApp : **98451-28193**

PLUG & PLAY OFFICE SPACE FOR RENT

Prime Main Road Location at Kuvempunagar, Mysore

- Fully Furnished
- 26 Seats
- Boss Cabin
- Conference Room
- Pantry
- Reception
- Washroom

Ideal for Consultants, Finance Companies, Architects, Training Institutes and Corporate Offices.
Rent: ₹35,000/Month Advance: 6 Months.
Available From: 10th June 2026
Billion Dreams Avenue,
M26, 2nd Floor, Beside Megha Medicals, Kuvempunagar, Mysore 570023. Call: **9035982322.**

WANTED TEACHERS

ENGLISH, SCIENCE , MATHS & SOCIAL
B.Ed, Freshers are invited, Govt., Scale Guest Teachers
Salary Assured
A qualified teacher with fluency in English is a must.
WALK IN WITH ORIGINALS
JNANA GANGOTHRI CONVENT
Rajendra Nagara Mysore 570007. Mobile : 91139 80741

TTL COLLEGE OF BUSINESS MANAGEMENT — MYSORE

EXCLUSIVE COMMERCE CAMPUS

ADMISSION OPEN

FOR PUC: PUC COMMERCE — 2026 —
FOR DEGREE COLLEGE: BBA / B.COM / M.COM
CAMPUS IT TRAINING: TALLY | GST | ERP
COURSES OFFERED BY SAINIK ACADEMY
CONTACT: +91 9900557556 / +91 8884126519 / +91 9740003619 / +91 9480363540
AFFORDABLE FEES • QUALITY EDUCATION • BRIGHT FUTURE

PUBLIC NOTICE

Notice is hereby given that **MRS. ASIYA BEGUM,** wife of Late K. Mohamed Iqbal Shariff @ Iqbal Shariff, is desirous to sell the under mentioned property to my client/s and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at **DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE– 570 002,** within 10 (Ten) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Home Property Door No. 89, measuring East to West: 63 Feet+84 Feet / 2 Feet and North to South: 40.00 Feet, total Site area measuring 2940 Square Feet (273.134820 Square Meters), having ground floor measuring139.3545 Square Meters and First Floor measuring 83.6127, constructed RCC Roof, situated at Bannimantap C Layout, Mandi Mohalla, Mysore, Ward No.17 and bounded on East: Property No. 90, West: Road, North: Road and South: Property bearing No.89/1, with building thereon.

Sd/- Dhirendra Kumar R. Mehta
Advocate
KEY-ANS LAW SOLUTIONS

Date: 30.05.2026
Place: Mysore

ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು

ನಂ.293, 'ಡಿ' ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು.
ದೂರವಾಣಿ/ಕೇಂದ್ರ ಕಛೇರಿ: 0821–2424246 ದೂರವಾಣಿ/ಶಾಖಾ ಕಛೇರಿ: 08227–260443

ಮಾನ್ಯ ಗುತ್ತಿಗೆದಾರ ಸದಸ್ಯರುಗಳ ಗಮನಕ್ಕೆ

ವಿಷಯ: 2026 ಮಾರ್ಚ್ ಹಾಗೂ ಏಪ್ರಿಲ್ ತಿಂಗಳುಗಳಲ್ಲಿ ನಡೆದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಅತಿ ಹೆಚ್ಚು ಅಂಕ ಪಡೆದಿರುವ ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು. ಹಾಗೂ ಟಿ. ನರಸೀಪುರ ಶಾಖೆಯ ಗುತ್ತಿಗೆದಾರರ ಸದಸ್ಯರುಗಳ ತಲಾ 20 ಜನ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ 06.05.2026 ರಂದು ನಡೆದ ಸಂಘದ ಆಡಳಿತ ಮಂಡಳಿ ಸಭೆಯ ತೀರ್ಮಾನ.

ಮೇಲಿನ ವಿಷಯದಲ್ಲಿ ತಿಳಿಸಿರುವಂತೆ ಪ್ರತಿಭಾ ಪುರಸ್ಕಾರವನ್ನು **ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಕೇಂದ್ರ ಕಛೇರಿ, ಮೈಸೂರು.** ಹಾಗೂ ಶಾಖಾ ಕಛೇರಿ, ಟಿ. ನರಸೀಪುರದಲ್ಲಿ ಸದಸ್ಯರಾಗಿರುವ ಗುತ್ತಿಗೆದಾರರ ಮಕ್ಕಳಿಗೆ ಮಾತ್ರ ಪ್ರತಿಭಾ ಪುರಸ್ಕಾರ ನೀಡಲು ಆಡಳಿತ ಮಂಡಳಿಯು ತೀರ್ಮಾನಿಸಿರುವುದನ್ನು ತಮಗೆ ತಿಳಿಸಲು ಹರ್ಷಿಸುತ್ತೇವೆ.

ಆದ್ದರಿಂದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಪಡೆದು ತೇರ್ಗಡೆಯಾಗಿರುವ ಮಕ್ಕಳ ದೃಢೀಕೃತ ಅಂಕಪಟ್ಟಿ ನಕಲು, ಶಾಲೆಯ ವಿಳಾಸ, ಮಕ್ಕಳ ಇತ್ತೀಚಿನ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ (PHOTO) ಮತ್ತು ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ಸದಸ್ಯತ್ವ ಪಡೆದಿರುವ ಬಗ್ಗೆ ಗುರುತಿನ ಚೀಟಿಯ ಜೆರಾಕ್ಸ್ ಪ್ರತಿಯನ್ನು ದಿನಾಂಕ : **30.06.2026** ರ ಮಂಗಳವಾರ ಸಾಯಂಕಾಲ **5.30** ಗಂಟೆಯೊಳಗೆ ಸೊಸೈಟಿಗೆ ಅಂಚೆ ಮೂಲಕವಾಗಲಿ ಅಥವಾ ಖುದ್ದಾಗಿ ತಲುಪಿಸಲು ಈ ಮೂಲಕ ಕೋರಲಾಗಿದೆ.

ವಂದನೆಗಳೊಂದಿಗೆ.

ಸಹಿ/– (ಮಹಾಲಿಂಗಂ),
ಅಧ್ಯಕ್ಷರು

ಸೂಚನೆ : ಮಾನ್ಯ ಸದಸ್ಯರುಗಳ ವಿಳಾಸ, ಮೊಬೈಲ್ ದೂರವಾಣಿ ಸಂಖ್ಯೆಗಳು ಬದಲಾವಣೆಯಾಗಿದ್ದಲ್ಲಿ ತಮ್ಮ ಚಾಲ್ತಿ / ಉಳಿತಾಯ ಖಾತೆಗಳಿಗೆ ನಮೂದಿಸಿಕೊಳ್ಳತಕ್ಕದ್ದು.